ಅಧ್ಯಕ್ಷರು: ಎಲ್ಲಾ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸಲಾಯಿತು.

3. ಪ್ರಕಟಣೆ

ಅಧ್ಯಕ್ಷರು: ಒಂದು ಪ್ರಕಟಣೆ: ಪ್ರಶ್ನೋತ್ತರ ವೇಳೆಯಲ್ಲಿ ಶಾಸಕರು ಉಪಪ್ರಶ್ನೆಗಳನ್ನು ಕೇಳುವ ವೇಳೆಗೆ ಮಾನ್ಯ ಸಚಿವರು ಉತ್ತರವನ್ನು ಕೊಡುವ ವೇಳೆಯಲ್ಲಿ ಸಮಯವನ್ನು ಸ್ವಲ್ಪ ಉಳಿಸಿಕೊಟ್ಟರೆ ನನಗೆ ಅನುಕೂಲವಾಗುತ್ತದೆ. ಆಗ ನಾನು ಒಂದು ಗಂಟೆಯೊಳಗೆ ಪ್ರಶ್ನೋತ್ತರ ಅವಧಿಯನ್ನು ಮುಗಿಸಬಹುದು.

11.30

4. ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ

(ಬೇಡಿಕೆ ಸಂಖ್ಯೆ 28, 29, 52 ಮತ್ತು 53)

\+ ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಮೊಟ್ಟಮೊದಲನೆಯದಾಗಿ ಮೂರು ವರ್ಷಗಳ ನಂತರ ನನಗೆ ಉತ್ತರ ಕೊಡುವಂತಹ ಅವಕಾಶವನ್ನು ನನಗೆ ಒದಗಿಸಿಕೊಟ್ಟ ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಕಳೆದ ಮೂರು ವರ್ಷಗಳಿಂದ ಇಂತಹ ಚರ್ಚೆ ಮತ್ತು ಅದಕ್ಕೆ ಉತ್ತರ ಕೊಡುವ ನಿಟ್ಟಿನಲ್ಲಿ ಬೆಳಕನ್ನು ಚೆಲ್ಲುವಂತಹ ಪ್ರಯತ್ನ ನಡೆದಿರಲಿಲ್ಲ. ಆದರೆ ಈ ವರ್ಷ ನಾಲ್ಕು ಶಾಸಕರುಗಳಾದ ಡಿ.ಆರ್.ಪಾಟೀಲ್, ಅರಗಜ್ಞಾನೇಂದ್ರ, ಶ್ರೀಮತಿ ಪ್ರಮೀಳಾ ನೇಸರ್ಗಿ ಮತ್ತು ಕೆ.ಎಸ್.ಪುಟ್ಟಣ್ಣಯ್ಯನವರು ಈ ಇಲಾಖೆಯ ಬಗ್ಗೆ ಚೆನ್ನಾಗಿ ಬೆಳಕನ್ನು ಚೆಲ್ಲುವಂತೆ ಮಾತನಾಡಿದ್ದಾರೆ. ಆದರೆ ಶಿವಪ್ಪನವರು ಏನೋ ಮಾತನಾಡಲಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಈ ಕಡೆ ಅವರು ಕುಳಿತಿದ್ದರೆ ಮಾತನಾಡುತ್ತಿದ್ದರು. ಆದರೆ ಈಗ ಅವರು ಸರ್ಕಾರದ ಜೊತೆ ಇರುವುದರಿಂದ ಅದರಲ್ಲೂ ಅವರ ಜೊತೆ ಗರಿಷ್ಟ ಸಂಬಂಧ ಇದ್ದಮೇಲೆ ಅವರು ಹೇಗೆ ಮಾತನಾಡುತ್ತಾರೆ? ಅವರು ಏನು ಇದ್ದರೂ ಉತ್ತರ ಕೊಡುವುದಕ್ಕೆ ಅವಕಾಶವಾಗುವಂತಹ ಸ್ಥಾನದ ಚಾನ್ಸ್‌ಗೆ ಕಾಯುತ್ತಿದ್ದಾರೆ. ಚರ್ಚೆಗೆ ಅಲ್ಲ.

ಅಧ್ಯಕ್ಷರು: ಮಾನ್ಯ ಶಿವಪ್ಪನವರು ಮತ್ತು ಮಾಧುಸ್ವಾಮಿಯವರು ಇಬ್ಬರು ಮಧ್ಯದಲ್ಲಿದ್ದಾರೆ. ಅವರು ಈಕ್ವಿಟಿ ಸೆಂಟರ್.

ಶ್ರೀ ಎಸ್.ಎಸ್.ಪಾಟೀಲ್: ಅವರು ಮಧ್ಯದಲ್ಲಿ ಕುಳಿತರು. ಬ್ಯಾಲೆನ್ಸ್‌ನಲ್ಲಿ ಈ ಕಡೆ

ಇದ್ದಾರೆ. ನಾಲ್ಕು ಜನ ಶಾಸಕರು ಈ ಇಲಾಖೆಯ ಮೇಲೆ ಹೆಚ್ಚು ಬೆಳಕನ್ನು ಚೆಲ್ಲಿದ್ದಾರೆ. ಹಾಗೆಯೇ ಟೀಕೆಟಿಪ್ಪಣಿಗಳನ್ನು ಮಾಡಿದ್ದಾರೆ ಮತ್ತು ಕೆಲವು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಬಹುಶಃ ಡಿ.ಆರ್.ಪಾಟೀಲರವರು ಹೇಳಿದಂತೆ 1844ರಲ್ಲಿ ರಾಕ್‌ಟೈಲ್ ಎನ್ನುವವರು ಇದನ್ನು ಇಂಗ್ಲೆಂಡಿನಲ್ಲಿ ಪ್ರಾರಂಭ ಮಾಡುವ ಮೂಲಕ ಈ ಜಗತ್ತಿನಲ್ಲೆಲ್ಲಾ ಇದು ಪ್ರಾರಂಭಗೊಂಡು ಕರ್ನಾಟಕದಲ್ಲಿ 1905ರಲ್ಲಿ ಹೊಸ ಗದಗ್ ಜಿಲ್ಲೆಯ ಕಣ್ಣಿನಾಳ್ ಗ್ರಾಮದಲ್ಲಿ ಸಿದ್ದನ್‌ಗೌಡ ಪಾಟೀಲ್ ಎನ್ನುವವರು ಪತ್ತಿನ ಸಹಕಾರ ಸಂಘವನ್ನು ಪ್ರಾರಂಭ ಮಾಡುವ ಮೂಲಕ ಈ ರಾಷ್ಟ್ರದಲ್ಲಿ ಸಹಕಾರಿ ಕ್ಷೇತ್ರಕ್ಕೆ ನಾಂದಿಯನ್ನು ಹಾಡಿದರು. ಬಹುಶಃ ಪಾಟೀಲರು ಮಾತನಾಡುವಾಗ ಯಾವ ಒಂದು ದೃಷ್ಟಿಯಿಂದ ಹೇಳಿದರೋ ನನಗೆ ಗೊತ್ತಿಲ್ಲ. ಅದು ಕುರುಬರು ಎನ್ನುವ ಕಾರಣಕ್ಕೆ ಅವರು ಮೊದಲು ಹಾಗೆ ಮಾಡಿದರು. ನಮ್ಮ ಕಡೆ ಕುರುಬರು ಬೋಣಿ ಮಾಡಬೇಕು ಎಂದು ಹೇಳುತ್ತಾರೆ. ಕುರುಬರು ಮೊದಲಿಗೆ ಮಾಡಿದರೆ ಒಳ್ಳೆಯದಾಗುತ್ತದೆ ಎನ್ನುವ ದೃಷ್ಟಿಯಿಂದ ಮಾಡಿದ್ದಾರೆ. ಅವರು ಏನೋ ಊಹೆಯನ್ನು ಮಾಡಿದರು, ತದನಂತರ ಕುಲಕರ್ಣಿಯವರು ಮಾಡಿದರು, ಹುಲಿಕೋಟೆಯಲ್ಲಿ ಗೌಡರು ಮಾಡಿದರೆಂದು ಊಹೆ ಮಾಡಿದರು. ನಾನು ಆ ಭಾವನೆಯಿಂದ ಬಹುಶಃ ಅವರು ಒಬ್ಬ ಕುರುಬಗೌಡರಾದರೂ ಕೂಡ ಅವರಲ್ಲಿ ಆ ಪ್ರಗತಿಯ ವಿಚಾರ ಬಂತು ಎನ್ನುವ ದೃಷ್ಟಿಯಿಂದ ಅವರು ಮಾಡಿದರೂ ಅವರ ಮಾರ್ಗದರ್ಶನದಲ್ಲಿ ಬೇರೆಯವರೂ ಸಹ ಮಾಡಿದರೆಂದು ನಾನು ತಿಳಿದುಕೊಂಡಿದ್ದೇನೆ. ಬಹುಶಃ ಕುರುಬರು ಎನ್ನುವ ಕಾರಣಕ್ಕಾಗಿ ಅವರು ಆ ಕಾಲದಲ್ಲಿ ಬಿಟ್ಟುಕೊಟ್ಟಿಲ್ಲ. ಅವರಲ್ಲಿ ಮೊದಲೇ ಆ ಭಾವನೆ ಬಂತು. ಈ ಸಹಕಾರಿ ಕ್ಷೇತ್ರದಲ್ಲಿ ಬೆಳಕನ್ನು ಚೆಲ್ಲಬೇಕು ಈ ಕಲ್ಪನೆ ಅವರಲ್ಲಿ ಬಂದ ಮೇಲೆ ಉಳಿದ ಗೌಡರು, ಶ್ಯಾನುಭೋಗರು ಮಾಡಿರಬಹುದು. ಈ ಕಾರಣದಿಂದ ಅದು ಅಷ್ಟು ಸರಿಯಲ್ಲ ಎನ್ನುವ ಭಾವನೆಯನ್ನು ನಾನು ಹೇಳುತ್ತಾ ಇದ್ದೇನೆ. ರಾಜ್ಯದಲ್ಲಿ ಈ ಒಂದು ಚಳುವಳಿ ಬಂದ ಮೇಲೆ ಇವತ್ತಿನ ದಿವಸ 26 ಸಾವಿರ ಸಹಕಾರ ಸಂಘಗಳು ವಿವಿಧ ಹಂತದಲ್ಲಿ ಕೆಲಸವನ್ನು ಮಾಡುತ್ತಿದೆ. ಬಹುಶಃ ಒಂದು ಗಾದೆ ಮಾತನ್ನು ಹೇಳಬೇಕಾಗುತ್ತದೆ. ಆಡು ಮುಟ್ಟದ ಗಿಡವಿಲ್ಲ ಹಾಗೆಯೇ ಸಹಕಾರಿ ಕ್ಷೇತ್ರ ವ್ಯಾಪಿಸಿರದಂತಹ ಯಾವ ಕ್ಷೇತ್ರವು ಉಳಿದಿಲ್ಲ. ಮಾನವನಿಗೂ ಮತ್ತು ಪಶುಗಳಿಗೂ ಕೂಡ ಸಕಲ ಜೀವಾತ್ಮಗಳಿಗೆ ಲೇಸನ್ನು ಬಯಸುವಂತಹ ಕೂಡಲಸಂಗಮ ಶರಣರ ಕುಲಜರು ಎಂದು ಶರಣರು ಹೇಳುತ್ತಾರೆ. ಅದೇ ಮಾದರಿಯಲ್ಲಿ ನಮ್ಮ ಎಲ್ಲಾ ಸಹಕಾರಿ ಕ್ಷೇತ್ರಗಳಲ್ಲಿ ಆಗಬೇಕು. ಈ ರೀತಿ ಜನಗಳಿಗೆ ಸಹಾಯ ಮಾಡುವಂತಹ ವ್ಯವಸ್ಥೆ ನಮ್ಮ ಈ ಸಹಕಾರ ಸಂಘದಲ್ಲಿ ಇದೆ. ಇವತ್ತು ನಮ್ಮ ರಾಜ್ಯದ ಒಂದು ಚಿತ್ರವನ್ನು ತಮಗೆ ಕೊಡಬೇಕು. ಬಂಡವಾಳ ಸುಮಾರು 725 ಕೋಟಿ ರೂ. ಇದೆ. ಸರ್ಕಾರದ ಪರವಾಗಿ ನಾವು 182 ಕೋಟಿ ರೂ.ಗಳನ್ನು ಹಾಕಿದ್ದೇವೆ. ಇವತ್ತು ಈ ಒಂದು ಕೃಷಿ ಕ್ಷೇತ್ರದಲ್ಲಿ ಮೊನ್ನೆ ಡಿ.ಆರ್.ಪಾಟೀಲರು ಮಾಡುವ ಕೇವಲ 10ರಷ್ಟನ್ನು ನಾವು ರೈತರಿಗೆ ಕೊಡುತ್ತಾ ಇದ್ದೇವೆ. ಇಲ್ಲಿ ಎಲ್ಲಾ ರೈತರನ್ನು ಅದರಡಿಯಲ್ಲಿ ತರಬೇಕು.

ನಿಜವಾಗಿಯೂ ಆ ಮಾತನ್ನು ನಾವು ಒಪ್ಪಬೇಕಾಗುತ್ತದೆ. ಆದರೂ ಕೂಡ ಕಳೆದ 3 ವರ್ಷಗಳ ಪ್ರಯತ್ನದಿಂದ ಇವತ್ತು ಈ ಒಂದು ಕೃಷಿ ಕ್ಷೇತ್ರದಲ್ಲಿ ಕೊಡತಕ್ಕಂತಹ ಸಾಲದಲ್ಲಿ ಅರ್ಧದಷ್ಟು ಸಾಲದ ಹಣವನ್ನು ನಾವೇ ಕೊಡುತ್ತಾ ಇದ್ದೇವೆ. ಇನ್ನು ರೈತರ ಬಗ್ಗೆ ನಾನು ಹೇಳಬೇಕಾದರೆ ಸುಮಾರು 14 ಲಕ್ಷ ಜನ ರೈತರಿಗೆ ನಾವು ಸಾಲವನ್ನು ಕೊಟ್ಟಿದ್ದೇವೆ. ಸುಮಾರು 55 ಲಕ್ಷ ಜನ ರೈತರಲ್ಲಿ 14 ಲಕ್ಷ ರೈತರಿಗೆ ಇವತ್ತು ನಾವು ಸಾಲವನ್ನು ಕೊಟ್ಟಿದ್ದೇವೆ. ತಾವು ಹೇಳಿದ ಹಾಗೆ ಅದು 3 ವರ್ಷದಿಂದ 10 ಪರ್ಸೆಂಟ್ ಇತ್ತು. ಸುಮಾರು 25ರಿಂದ 28 ಪರ್ಸೆಂಟ್ ರೈತರಿಗೆ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದೇವೆ. ಈ ಮುಖಾಂತರವಾಗಿ ನಾವು ಹೆಚ್ಚು ರೈತರಿಗೆ ಸಾಲವನ್ನು ಕೊಡುತ್ತಿದ್ದೇವೆ. 3 ವರ್ಷಗಳ ಹಿಂದೆ ಕೇವಲ 200 ಕೋಟಿ ರೂ. ಸಾಲ ಎಂದು ಇದ್ದರೆ ಹೋದ ವರ್ಷ ಕಳೆದ ಮಾರ್ಚ್‌ಗೆ ಈಗಾಗಲೇ ನಾವು 700 ಕೋಟಿ ರೂ. ಸಾಲವನ್ನು ಹಂಚಿದ್ದೇವೆ. ಈ ಒಂದು ದೃಷ್ಟಿಯಿಂದ ಈ ಕೃಷಿಕ್ಷೇತ್ರದಲ್ಲಿ ಮಹತ್ತರವಾದ ಸಾಧನೆಯನ್ನು ಮಾಡಿದ್ದೇವೆಂದು ಹೇಳುತ್ತಿದ್ದೇನೆ. ಸುಮಾರು 4 ಕೋಟಿ ರೂ.ಗಳನ್ನು ನಮ್ಮ ರಾಜ್ಯದ ರೈತರ ಅವಶ್ಯಕತೆಗಳಿಗೆ ನಾವು ಒದಗಿಸಿಕೊಡಬೇಕಾಗುತ್ತದೆ. ಈ ಒಂದು ಹಿನ್ನಲೆಯಲ್ಲಿ, ಆ ದಿಸೆಯಲ್ಲಿ ನಾವು ಮುನ್ನುಗ್ಗುತ್ತಿದ್ದೇವೆ. ಬಹುಶಃ ಕೃಷಿ ಕ್ಷೇತ್ರದಲ್ಲಿ ನಾವು ಬಂದ ಮೇಲೆ ವ್ಯಾಪಾರಾಭಿವೃದ್ಧಿಯನ್ನು ತೆಗೆದುಕೊಂಡು ನಮ್ಮ ರಾಜ್ಯದಲ್ಲಿರತಕ್ಕಂತಹ ಎಲ್ಲಾ ಕೃಷಿ ಕ್ಷೇತ್ರದ ಪತ್ತಿನ ವ್ಯವಸಾಯ ಸಹಕಾರ ಸಂಘಗಳನ್ನು ವ್ಯಾಪಾರದ ದೃಷ್ಟಿಯಿಂದ ತೆಗೆದುಕೊಂಡ ಮೇಲೆ ಪ್ರತಿ ಸಂಘಗಳಲ್ಲಿ 50 ಸಾವಿರ ರೂ.ಗಳನ್ನು ನಾವು ಅನುದಾನವಾಗಿ ಕೊಟ್ಟಿದ್ದೇವೆ. ನಾವು ಸರ್ಕಾರದ ಮೂಲಕ, ಅಪೆಕ್ಸ್ ಬ್ಯಾಂಕ್‌ನ ಮೂಲಕ ಆಯಾ ಜಿಲ್ಲಾ ಬ್ಯಾಂಕುಗಳ ಮೂಲಕ ಸುಮಾರು 2890 ಸೊಸೈಟಿಗಳಿಗೆ ಇವತ್ತು ನಾವು ಅನುದಾನದ ರೂಪದಲ್ಲಿ ಸಾಲವನ್ನು ಕೊಟ್ಟಿದ್ದೇವೆ. ಈ ಒಂದು 50 ವರ್ಷದ ಇತಿಹಾಸದಲ್ಲಿ 16 ಕೋಟಿ ರೂಪಾಯಿಯನ್ನು ಮೊಟ್ಟಮೊದಲನೆಯ ಬಾರಿಗೆ ಈ ಸಹಕಾರಿ ಸಂಘಗಳನ್ನು ಬ್ಯಾಂಕುಗಳನ್ನಾಗಿ ಪರಿವರ್ತನೆ ಮಾಡಬೇಕೆನ್ನುವ ದೃಷ್ಟಿಯಿಂದ ಕೊಟ್ಟಿದ್ದೇವೆ. ಈಗ ಏನು ವ್ಯಾಪಾರದ ದೃಷ್ಟಿಯಿಂದ ತೆಗೆದುಕೊಂಡಿದ್ದೇವೆ. ಅವೆಲ್ಲವನ್ನೂ ಬ್ಯಾಂಕುಗಳನ್ನಾಗಿ ಪರಿವರ್ತನೆ ಮಾಡಿದ್ದೇವೆ. ಅವುಗಳು ಕೇವಲ ಸಹಕಾರಿ ಸಂಘಗಳಾಗಿ ಕೆಲಸ ಮಾಡಬಾರದು. ಅವುಗಳು ಬ್ಯಾಂಕುಗಳಾಗಿ ಕೆಲಸವನ್ನು ಮಾಡಬೇಕು. ಅದೆಲ್ಲವನ್ನೂ ಬ್ಯಾಂಕಿಂಗ್ ಬಿಸಿನೆಸ್ ಎಂದು ಮಾಡುತ್ತಾ ಇದ್ದೇವೆ. ಈಗಾಗಲೇ ನಾವು 300 ಕೋಟಿ ರೂ.ಗಳನ್ನು ಡಿಪಾಸಿಟ್ ಮಾಡಿದ್ದೇವೆ. ಬಹುಶಃ ನಮ್ಮ ಜ್ಞಾನೇಂದ್ರರವರೂ ಸಹ ಮಾತನಾಡಿದರು. ಪಾಟೀಲರು ಮತ್ತು ಪುಟ್ಟಣ್ಣಯ್ಯನವರೂ ಸಹ ಮಾತನಾಡಿದರು. ರೈತರಿಗೆ ಕೃಷಿಸಾಲವನ್ನು ಕೊಟ್ಟಿದ್ದಿರಲ್ಲಾ ಬೇರೆ ರೀತಿಯ ಸಾಲಗಳನ್ನು ಕೊಡಬೇಕೆಂದು ಮಾನ್ಯ ಪುಟ್ಟಣ್ಣಯ್ಯನವರು ಬಹಳ ಒಳ್ಳೆಯ ಸಲಹೆಯನ್ನು ನೀಡಿದರು. ಆ ದೃಷ್ಟಿಯಿಂದ ನಾವು ಬ್ಯಾಂಕಿಂಗ್ ಬಿಸಿನೆಸ್ ಪ್ರಾರಂಭ ಮಾಡಿದ್ದೇವೆ. ಅರಗಜ್ಞಾನೇಂದ್ರರವರು ಸಹ ಇಲ್ಲೇ ಇದ್ದಾರೆ. ಶಿವಮೊಗ್ಗ ಜಿಲ್ಲೆಯ ಟಿ.ಬೀರನಹಳ್ಳಿಯಲ್ಲಿ ಒಂದು ಸಂಘವಿದೆ. ತಮ್ಮ

ತಾಲ್ಲೂಕಿನಲ್ಲಿಯೂ ಸಹ ಮಾಡಿದ್ದೇವೆ. ನಾನು ಅಧಿಕಾರಕ್ಕೆ ಬರುವ ಮೊದಲೇ ಆ ಸಂಘಕ್ಕೆ ನಾವು ಬಡ್ಡಿಯನ್ನು ಮನ್ನಾ ಮಾಡಿದ್ದೇವೆ. ಆ ಸಂಘವು ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಸೀಡ್ ಆಗಿತ್ತು. ಅವರೆಲ್ಲರೂ ರೈತರು ಸಾಲವನ್ನು ತೀರಿಸಿದರು. ಅವರು ಕೊಟ್ಟ ಸಾಲವನ್ನು ನಿಗಧಿಯಾದ ಅವಧಿಯೊಳಗೆ ಕೊಡುವುದಿಲ್ಲ. ಯಾಕೆಂದರೆ ಒಂದು ಘೋಷಣೆಯನ್ನು ಮಾಡಿದರು, ಕೊಟ್ಟ ಸಾಲವನ್ನು ಅವರು ಕೊಡುವುದಿಲ್ಲ, ರೈತಸಂಘದವರು ಇದರೊಳಗೆ ಇದ್ದಾರೆಂದು ತಿಳಿದುಕೊಂಡು ಅವರು ಸಾಲವನ್ನು ಹಿಂತಿರುಗಿಸಲ್ಲ. ಆಗ ನಾನು ಅಲ್ಲಿಗೆ ಹೋದೆ. ಇದು ಸಹಕಾರ ಕ್ಷೇತ್ರವಾಗಿದ್ದರಿಂದ ಇದನ್ನು ಡಿಸಿಸಿ ಬ್ಯಾಂಕ್‌ನವರು ಸೀಡ್ ಮಾಡಿಕೊಳ್ಳಲೇಬೇಕು ಎಂದು ಅವರಿಗೆಲ್ಲ ಹೇಳಿ ಅದನ್ನು ಡಿಸಿಸಿ ಬ್ಯಾಂಕ್‌ನವರಿಗೆ ಕೊಡಿಸಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸಾಲವನ್ನು ಮನ್ನಾ ಮಾಡಿ ಎನ್ನುವ ಉದ್ದೇಶ ಒಂದು ವೈಜ್ಞಾನಿಕ ಬೆಲೆಯ ನೀತಿಯಿಂದ ರೈತರಿಗೆ ಯಾವುದೇ ಮಾರುಕಟ್ಟೆಯ ವ್ಯವಸ್ಥೆಯಿಂದ, ವೈಜ್ಞಾನಿಕ ಬೆಲೆಯ ನೀತಿ ಸೃಷ್ಟಿ ಮಾಡುವವರಿಗೂ ನಾವು ಸಾಲವನ್ನು ಕೊಡಬಾರದು ಎಂದು ಹೇಳಿದ್ದೇವೆಯೇ ಹೊರತು ಸಹಕಾರಿ ಕ್ಷೇತ್ರವನ್ನು ನಾಶಮಾಡಬೇಕು, ಸಾಲ ಕೊಡಬಾರದು ಎಂದಲ್ಲ. ರೈತರಿಗೆ ಮೋಸವಾಗತಕ್ಕಂತಹ ಒಂದು ವಿಧಾನವನ್ನು ನೀವು ತಡೆಯುವುದರಲ್ಲಿ ವಿಫಲರಾಗಿದ್ದೀರಿ ಎನ್ನುವ ವಿಚಾರದ ಮೇಲೆ ಹೇಳಿದ್ದೇವೆ. ನಾವು ದುರುದ್ದೇಶದಿಂದ ಸಾಲ ಮನ್ನಾ ಮಾಡಿ ಎಂದು ಹೇಳಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಹೀಗಾಗಿ ಅವರೆಲ್ಲರೂ ಅಲ್ಲಿ ಇದ್ದರು. ಆಡಳಿತ ಮಂಡಳಿಯಲ್ಲಿ ಸಂಪೂರ್ಣವಾಗಿ ಅವರೇ ಇದ್ದರು. ಹೀಗಾಗಿ ಅವರಿಗೆ ಸಾಲವನ್ನು ಕೊಡುವುದನ್ನು ನಿಲ್ಲಿಸಿದ್ದರು. ಮುಂದೆ ನಾವು ಅವರೆಲ್ಲರನ್ನೂ ಕರೆಸಿದೆವು. ನಾವು ಅದೇ ವರ್ಷ ಆ ಸಂಘಕ್ಕೆ 20 ಲಕ್ಷ ರೂಪಾಯಿ ಸಾಲವನ್ನು ಕೊಟ್ಟಿದ್ದೇವೆ. ಆ ಸಂಘದವರು ಸಾಲವನ್ನು 100ಕ್ಕೆ 100ರಷ್ಟು ವಸೂಲಿಯನ್ನು ಮಾಡಿದ್ದಾರೆ. ನಾನು ಹೋಗಿದ್ದಾಗ ಅವರು ನನಗೆ ಹೇಳಿದರು. ಇಲ್ಲ ನಾವು ಬಹಳ ತಪ್ಪು ಮಾಡುತ್ತಾ ಇದ್ದೇವೆ. ಅವರಿಗೆ ಸಾಲವನ್ನು ತೀರಿಸಬೇಕೆನ್ನುವ ಭಾವನೆಯೂ ಅವರಲ್ಲಿ ಬಂದು ಇವತ್ತು ಆ ಸೊಸೈಟಿ ಮಾದರಿಯ ಸೊಸೈಟಿಯಾಗಿದೆ. ಅವರೆಲ್ಲರೂ ಇವತ್ತಿಗೂ ಹೇಳುತ್ತಾ ಇದ್ದಾರೆ. ಆ ಸೊಸೈಟಿಯನ್ನು ವ್ಯಾಪಾರಾಭಿವೃದ್ಧಿಯನ್ನಾಗಿ ತೆಗೆದುಕೊಂಡ ಮೇಲೆ ಅಲ್ಲಿ ಸುಮಾರು 30ರಿಂದ 40 ಲಕ್ಷ ರೂ.ಗಳನ್ನು ಡಿಪಾಸಿಟ್ ಮಾಡಿದ್ದಾರೆ. ಇವತ್ತು ಆ ಸೊಸೈಟಿಯಲ್ಲಿ ಎಲ್ಲಾ ಸಾಲಗಳು ಸಿಗುವಂತಹ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಅವರಿಗೆ ಅವಶ್ಯಕತೆಗೆ ಎಲ್ಲಾ ಸಿಗಬೇಕೆನ್ನುವ ದೃಷ್ಟಿಯಿಂದ, ಬಹುಶಃ ನಮ್ಮ ಪಾಟೀಲರು ಈ ಸಂದರ್ಭದಲ್ಲಿ ಹೇಳಬೇಕೆಂದರೆ ಕಡಿನಾಳ್ ಸೊಸೈಟಿಯೂ ಮೊದಲು ಮುಚ್ಚಿಹೋಗುವಂತಹ ಸ್ಥಿತಿ ಬಂದಿತ್ತು. ಇದು ತಮಗೂ ಗೊತ್ತಿದೆ. ಅದನ್ನು ಲಿಕ್ವಿಡೇಟ್ ಮಾಡಬೇಕೆನ್ನುವ ಸ್ಥಿತಿಗೆ ಅದು ಬಂದಿದೆ. ಇವತ್ತಿಗೆ ವ್ಯಾಪಾರಾಭಿವೃದ್ಧಿಗೆ ತೆಗೆದುಕೊಂಡ ಮೇಲೆ ಬಹುಶಃ ಅದನ್ನು ರಾಷ್ಟ್ರದಲ್ಲಿ ಮಾದರಿ

ಸೊಸೈಟಿಯನ್ನಾಗಿ ಮಾಡಬೇಕೆನ್ನುವ ದೃಷ್ಟಿಯಿಂದ ನಾವು ಅವರೂ ಕೂಡ ತೀರ್ಮಾನ ಮಾಡಿದ್ದೇವೆ. ಆ ದಿಕ್ಕಿನಲ್ಲಿ ನಾವು ಅವರಿಗೆ ಸಹಾಯವನ್ನು ಮಾಡುತ್ತಿದ್ದೇವೆ. ಇವತ್ತು ಆ ಸೊಸೈಟಿ ಡಿಪಾಸಿಟ್ ಮಾಡುವುದರ ಜೊತೆಗೆ ಒಂದು ದೊಡ್ಡ ಮಾರ್ಕೆಟ್ ಆಗಿ ಕಾಣುತ್ತದೆ. ಇಂಥ ಹಲವಾರು ಸಂಘಗಳು ನಿಮ್ಮಲ್ಲಿ ಇದೆ. ನಾವು ವಸೂಲಾತಿಯಲ್ಲೂ ಸಹ ಪ್ರಗತಿಯನ್ನು ಸಾಧಿಸಿದ್ದೇವೆ. ಬಹುಶಃ ತಾವು ಒಂದು ಮಾತನ್ನು ಹೇಳಿದ್ದಿರಿ. ಈ ಒಂದು ಬಡ್ಡಿಯನ್ನು ಮನ್ನಾ ಮಾಡುವುದರಿಂದ ರೈತರ ಆರ್ಥಿಕ ದುಸ್ಥಿತಿ ಹಾಳಾಗಿ ಸಾಲ ಕೊಡಬಾರದೆನ್ನುವ ಸ್ಥಿತಿ ಬಂದು, ಕ್ರೆಡಿಟ್ ಸಿಸ್ಟಮ್ ಹಾಳಾಗಿ ಹೋಯಿತು. ಇದರಿಂದ ಕೆಟ್ಟು ಹೋಗಿ ರೈತರಿಗೆ ಸಾಲವು ಸಿಗದೆ ಹಾಗೆ ಆಯಿತು. ಬೇರೆ ಬೇರೆ ಕಡೆ ರೈತರು ಬಡ್ಡಿ ವ್ಯವಹಾರದಲ್ಲಿ ಸಾಲವನ್ನು ತೆಗೆದುಕೊಂಡು ರೈತ ಸಾಯುವಂತಹ ಸ್ಥಿತಿ ಬಂತು ಎನ್ನುವಂತಹ ಮಾತನ್ನು ತಾವು ಹೇಳಿದ್ದಿರಿ. ನಿಜವಾಗಿ ನಾನು ಆ ಮಾತನ್ನು ಒಪ್ಪುವುದಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಲ್ಲಿ ನಾವು ರೈತರಿಗೆ ಏನು ಸಹಾಯ ಮಾಡಿದ್ದೇವೆ, ಇವತ್ತು ರೈತ ಈ ರೀತಿ ಸಾಯುವಂತಹ ಪರಿಸ್ಥಿತಿ ಏತಕ್ಕೆ ಬಂತು ಎಂದು ನಾವು ವಿಚಾರ ಮಾಡಬೇಕಾಗಿದೆ. ರೈತ ಇವತ್ತು ಸಾಯುತ್ತಿದ್ದಾನೆ. ಸರ್ಕಾರದವರು ರೈತರಿಗೆ ಸಹಾಯ ಮಾಡಿ. ಕೇಂದ್ರ ಸರ್ಕಾರದವರು ಬಂದು ನೋಡಿಕೊಂಡು ಹೋಗುತ್ತಾರೆ. ಎಲ್ಲಿದೆ ಅವರಿಗೆ ಹಣವನ್ನು ಕೊಡಲಿಕ್ಕೆ? ನಾವು ಎಲ್ಲಿ ಆ ದಿಸೆಯಲ್ಲಿ ಫಂಡನ್ನು ಕ್ರಿಯೇಟ್ ಮಾಡಿದ್ದೇವೆ? ಸುಮ್ಮನೆ ನಾವು ಹೇಳುತ್ತೇವೆ. ನಮ್ಮ ರಾಜ್ಯಕ್ಕೆ ಸುಮಾರು ಇದರಿಂದ ಒಂದು ಸಾವಿರ ಕೋಟಿ ಲಾಸ್ ಆಗಿದೆ. ನನ್ನ ಪ್ರಕಾರ ಅದು ಹೆಚ್ಚಾಗಿದೆ. ಒಂದು ಸಾವಿರ ಕೋಟಿಯನ್ನು ನಾವು ಎಲ್ಲಿ ಕೊಡುತ್ತೇವೆ? ಇವತ್ತು ಸನ್ಮಾನ್ಯ ವಿರೋಧಪಕ್ಷದ ನಾಯಕರು ಇಲ್ಲ. ನಮ್ಮ ಗುಲ್ಬರ್ಗ ಜಿಲ್ಲೆಗೆ 500 ರೂಪಾಯಿಯನ್ನು ಪರ್ ಹೆಕ್ಟೇರ್‌ಗೆ ನಾವು ಕೊಡುತ್ತೇವೆಂದರೂ ಕೂಡ ಅದು 6 ಕೋಟಿ ರೂ. ನಮಗೆ ಬೇಕಾಗುತ್ತದೆ. ಇವತ್ತು ಉಳಿದವರಿಗೆ ಕೊಡುವುದಕ್ಕೆ ನಮ್ಮಲ್ಲಿ ದುಡ್ಡು ಎಲ್ಲಿದೆ? ನಾನು ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇದಕ್ಕಾಗಿ ತಾವು ಒಂದು ಫಂಡನ್ನು ಕ್ರಿಯೇಟ್ ಮಾಡಬೇಕು. ನಾವು ಸುಮಾರು 10 ಸಾವಿರ ಕೋಟಿಯ ಫಂಡ್ ಮಾಡಿದರೆ ಇಂತಹ ಪರಿಸ್ಥಿತಿಯಲ್ಲಿ ನಾವು ರೈತರಿಗೆ ಸಹಾಯ ಮಾಡಲು ಆಗುತ್ತದೆ. ಇಲ್ಲದಿದ್ದರೆ ನೀವು ಸುಮ್ಮನೆ ಕೊಡಿ ಎಂದು ಹೇಳುವುದು. ರೈತರ ಪರವಾಗಿ ಸರ್ಕಾರವಿಲ್ಲ, ರೈತರ ವಿರೋಧಿ ಸರ್ಕಾರ ಎಂದು ನೀವು ಹೇಳುವುದು. ನಾವು ರೈತರ ಪರವಾಗಿ ಸರ್ಕಾರವಿದೆ ಎಂದು ಹೇಳುತ್ತಿದ್ದೇವೆ. ಅಲ್ಲಿ ದುಡ್ಡು ಕೊಡುವುದಕ್ಕೆ ಇಲ್ಲ. ಕೇಂದ್ರ ಸರ್ಕಾರದಲ್ಲೂ ಮಾಡಿಲ್ಲ, ರಾಜ್ಯ ಸರ್ಕಾರದಲ್ಲೂ ಸಹ ಮಾಡಿಲ್ಲ. ನಾವು ಹೋದ ವರ್ಷ ಬಜೆಟ್‌ನಲ್ಲಿ ಸ್ವಲ್ಪ ಮಾಡುತ್ತಾ ಇದ್ದೇವೆ. ಇದರಿಂದ ನಾವು ಆ ಒಂದು ಫಂಡನ್ನು ಕ್ರಿಯೇಟ್ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಮಾನ್ಯ ದೇವೇಗೌಡರನ್ನು ನಾನು ನೆನಸುತ್ತೇನೆ. ನಿಜವಾಗಿ ಅವರ ಸರ್ಕಾರ ಮುಂದುವರಿದಿದ್ದರೆ ಈ ವ್ಯವಸ್ಥೆ ಜಾರಿಗೆ ಬರುತ್ತಿತ್ತು. ನಾನು ಹೋಗಿ ಅವರಿಗೆ ಭೇಟಿಯಾಗಿ ಹೇಳಿದೆ. ಪ್ರಧಾನಮಂತ್ರಿಗಳೇ

ತಮ್ಮ ಅವಧಿಯಲ್ಲಿ ಇದು ಆಗಬೇಕೆಂದು ಹೇಳಿದಾಗ, ನನ್ನ ಎದುರಿಗೆ ಅಧಿಕಾರಿಗಳನ್ನು ಕರೆಯಿಸಿ ಹೇಳಿದರು. ಸುಮ್ಮನೆ ಇವತ್ತು ನಾವು ಹೇಳುವುದರಿಂದ ಏನೂ ಉಪಯೋಗವಾಗುವುದಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಲ್ಲಾ ಸೇರಿ ಒಂದು ಫಂಡ್ ಕ್ರಿಯೇಟ್ ಮಾಡಿದರೆ, ರೈತರ ಬೆಳೆ ಬಿದ್ದಾಗ, ರೈತರಿಗೆ ಏನಾದರೂ ಇಂಥ ತೊಂದರೆ ಇದ್ದಾಗ, ಏನಾದರೂ ಇಂಥ ಪರಿಸ್ಥಿತಿಯಲ್ಲಿ ರೈತರಿಗೆ ಸಹಾಯ ಮಾಡಲಿಕ್ಕೆ ಒಂದು ಫಂಡ್ ಕ್ರಿಯೇಟ್ ಮಾಡಿ ಎಂದು ಹೇಳಿದರು. ಅವತ್ತು ಅವರು ಎಲ್ಲಾ ಅಧಿಕಾರಿಗಳನ್ನು ಕರೆಸಿ ಈ ಮಾತು ಹೇಳಿದರು. ಆದರೆ ದುರ್ದೈವದಿಂದ ಎಲ್ಲಿದೆ ದುಡ್ಡು, ಹೇಗೆ ಇಡುವುದು ಎಂದು ಬರೀ ಇದನ್ನೇ ವಿಚಾರ ಮಾಡಿದರು. ನೀವು ಏನಾದರೂ ಮಾಡಿ ಮಾಡಬೇಕೆಂದು ಹೇಳಿದ್ದೆವು. ಆದರೆ ದುರ್ದೈವದಿಂದ ಏನಾಯಿತೆಂದರೆ ಅವರ ಸರ್ಕಾರ ಬಿದ್ದುಹೋಯಿತು. ಆ ಮಾತು ಬೇರೆ. ಇವತ್ತು ಮಾನ್ಯ ಈಶ್ವರಪ್ಪನವರ ಸರ್ಕಾರ ಬಂದಿದೆ; ದಯವಿಟ್ಟು ತಾವು ಮಾಡಬೇಕು. ತಮ್ಮಲ್ಲಿ ನಾನು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ತಾವು ರೈತರ ಪರವಾಗಿ ಹೋರಾಡುತ್ತಿದ್ದೀರಿ, ರೈತರ ಪರವಾಗಿ ಮಾತನಾಡುತ್ತಿದ್ದೀರಿ. ಮಾನ್ಯ ದೇವೇಗೌಡರು ಇನ್ನೊಂದು ತಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ 5 ಪರ್ಸೆಂಟ್ ಬಡ್ಡಿ ಕಡಿಮೆ ಮಾಡುತ್ತೇವೆಂದು ಹೇಳಿದ್ದರು. ಅದನ್ನು ಕೂಡ ತಾವು ಮಾಡಿಸಬೇಕು. ನಿಜಾವಾಗಿ ಹೇಳುತ್ತೇನೆ, 50 ವರ್ಷವಾದರೂ ಕೂಡ ರೈತರಿಗೆ ನಾವು ಯಾವ ಸಹಾಯವನ್ನು ಮಾಡಲಿಲ್ಲ. ನನ್ನ ಪ್ರಕಾರ ಕೇಳಿದಾಗ ರೈತರಿಗೆ ಬಡ್ಡಿರಹಿತ ಸಾಲ ಕೊಡುವುದಕ್ಕೆ ಸಾಧ್ಯತೆ ಇದೆ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇಬ್ಬರೂ ಸೇರಿದರೆ ಬಡ್ಡಿರಹಿತ ಸಾಲ ಕೊಡಬಹುದು. ಇವತ್ತಿನ ದಿವಸ ನಮ್ಮಲ್ಲಿ ಬಹಳಷ್ಟು ಇಂಡಸ್ಟ್ರಿಗಳು ಹುಟ್ಟಿಬಿಡುತ್ತವೆ. ಇನ್ನೊಂದು ಕಡೆ ನಾವು ಇಂಡಸ್ಟ್ರೀಗಳಿಗೆ ರಾಜ್ಯಮಟ್ಟದಲ್ಲಿ, ರಾಷ್ಟ್ರಮಟ್ಟದಲ್ಲಿ ಸಬ್ಸಿಡಿ ಕೊಡುತ್ತೇವೆ, ಆದರೆ ರೈತರಿಗೆ ಏನೂ ಕೊಡುತ್ತಿಲ್ಲ. ಈ ಕಡೆ ಕೇಂದ್ರ ಸರ್ಕಾರ ಸಹಾಯ ಮಾಡಿದರೆ ಖಂಡಿತವಾಗಿ ರೈತರಿಗೆ ಬಡ್ಡಿರಹಿತ ಸಾಲ ಕೊಡಬಹುದು. ಆ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯ ಇದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಆ ದಿಸೆಯಲ್ಲಿ ನಾವು ಇವತ್ತು ಪ್ರಯತ್ನ ಮಾಡುತ್ತಿದ್ದೇವ. ನಾವು ನಮ್ಮದೇ ಆದ ನಿಟ್ಟಿನಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿಕೊಂಡು ರೈತರ ಸಹಾಯಕ್ಕೆ ಹೋಗಬೇಕೆಂಬ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದೇವೆ. ಕೆಲವು ಸಂಸ್ಥೆಗಳು ಕೆಟ್ಟಾಗ ಅವುಗಳನ್ನು ಮೇಲೆತ್ತಲು ನಮ್ಮಲ್ಲಿ ಕೂಡ ಫಂಡ್ ಇಲ್ಲ. ಈಗ ನಾವು ಒಂದು ಹೊಸ ಸಹಕಾರ ನೀತಿಯನ್ನು ಜಾರಿಗೆ ತರತಕ್ಕ ಪ್ರಯತ್ನ ನಡೆಸಿದ್ದೇವೆ. ಮೊನ್ನೆ ಹಿರಿಯ ಸಹಕಾರಿಗಳೆಲ್ಲಾ ಕೂಡಿ ಈ ರಾಷ್ಟ್ರದಲ್ಲಿ ಮೊಟ್ಟಮೊದಲನೆಯದಾಗಿ ಈ ರಾಜ್ಯಕ್ಕೆ ಒಂದು ಹೊಸ ಸಹಕಾರಿ ನೀತಿಯನ್ನು ತರಬೇಕೆಂದು ವಿಚಾರ ಮಾಡಿದ್ದೇವೆ.

ಅಧ್ಯಕ್ಷರು: ನಿಮ್ಮ ಹತ್ತಿರ ಡೀಟೈಲ್ಸ್ ಇದೆಯೆ? ಇಡೀ ದೇಶದಲ್ಲಿ ಇಂಡಸ್ಟ್ರೀಯಲ್ ಸೆಕ್ಟಾರ್‌ನಲ್ಲಿ ಎಷ್ಟೆಷ್ಟು ಹಣ ಕೊಟ್ಟಿದ್ದಾರೆ, ಅಗ್ರಿಕಲ್ಚರಲ್ ಸೆಕ್ಟಾರ್‌ನಲ್ಲಿ ಎಷ್ಟು

ಕೊಟ್ಟಿದ್ದಾರೆ. ಐಡಿಬಿಐನಿಂದ ಎಷ್ಟು ಕೊಟ್ಟಿದ್ದಾರೆ? ಉಳಿದ ದೊಡ್ಡ ಸಂಸ್ಥೆಗಳು ಯಾವುವು ಇವೆ ಸಾಲ ಕೊಡತಕ್ಕದ್ದು ಅದರಲ್ಲೆಲ್ಲ ಎಷ್ಟು ವಸೂಲಿ ಆಗಿದೆ? ಯಾವುಯಾವುದಕ್ಕೆ ಎಷ್ಟೆಷ್ಟು ಕೊಟ್ಟಿದ್ದೀರಿ ಎಂಬ ಬಗ್ಗೆ ತಮ್ಮ ಹತ್ತಿರ ವಿವರಗಳು ಇವೆಯೇ?

ಶ್ರೀ ಎಸ್.ಎಸ್.ಪಾಟೀಲ್: ಆ ವಿವರಗಳನ್ನು ಬೇಕಾದರೆ ತರಿಸಿಕೊಡುತ್ತೇನೆ. ಬೇರೆ ಬೇರೆ ಇಲಾಖೆಗಳಿಂದ ತರಿಸಬೇಕಾಗಿದೆ.

ಅಧ್ಯಕ್ಷರು: ನೀವು ವಿವರಗಳನ್ನು ತರಿಸಿಕೊಟ್ಟರೆ ಒಳ್ಳೆಯದು. ನೀವು ಏನು ವಾದ ಮಂಡಿಸುತ್ತಿದ್ದೀರಿ ಅದಕ್ಕೆ ಹೆಚ್ಚಿನ ಶಕ್ತಿ ಬರಬೇಕಾದರೆ ಇಡೀ ರಾಷ್ಟ್ರದ ಸಮಗ್ರ ಚಿಂತನೆಯನ್ನು ಸಭೆಯ ಮುಂದಿಟ್ಟರೆ ಸ್ವಲ್ಪ ತಿಳಿವಳಿಕೆ ಕೊಟ್ಟಂತಾಗುತ್ತದೆ. ಏಕೆಂದರೆ, ಬಹಳ ಜನರಿಗೆ ನಮ್ಮಲ್ಲಿ ಸರ್ಕಾರ ಅಂದರೆ ಏನು ಕಲ್ಪನೆ ಇದೆ ಎಂದರೆ, ಸರ್ಕಾರಕ್ಕೆ ದುಡ್ಡು ತಾನಾಗಿ ಬಂದು ಸುರಿಯುತ್ತದೆ, ಸರ್ಕಾರದಲ್ಲಿರುವ ಹಣವನ್ನು ಖರ್ಚು ಮಾಡುವುದು ಎಂದು. ಸರ್ಕಾರಕ್ಕೆ ದುಡ್ಡು ಯಾವ ಮೂಲದಿಂದ ಬರಬೇಕು, ಅಪೇಕ್ಷಿಸಿದಷ್ಟು ನಿರೀಕ್ಷಿಸಿದಷ್ಟು ಬರುತ್ತಿದೆಯೇ ಬಂದದ್ದು ವಿನಿಯೋಗವಾಗುತ್ತಿದೆಯೆ? ಯಾವುಯಾವುದಕ್ಕೆ ನಾವು ವಿನಿಯೋಗ ಮಾಡಬೇಕು, ಇದರ ಬಗ್ಗೆ ಆರೋಗ್ಯಕರವಾಗಿ ಚರ್ಚೆಯಾಗುವುದು ಒಳ್ಳೆಯದು. ಪೈಪೋಟಿಯಲ್ಲಿ ರಾಜಕೀಯ ಪಕ್ಷಗಳು ಅಸಲು ವಿಷಯ ಬಿಡುತ್ತವೆ.

ಶ್ರೀ ಎಸ್.ಎಸ್.ಪಾಟೀಲ್: ತಾವು ಹೇಳಿದ್ದು ಪ್ರಾಮಾಣಿಕ ಸತ್ಯ. ಈಗ ನನ್ನಲ್ಲಿ ಅಧಿಕೃತ ಅಂಕಿಸಂಖ್ಯೆ ಇಲ್ಲ. ಹಿರಿಯ ಸದಸ್ಯರಿಗೆಲ್ಲಾ ಗೊತ್ತಿದ್ದ ವಿಚಾರ ಇದೆ. ಆದರೂ ತಮಗೆ ಕೃತಜ್ಞತೆ ಸಲ್ಲಿಸುತ್ತಾ, ತಾವು ಕೂಡ ರೈತರ ಪರವಾಗಿ ಇರುವುದು ಸಂತೋಷ. ಇವತ್ತು ರೈತರ ಪರವಾದ ವ್ಯವಸ್ಥೆ ಈ ದೇಶದಲ್ಲಿ 50 ವರ್ಷವಾದರೂ ಬಂದಿಲ್ಲ. ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ಇವತ್ತು ಈ ದಿಸೆಯಲ್ಲಿ ನಮ್ಮ ಇತಿಮಿತಿಯಲ್ಲಿ, ನಮ್ಮ ರಾಜ್ಯ ಸರ್ಕಾರದ ಇತಿಮಿತಿಯಲ್ಲಿ ಏನು ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯ ಇದೆ ಎಂಬ ದೃಷ್ಟಿಯಿಂದ ಹೇಳಿದೆ. ಆದರೆ ಇವತ್ತು ಮತ್ತೊಮ್ಮೆ ತಮ್ಮ ಮೂಲಕ ಮತ್ತು ಈ ಸದನದ ಮೂಲಕ ಕೇಂದ್ರ ಸರ್ಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ. ರೈತರ ಒಂದು ಕಷ್ಟಕಾಲಕ್ಕೆ ಅನುಕೂಲವಾಗುವಂತೆ ಒಂದು ಫಂಡನ್ನು ಕ್ರಿಯೇಟ್ ಮಾಡಬೇಕಾಗುತ್ತದೆ. ಆ ಫಂಡ್ ಮುಖಾಂತರ ನಾವು ರೈತರಿಗೆ ಸಹಾಯ ಮಾಡಲಿಕ್ಕೆ ಸಾಧ್ಯ. ಇಲ್ಲದಿದ್ದರೆ ಮೊಯಿಲಿಯವರ ಸರ್ಕಾರ ಇದ್ದಾಗ ನಾವು ಬೈಯ್ಯುವುದು. ನಮ್ಮ ಸರ್ಕಾರ ಇದ್ದಾಗ ಮೊಯಿಲಿಯವರು ಬೈಯ್ಯುವುದು. ಇದು ನಡೆಯುತ್ತದೆ. ಕೊಡಲಿಕ್ಕೆ ಎಲ್ಲಿಯೂ ದುಡ್ಡಿಲ್ಲ. ಇವತ್ತು ಒಂದು ಸಾವಿರ ಕೋಟಿ ರೂಪಾಯಿ ಹೋಗಿದೆ. ಎಲ್ಲಿದೆ ದುಡ್ಡು ನಮ್ಮ ಕರ್ನಾಟಕದಲ್ಲಿ? ಕೇಂದ್ರ ಸರ್ಕಾರದ ತಂಡ ಕೂಡ ಮೊನ್ನೆ ಬಂದು ನೋಡಿ ಹೋಗಿದೆ. ಅವರು ನಮಗೆ ಎಷ್ಟು ಕೊಡುತ್ತಾರೆ

ಎಂಬುದು ನಮ್ಮ ಮುಂದಿರತಕ್ಕ ಪ್ರಶ್ನೆ. ಈ ಕಾರಣದಿಂದ ಇವತ್ತು ಈ ಸದನದ ಮೂಲಕ ಶ್ರೀ ಈಶ್ವರಪ್ಪನವರು ತಾವೇ ಅಧಿಕಾರಕ್ಕೆ ಬಂದಿರುವುದರಿಂದ, ಮೊಯಿಲಿಯವರು ''ಹೋಗಲಿ ಸರ್ಕಾರ, ಹೋಗಲಿ ಸರ್ಕಾರ'' ಅಂದರು, ಹೋಯಿತು ಸರ್ಕಾರ, ಆಮೇಲೆ ಏನಾಯಿತು? ಆದರೆ ಸುದೈವದಿಂದ ಅವರು ಬಂದರು, ಅದಕ್ಕೆ ನಮ್ಮ ಸಂತೋಷ ಇದೆ. ರೈತರಿಗೆ ಯಾರು ಸಹಾಯ ಮಾಡುತ್ತಾರೆ ಅವರೇ ಇರಲಿ. ಆ ಸರ್ಕಾರವೇ ಇರಲಿ. ಬೇಡ ಅನ್ನುವುದಿಲ್ಲ.

ಅಧ್ಯಕ್ಷರು: ನಿಮಗೆ ಸಂತೋಷವಾದರೂ, ದುಃಖವಾದರೂ ಅವರು ಬಂದು ಬಿಟ್ಟಿದ್ದಾರಲ್ಲಾ.

ಶ್ರೀ ಎಸ್.ಎಸ್.ಪಾಟೀಲ್: ಅವರು ಹೇಳಿದ ಹಾಗೆ ಮಾಡುವುದಕ್ಕಾಗುತ್ತದೋ ಇಲ್ಲವೋ; ದಯವಿಟ್ಟು ಆ ದಿಸೆಯಲ್ಲಿ ಪ್ರಯತ್ನ ಮಾಡಿ.

ಶ್ರೀ ಅರಗ ಜ್ಞಾನೇಂದ್ರ: ಸಂತೋಷಪಡುವ ಹೃದಯವಂತಿಕೆ ಇದೆಯಲ್ಲಾ ಅದಕ್ಕೆ ಅಭಿನಂದನೆಗಳು.

ಶ್ರೀ ಎಸ್.ಎಸ್.ಪಾಟೀಲ್: ಅದನ್ನು ನಾವು ಮಾಡುತ್ತೇವೆ. ಯಾವಾಗಲೂ ನಮ್ಮ ಪಕ್ಷ ಆ ದಿಸೆಯಲ್ಲಿ ಮುಂಚೂಣಿಯಲ್ಲಿದೆ. ಯಾರು ಅಧಿಕಾರಕ್ಕೆ ಬಂದರೂ ಅವರಿಗೆ ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅದು ಏನೋ ಹೇಳುತ್ತಿದ್ದರಲ್ಲಾ, ಹೋಗಲಿ ಸರ್ಕಾರ, ಹೋಗಲಿ ಸರ್ಕಾರ ಎಂದು. ಇದನ್ನು ಹೇಳಿದವರು ಯಾರು?

ಶ್ರೀ ಎಸ್.ಎಸ್.ಪಾಟೀಲ್: ಮೊಯಿಲಿಯವರು ಅಂದರೆ ನಿಮ್ಮ ಪಕ್ಷ. ಮಾನ್ಯ ದೇವೇಗೌಡರು ಇದ್ದಾಗ ಖಾಯಂ ಆಗಿ ಹೋಗಲಿ ಎಂದು ಹೇಳಿದಿರಿ.

ಶ್ರೀ ಎಂ.ವೀರಪ್ಪಮೊಯಿಲಿ: ನೀವು ಸರ್ಕಾರ ಮಾಡಿ ಮಾಡಿ ಎಂದಿರಿ. ಇದು ಹೋಗಬೇಕು ಹೋಗಬೇಕು ಎಂದು ತಾವು ಹೇಳದೆ ಇದ್ದರೂ, ನಾವು ಬೇಡಿ ಬೇಡಿ ಎಂದು ನೀವು ಮನೆಗೆ ಹೋದಿರಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಖರ್ಗೆಯವರು ಇದ್ದರೆ ಬಹಳ ಚೆನ್ನಾಗಿರುತ್ತಿತ್ತು. ಯಾವಾಗ ನೋಡಿದರೂ ಮಾನ್ಯ ದೇವೇಗೌಡರು ಇರುವವರೆಗೆ ಸರ್ಕಾರವನ್ನು ಹಿಂದೆ ತೆಗೆದುಕೊಳ್ಳಿ ಎಂದು ಇದ್ದೇ ಇತ್ತು. ಆದರೂ ಕೂಡ ನಾನು ಆ ದಿಸೆಯಲ್ಲಿ ಹೇಳಬೇಕೆಂದರೆ ನಿಜವಾಗಿ ಈ ದೇಶಕ್ಕೆ ರೈತರ ಪರವಾದ ಒಂದು ಸರ್ಕಾರ ಇರಬೇಕು.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಪ್ರತಿಯೊಬ್ಬ ಮಂತ್ರಿಗಳೂ ಕೂಡ ಮಾತನಾಡುವ ಸಂದರ್ಭದಲ್ಲಿ ಪ್ರಸ್ತಾಪ ಮಾಡುತ್ತಾರೆ. ಕೇಂದ್ರ ಸರ್ಕಾರದಲ್ಲಿ ಬಿಜೆಪಿ

ಬಂದಿದೆ, ಕರ್ನಾಟಕ ರಾಜ್ಯದಲ್ಲಿ ಇಂತಿಂಥ ಸಮಸ್ಯೆಗಳು ಇವೆ ಎಂದು ಹೇಳುತ್ತಾರೆ. ಪ್ರಾಮಾಣಿಕ ಕಳಕಳಿ ಇರುವಂಥ ವ್ಯಕ್ತಿಗಳು ಶ್ರೀ ಪಾಟೀಲರು. ಈ ರೀತಿ ವಿಶೇಷ ಯೋಜನೆಗಳನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದರೆ ಬರೀ ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿ ನಿಮ್ಮ ಸರ್ಕಾರ ಬಂದಿದೆ, ಸಹಕಾರ ಕೊಡಬೇಕೆಂದು ಇಷ್ಟು ಮಾತ್ರ ಹೇಳಿದರೆ ಸಾಕಾಗುವುದಿಲ್ಲ. ತಾವು ಮುತುವರ್ಜಿ ವಹಿಸಿ ಈ ದಿಕ್ಕಿನಲ್ಲಿ ಸಭೆಗಳನ್ನು ಕರೆದರೆ ನಾವು ಖಂಡಿತ ಬರುತ್ತೇವೆ. ಆ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಯಿಸಿ. ನಿನ್ನೆತಾನೇ ಕೇಂದ್ರ ವಿಮಾನಯಾನ ಸಚಿವರಾದ ಶ್ರೀ ಅನಂತಕುಮಾರ್ ಅವರ ಹತ್ತಿರ ನಾವು ಮಾತನಾಡಿದೆವು. ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಉದಾಹರಣೆಗೆ ಶ್ರೀ ಬಾಬಾಗೌಡ ಪಾಟೀಲ್. ತಾವು ಹೋದಿರಿ, ಹಣ ಕೊಡುವ ಬಗ್ಗೆ ಮಾತನಾಡಿದಿರಿ. ಹಿಂದಿನ ಸಾಲಿಗಿಂತ ಹೆಚ್ಚಿನ ಹಣವನ್ನು ಕುಡಿಯುವ ನೀರಿಗೆ ಬಿಡುಗಡೆ ಮಾಡಿಕೊಂಡು ಬಂದಿರುವುದು ನಮಗೆ ಗೊತ್ತಿದೆ; ಇಡೀ ರಾಜ್ಯಕ್ಕೆ ಗೊತ್ತಿದೆ. ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ, ವಿಧಾನಸಭೆಯಲ್ಲಿ ಪ್ರಸ್ತಾಪ ಮಾಡಿ ಈ ಸರ್ಕಾರ ಬಂದಿದೆ ಎಂದು ಹೇಳುವುದು, ಇಷ್ಟೇ ಆಗುವುದು. ಹಿಂದೆ ಮಾನ್ಯ ದೇವೇಗೌಡರು ಇರಬೇಕಾದರೆ ಅಭಿನಂದನೆ ಸಲ್ಲಿಸಿ, ನಾನು ಬೇಡ ಅನ್ನುವುದಿಲ್ಲ. ಆಗಲೂ ಆಗಲಿಲ್ಲ. ಅದು ಆಗಬೇಕಾದರೆ ಏನು ಮಾಡಬೇಕೆಂದು ಹೇಳಬೇಕು. ಸುಮ್ಮನೆ ವಿಧಾನಸಭೆಯಲ್ಲಿ ಪ್ರಸ್ತಾಪಿಸಿ ದಯವಿಟ್ಟು ಇಲ್ಲೇ ನಿಲ್ಲಿಸಬೇಡಿ. ಅಧಿಕೃತವಾಗಿ ಸಭೆ ಕರೆದು ಅಧಿಕಾರಿಗಳನ್ನು ಕರೆದು ಸಭೆ ಮಾಡಿದರೆ ನಾವು ಕೂಡ ಸಭೆಯಲ್ಲಿ ಭಾಗವಹಿಸುವುದಕ್ಕೆ ತಯಾರಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ಖಂಡಿತ ಆ ದಿಸೆಯಲ್ಲಿ ನಾವು ಪ್ರಯತ್ನ ಮಾಡುತ್ತೇವೆ. ತಮ್ಮನ್ನು ಕರೆಯುತ್ತೇವೆ. ಮಾನ್ಯ ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ಈ ದಿಸೆಯಲ್ಲಿ ಅವರ ಕೂಡ ಮಾತನಾಡಿದ್ದೆ. ಅದೇ ರೀತಿ ಇವತ್ತು ತಮ್ಮೆಲ್ಲರನ್ನೂ ಕರೆದು ಮಾತನಾಡಿ ಈ ದಿಸೆಯಲ್ಲಿ ಏನು ಮಾಡಬೇಕೆಂದು ವಿಚಾರ ಮಾಡುತ್ತೇನೆ. ಇಲ್ಲದಿದ್ದರೆ ಸುಮ್ಮನೆ ಮಾತನಾಡುವುದು ಆಗುತ್ತದೆ. ಇದರಿಂದ ರೈತರ ಉದ್ಧಾರವಾಗುವುದಿಲ್ಲ. ಈ ಭಾಷಣದಿಂದ, ಬರೀ ಹೇಳುವುದರಿಂದ ಏನೂ ಆಗುವುದಿಲ್ಲ. ಉದಾಹರಣೆಗೆ, ಈಶ್ವರಪ್ಪನವರೇ, ನಾನು ಹೇಳುವುದು ಇದನ್ನು ಇಷ್ಟಕ್ಕೆ ನಿಲ್ಲಿಸದೆ, ಆವತ್ತಿನ ದಿವಸ ಮಾನ್ಯ ದೇವೇಗೌಡರು ಇದ್ದಾಗ ಹೇಳಿದ ಸಂದರ್ಭದಲ್ಲಿ ಅಧಿಕಾರಿಗಳು ಬಂದರು. ಬಂದು ಇಲ್ಲ ದುಡ್ಡಿಲ್ಲ, ದುಡ್ಡು ಎಲ್ಲಿದೆ ಹತ್ತು ಸಾವಿರ ಕೋಟಿ ರೂಪಾಯಿಗಳನ್ನು ಹೇಗೆ ತೆಗೆದಿಡುವುದು ಏನು ಮಾಡುವುದು ಎಂದು ಪ್ರಶ್ನೆ ಮಾಡಿದರು. ಇದರಲ್ಲಿ ಏನಾದರೂ ಮಾಡಿ ಮಾಡಬೇಕೆಂದು ಹೇಳಿದರು. ಆದರೆ ಮುಂದೆ ಸ್ವಲ್ಪ ದಿನಗಳಲ್ಲಿ 18 ಸಾವಿರ ಕೋಟಿ ರೂಪಾಯಿಗಳನ್ನು ನೌಕರರಿಗೆ ಹೆಚ್ಚಿಗೆ ಪಗಾರ ಕೊಟ್ಟರು. ಅದು ಎಲ್ಲಿಂದ ಬಂತು? ರೈತರ ಪ್ರಶ್ನೆ ಬಂದಾಗ ಎಲ್ಲಿ ದುಡ್ಡಿದೆ ಎಂದು ಮಾತನಾಡುತ್ತಾರೆ. ನೌಕರರಿಗೆ ಪಗಾರ ಕೊಡುವುದು ಪ್ರತಿ ವರ್ಷ 18 ಸಾವಿರ ಕೋಟಿ ರೂಪಾಯಿ ಹೆಚ್ಚಿಗೆ ಹೊರೆ

ಬೀಳುತ್ತದೆ. ನಮಗೆ ಒಂದು ವರ್ಷ ಹತ್ತು ಸಾವಿರ ಕೋಟಿ ರೂಪಾಯಿ ಇಡುತ್ತಿದ್ದಾರೆ. ಅದರ ಬದಲು ನಮಗೆ ರಿವಾಲ್ವಿಂಗ್ ಫಂಡ್ ಮಾಡಿದರೆ ಸಾಕು. ಇಡೀ ರಾಷ್ಟ್ರ ಒಮ್ಮೆಲೇ ಯಾವಾಗಲೂ ಬರ ಬೀಳುವುದಿಲ್ಲ. ಎಲ್ಲೋ ಕೆಲವು ರಾಜ್ಯಗಳು ಬರ ಬೀಳುತ್ತವೆ. ಈ ದಿಸೆಯಿಂದ ನಾವು ಏನಾದರೂ ಮಾಡುವುದಕ್ಕೆ ಸಾಧ್ಯವಾಗುತ್ತದೆ. ತಮ್ಮೆಲ್ಲರನ್ನೂ ಕರೆಯುತ್ತೇನೆ ಮತ್ತು ಹಿರಿಯ ಸದಸ್ಯರ ಸಲಹೆ ತೆಗೆದುಕೊಂಡು ಪ್ರಸಂಗ ಬಂದರೆ ಮಾನ್ಯ ಮುಖ್ಯಮಂತ್ರಿಗಳ ಮತ್ತು ಮಾನ್ಯ ಕೃಷಿ ಸಚಿವರ ಹತ್ತಿರ ಮಾತನಾಡಿ ದೆಹಲಿಗೆ ನಿಯೋಗ ಬೇಕಾದರೆ ಹೋಗೋಣ. ಈ ದಿಸೆಯಲ್ಲಿ ಬರೀ ಒಂದು ರಾಜ್ಯದವರು ಹೇಳಿದರೆ ಆಗುವುದಿಲ್ಲ. ಎಲ್ಲಾ ರಾಜ್ಯ ಸರ್ಕಾರದವರು ಮಾಡಬೇಕಾಗುತ್ತದೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ನಾನು ಮಾತನಾಡುತ್ತೇನೆ. ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳನ್ನು ಕರೆದು ಪ್ರಧಾನಮಂತ್ರಿಗಳ ಹತ್ತಿರ ಮಾತನಾಡಿ ಈ ದಿಸೆಯಲ್ಲಿ ನಾವು ಪ್ರಯತ್ನ ಮಾಡಿದರೆ ರೈತರ ಅಭಿವೃದ್ಧಿಯಾಗುತ್ತದೆಯೇ ವಿನಃ, ಇಲ್ಲದಿದ್ದರೆ ಸುಮ್ಮನೆ ಬರೀ ಭಾಷಣದಿಂದ ಏನೂ ಪ್ರಯೋಜನವಾಗುವುದಿಲ್ಲ. ನಾವು ಸತ್ಯಾಗ್ರಹ ಮಾಡುತ್ತೇವೆಂದು ಹೇಳುತ್ತೇವೆ, ರೈತರಿಗೆ ಹಣ ಕೊಡಿ ಎಂದು ಹೇಳುತ್ತೇವೆ. ಆದರೆ ಎಲ್ಲಿದೆ ಬಜೆಟ್‌ನಲ್ಲಿ ಹಣ? ಈ ದೃಷ್ಟಿಯಿಂದ ನಾವು ಏನಾದರೂ ಮಾಡಿದರೆ ಉಪಯೋಗವಾಗುತ್ತದೆ. ಆದರೆ ನಮ್ಮದೇ ಇತಿಮಿತಿಯಲ್ಲಿ ಈ ಸಂಘಗಳನ್ನು ಬಲಪಡಿಸುವ ಮೂಲಕ ಮುಂದೆ ಸಾಗಬೇಕು. ಇವತ್ತು ರೈತರಿಗೆ ಸಹಕಾರ ಸಂಘಗಳನ್ನು ಬಿಟ್ಟರೆ ಯಾರೂ ಸಾಲ ಕೊಡುವುದಿಲ್ಲ. ಬಹುಶಃ ನಾನು ಹೆಮ್ಮೆಯಿಂದ ಹೇಳುತ್ತೇನೆ, ನಾವು ಬಂದಮೇಲೆ ಸುಮಾರು ಪ್ರತಿ ವರ್ಷ ಒಂದು ಸಾವಿರ ಕೋಟಿರೂಪಾಯಿಗಳನ್ನು ಹಂಚಬೇಕೆಂದು ಗುರಿ ಇಟ್ಟುಕೊಂಡಿದ್ದೆವು. ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಹಂಚುವ ಗುರಿ ಇತ್ತು. ಮೊದಲು 180 ಕೋಟಿ ರೂಪಾಯಿ ಇತ್ತು, ಮತ್ತೆ 700 ಕೋಟಿ ರೂಪಾಯಿಗಳನ್ನು ಹಂಚಿದೆವು. ಆದರೆ ಒಂದು ಸಾವಿರ ಕೋಟಿ ರೂಪಾಯಿ ಗುರಿ ಮುಟ್ಟುವುದಕ್ಕೆ ಆಗಲಿಲ್ಲ. ಕೆಲವು ಕಡೆ ಬರಬಿತ್ತು. ಆ ಕಾರಣದಿಂದ 4 ಸಾವಿರ ಕೋಟಿ ರೂಪಾಯಿಗಳ ಗುರಿ ಮುಟ್ಟುವ ಉದ್ದೇಶ ನಮ್ಮದು ಇದೆ. ಆದರೆ ದುರ್ದೈವದಿಂದ ನಬಾರ್ಡ್‌ನವರು ನಮಗೆ ಹೆಚ್ಚು ಸಹಾಯ ಮಾಡುತ್ತಿಲ್ಲ. ನಬಾರ್ಡ್‌ನವರು ಹೇಳುತ್ತಾರೆ, ನೀವು 40 ಹಾಕಿದರೆ ನಾವು 60 ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಕೊಡುವುದಿಲ್ಲ. ಉದಾಹರಣೆಗೆ ಕಾರವಾರ ಡಿಸಿಸಿ ಬ್ಯಾಂಕ್‌ಗೆ ನಬಾರ್ಡ್ ಲೋನ್ ರೀಫೈನಾನ್ಸ್ ಸಿಗುವುದಿಲ್ಲ. ನಿಮ್ಮಲ್ಲೇ ರಿಸೋರ್ಸಸ್ ಇದೆ, ಕೊಡಿ ಎಂದು ಹೇಳುತ್ತಾರೆ. ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ನಬಾರ್ಡ್‌ನವರು ಕೊಡದಿದ್ದರೆ ನಮಗೆ ಸಾಲ ಕೊಡುವ ಶಕ್ತಿ ಇದೆ, ನಮ್ಮಲ್ಲಿ ದುಡ್ಡಿದೆ. ಆದರೆ ರೈತರಿಗೆ ಸರಳ ಬಡ್ಡಿ ಮೇಲೆ ರೈತರಿಗೆ ಕೊಡುವುದಕ್ಕಾಗಿಲ್ಲ. ನಾವು ಡಿಪಾಸಿಟ್ ರೈಸ್ ಮಾಡಿಕೊಟ್ಟರೆ ಬಡ್ಡಿ ಜಾಸ್ತಿಯಾಗುತ್ತದೆ. ಈ ಕಾರಣ, ರೈತರಿಗೆ ಕನಿಷ್ಟ 10 ಪರ್ಸೆಂಟ್ ಬಡ್ಡಿ ದರದಲ್ಲಿ ಸಾಲ ಕೊಡಬೇಕೆಂಬ ವಿಚಾರ ಇದೆ. ಕೇಂದ್ರ ಸರ್ಕಾರ 5 ಪರ್ಸೆಂಟ್ ಸಬ್ಸಿಡಿ ಬಿಟ್ಟರೆ 5

ಪರ್ಸೆಂಟ್ ಬಡ್ಡಿ ಮೇಲೆ ಇವತ್ತು ರೈತರಿಗೆ ಸಾಲ ಕೊಡಬಹುದು. ಆ ಕಾರಣದಿಂದ ಈ ಮಾತನ್ನು ತಮಗೆ ಹೇಳುತ್ತಾ, ಇನ್ನು ನಾವು ನಮ್ಮ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ಮತ್ತು ಲ್ಯಾಂಡ್ ಬ್ಯಾಂಕ್‌ಗಳಲ್ಲಿ ರೈತರಿಗೆ ಸಾಲ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಶ್ರೀ ಅರಗ ಜ್ಞಾನೇಂದ್ರ ಅವರೇ, ತಾವು ಕೇಳಬೇಕು, ತಾವು ಬಹಳ ಹೇಳಿದಿರಿ ಮತ್ತು ನಮ್ಮನ್ನು ಬಹಳ ಬೈಯ್ದಿರಿ. ನೀವು ಬೈಯ್ದಿದ್ದು ಬಹಳ ಸಂತೋಷವಾಯಿತು. ಇಲ್ಲಿ ಹೇಳಲಿಕ್ಕೆ ತಾವು ಅವಕಾಶ ಒದಗಿಸಿಕೊಟ್ಟಿರಿ. ಅದರ ಬಗ್ಗೆ ಮುಂದೆ ಹೇಳುತ್ತೇನೆ. ನಮ್ಮ ಲ್ಯಾಂಡ್ ಬ್ಯಾಂಕ್‌ನಲ್ಲಿ ಇವತ್ತು ವಹಿವಾಟು ಬಹಳ ಕಡಿಮೆ ಇದೆ. ಗ್ಯಾಪ್ ಇದೆ. ಆ ಗ್ಯಾಪ್ ತೆಗೆಯಬೇಕೆಂದು ಮಾನ್ಯ ದೇವೇಗೌಡರ ಹತ್ತಿರ ಹೋಗಿ ಒಂದು ಕಾರ್ಯಕ್ರಮ ಕೊಟ್ಟಿದ್ದೆವು. ಅಲ್ಲಿಂದ ಒಂದು ಟೀಂ ಬಂದು ನೋಡಿ ಹೋಗಿತ್ತು. ಆ ಸರ್ಕಾರ ಹೋಯಿತು, ಅದು ಅಲ್ಲಿಗೆ ನಿಂತು ಹೋಯಿತು. ಇವತ್ತು ನಾವು ನೀವು ಕೂಡಿ ಮಾತನಾಡಿ ಈ ಗ್ಯಾಪ್ ಏನಿದೆ ಇದಕ್ಕೆ 200 ಕೋಟಿ ರೂಪಾಯಿ ಕೊಟ್ಟರೆ ನಮ್ಮ ಸಂಪೂರ್ಣ ಗ್ಯಾಪ್ ಹೋಗುತ್ತದೆ. ಎಲ್ಲಾ ಸೊಸೈಟಿಗಳು, ಎಲ್ಲಾ ಪಿ.ಎಲ್.ಡಿ. ಬ್ಯಾಂಕ್‌ಗಳು ಸರಿದೂಗುತ್ತದೆ. ಇವತ್ತು ಪಿ.ಎಲ್.ಡಿ. ಬ್ಯಾಂಕು ಮುಚ್ಚುವಂಥ ಪರಿಸ್ಥಿತಿ ಇದೆ. ಸುಮಾರು 200 ಕೋಟಿ ರೂಪಾಯಿ ಹಾನಿಯಾಗಿದೆ. ಅದನ್ನು ಹೇಗೆ ಸುಧಾರಿಸುವುದು? ಈಗಾಗಲೇ ನಾವು ಎರಡು ಬ್ಯಾಂಕುಗಳನ್ನು ಲಿಕ್ವಿಡೇಟ್ ಮಾಡಿದ್ದೇವೆ. ಲಿಕ್ವಿಡೇಟ್ ಮಾಡುವುದೇ ನಮ್ಮ ಉದ್ದೇಶ ಅಲ್ಲ. ಆದರೆ ಅನಿವಾರ್ಯವಾಗಿ ಲಿಕ್ವಿಡೇಟ್ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಈ ಕಾರಣದಿಂದ ನಾವು ಗ್ಯಾಪ್ ವ್ಯವಸ್ಥೆಗೆ ಕೇಂದ್ರ ಸರ್ಕಾರ ಎಷ್ಟು ಕೊಡಬೇಕು, ರಾಜ್ಯ ಸರ್ಕಾರ ಎಷ್ಟು ಕೊಡಬೇಕೆಂದು ಪ್ರೋಗ್ರಾಂ ಮಾಡಿದ್ದರು. ಅದು ಅಷ್ಟಕ್ಕೆ ನಿಂತುಹೋಗಿದೆ. ಈ ರೀತಿ ನಾವು ಕೇಂದ್ರ ಸರ್ಕಾರದ ಸಹಾಯ ತೆಗೆದುಕೊಂಡು ಪಿ.ಎಲ್.ಡಿ. ಬ್ಯಾಂಕ್ ಮತ್ತು ಅಗ್ರಿಕಲ್ಚರ್ ವ್ಯವಸ್ಥೆಯನ್ನು ಸರಿಯಾಗಿ ಸುಧಾರಿಸಬೇಕಾಗುತ್ತದೆ. ಆ ದಿಸೆಯಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಅಲ್ಲಿ ಇವತ್ತು ಸುಮಾರು 19 ಡಿಸಿಸಿ ಬ್ಯಾಂಕುಗಳು ಇವೆ. 19ರಲ್ಲಿ ಸುಮಾರು 4-5 ಬ್ಯಾಂಕುಗಳು ಸಂಪೂರ್ಣ ಮುಚ್ಚುವ ಸ್ಥಿತಿಗೆ ಬಂದಿವೆ. ಅದರಲ್ಲೂ ರಾಯಚೂರು ಬ್ಯಾಂಕ್ ಒಂದು. ಅದನ್ನು ಲಿಕ್ವಿಡೇಟ್ ಮಾಡಬೇಕಾಗುತ್ತದೆ. ಈಗ 10-15 ವರ್ಷಗಳಾಯಿತು, ಅಡ್ಮಿನಿಸ್ಟ್ರೇಟರ್ ಬಂದಿದ್ದಾರೆ. ಚುನಾವಣೆ ಮಾಡುತ್ತೇವೆಂದರೆ ಅಲ್ಲಿ ಯಾರೂ ಮುಂದೆ ಬರುವುದಿಲ್ಲ. ಹಾಳು ಮನೆಗೆ ಹೋಗಿ ಅಲ್ಲಿ ಏನು ಮಾಡುವುದು ಎಂಬ ಸ್ಥಿತಿ ಇತ್ತು. ಇವತ್ತು ಅದನ್ನು ಕೂಡ ಸುಧಾರಿಸುತ್ತಿದ್ದೇವೆ. ಅಪೆಕ್ಸ್ ಬ್ಯಾಂಕಿನವರು ಬಡ್ಡಿ ಬಿಡಬೇಕು ಮತ್ತು ನಾವು ಸರ್ಕಾರದವರು ಕೊಟ್ಟ ಸಾಲ, ಷೇರ್ ಕೊಡಬೇಕೆಂದು ತೀರ್ಮಾನ ಮಾಡಿ ಅದಕ್ಕೆ ನಬಾರ್ಡ್‌ನವರು ರೀಫೈನಾನ್ಸ್ ಮಾಡತಕ್ಕ ವ್ಯವಸ್ಥೆ ಮಾಡುತ್ತಿದ್ದೇವೆ. ಇಡೀ ರಾಯಚೂರು ಜಿಲ್ಲೆಯಲ್ಲಿ ಸುಮಾರು 50 ಸೊಸೈಟಿಗಳು ಸಂಘಸಂಸ್ಥೆಗಳು ವಸೂಲಿ ಮಾಡಿಲ್ಲ ಬಹಳ ಹಾಳಾಗಿವೆ ಎಂದು ಹೇಳುತ್ತಾರೆ. ಕೆಟ್ಟಿವೆಯೆಂದು ಹೇಳುತ್ತಾರೆ. ನಮಗೆ ಸ್ವಾತಂತ್ರ್ಯ ಬಂದ ಮೇಲೆ ರೈತರಿಗೆ 4370 ಸೊಸೈಟಿಗಳಲ್ಲಿ ಸುಮಾರು 2 ಸಾವಿರ

ಸೊಸೈಟಿಗಳಲ್ಲಿ ಇವತ್ತು 90ರಷ್ಟು ರಿಕವರಿಯಾಗಿದೆ. 800-900 ಕೋಟಿಗಳಲ್ಲಿ ನೂರಕ್ಕೆ ನೂರರಷ್ಟು ವಸೂಲಿಯಾಗಿದೆ. ನಾವು 90ರಷ್ಟು ರಿಕವರಿ ಮಾಡಿದ್ದೇವೆ.

ಅಧ್ಯಕ್ಷರು: ಏಕೆಂದರೆ ಸಹಕಾರ ಸಚಿವರಿಗೆ ಸಹಕಾರ ಸಿಗುತ್ತಿಲ್ಲ ಸದನದಲ್ಲಿ. ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಸಹಕಾರ ಸಚಿವರಿಗೆ ಸಹಕಾರ ಸಿಗುತ್ತಿಲ್ಲವೆಂದು ಹೇಳಿದೆ. ಸದಸ್ಯರು ತಮ್ಮ ತಮ್ಮಲ್ಲಿಯೇ ಮಾತುಕತೆಯನ್ನು ಬಹಳ ಎತ್ತರದ ಧ್ವನಿಯಲ್ಲಿ ನಡೆಸುತ್ತಿದ್ದಾರೆ. ಮಂತ್ರಿಗಳು ಅವರಷ್ಟಕ್ಕೆ ಹೇಳುತ್ತಿದ್ದಾರೆ, ನಾನು ಒಬ್ಬನೇ ಕೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್: ನಾವು ಮೂರು ಜನ ಶಾಸಕರು ನಾಮಕರಣ ಪದ್ಧತಿಯ ಬಗ್ಗೆ ಮಂತ್ರಿಗಳು ಏನು ಹೇಳುತ್ತಾರೆ ಅದಕ್ಕೆ ಕಾದಿರೋಣ ಎಂದು ಅದನ್ನು ಹೇಳುತ್ತಿದ್ದೆ. ಏನು ಚರ್ಚೆ ಮಾಡುತ್ತಿದ್ದೆವು ಅಂದರೆ ಅವರು ಒಪ್ಪಲಿಲ್ಲವೆಂದರೆ ಏನು ಮಾಡಬೇಕೆಂದು ತೀರ್ಮಾನ ಮಾಡಿಕೊಳ್ಳುತ್ತಿದ್ದೆವು.

ಅಧ್ಯಕ್ಷರು: ಮಾತು ಬಲ್ಲವರು ಊರು ಗೆಲ್ಲುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ಅವರು ಒಪ್ಪಲಿಲ್ಲವೆಂದರೆ ತಾವು ಏನು ಮಾಡುತ್ತೀರಿ ಎಂಬುದು ಎಲ್ಲರಿಗೂ ಗೊತ್ತಿದೆ.

ಅಧ್ಯಕ್ಷರು: ಮಾತು ಬಲ್ಲವರು ಊರು ಗೆಲ್ಲುತ್ತಾರೆ.

ಶ್ರೀ ಸಿ.ಎಂ.ಲಿಂಗಪ್ಪ: ಈ ರಾಜ್ಯದಲ್ಲಿ ಸಹಕಾರ ರಂಗ ತನ್ನ ಮಹತ್ವವನ್ನು ದಿನೇದಿನೇ ಕಳೆದುಕೊಳ್ಳುತ್ತಿದೆ. ಅದಕ್ಕಾಗಿ ಇಷ್ಟೊಂದು ಆಸಕ್ತಿಯಿದೆ.

ಅಧ್ಯಕ್ಷರು: ಹಾಗೆ ಆಗಬಾರದು.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ತಾವೇ ಹೇಳಬೇಕು.

ಅಧ್ಯಕ್ಷರು: ಎಲ್ಲಾ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ತಮ್ಮ ತಮ್ಮಲ್ಲಿಯೇ ಚರ್ಚೆ ಮಾಡುವಾಗ ಸ್ವಲ್ಪ ಮೆಲುಧ್ವನಿಯಲ್ಲಿ ಮಾಡಿಕೊಳ್ಳುವುದು ಒಳ್ಳೆಯದು. ದಯಮಾಡಿ ಸಹಕರಿಸಿ. ಇದು ಚೆನ್ನಾಗಿ ಕಾಣುವುದಿಲ್ಲ.

ಶ್ರೀ ಸಿ.ಎಂ.ಲಿಂಗಪ್ಪ: ಬೆಂಗಳೂರು ಜಿಲ್ಲೆಯ ಬಿಡಿಸಿಸಿ ಬ್ಯಾಂಕಿನ ಅವ್ಯವಹಾರದ ಬಗ್ಗೆ ಸಿಒಡಿ ತನಿಖೆಯಾಗಬೇಕೆಂದು ಹೇಳಿದ್ದೆವು. ಅದರ ಬಗ್ಗೆ ಮಾನ್ಯ ಮಂತ್ರಿಗಳು ಪ್ರಸ್ತಾಪ ಮಾಡಲಿಲ್ಲ.

ಅಧ್ಯಕ್ಷರು: ಮಂತ್ರಿಗಳು ಉತ್ತರ ಹೇಳುತ್ತಿದ್ದಾರೆ. ಬೇಡಿಕೆಯ ಮೇಲಿನ ಚರ್ಚೆಗೆ

ಉತ್ತರ ಕೊಡುತ್ತಿದ್ದಾರೆ. ನಂತರ ಸ್ಪಷ್ಟೀಕರಣ ಕೇಳಲಿಕ್ಕೆ ತಮಗೆ ಅವಕಾಶವಿರುತ್ತದೆ. ಆಮೇಲೆ ಕೇಳಿ. ಸ್ವಲ್ಪ ಎಲ್ಲರೂ ಸಹಕರಿಸಬೇಕು. ಮಂತ್ರಿಗಳು ಉತ್ತರ ಮುಂದುವರಿಸಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಬೆಂಗಳೂರು ಜಿಲ್ಲಾ ಬ್ಯಾಂಕಿನ ಬಗ್ಗೆ ಹೇಳಿದರು, ನಾನು ಅದನ್ನೆ ಹೇಳಲಿಕ್ಕೆ ಹೊರಟಿದ್ದೆ. ನಮ್ಮ ಅಪೆಕ್ಸ್‌ಬ್ಯಾಂಕ್ ಬಹಳ ಚೆನ್ನಾಗಿದೆ. ಜಿಲ್ಲಾ ಬ್ಯಾಂಕ್ ಉತ್ತಮವಾದುದು. ಬೆಂಗಳೂರು ಡಿಸಿಸಿ ಬ್ಯಾಂಕ್ ಬಹಳ ಕಷ್ಟದ ಸ್ಥಿತಿಯಲ್ಲಿದೆ ಆ ಪರಿಸ್ಥಿತಿಗೆ ತಂದಿದ್ದಾರೆ ಬ್ಯಾಂಕನ್ನು ಹಾಳುಮಾಡಿದ್ದಾರೆ ಇಲ್ಲವೆಂದು ಹೇಳುವುದಿಲ್ಲ. ಅದಕ್ಕೆ ಈಗಾಗಲೇ ಸಿಬಿಐ ತನಿಖೆಗೆ ಕೊಟ್ಟಿದ್ದೇವೆ. ಸಿಬಿಐನವರು ಬಂದು ತನಿಖೆ ಮಾಡುತ್ತಿದ್ದಾರೆ. ಆದರೂ ನಮ್ಮ ಅಧಿಕಾರಿಗಳು ಪುನಃ ತನಿಖೆ ಮಾಡಿ ಕೆಲವು ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಿ ಮನೆಗೆ ಕಳುಹಿಸಿದ್ದಾರೆ. ಕೆಲವು ಆಡಳಿತ ಮಂಡಳಿಯ ಸದಸ್ಯರು ಕೋರ್ಟ್‌ಗೆ ಹೋಗಿ ಸ್ಟೇ ತಂದಿದ್ದಾರೆ. ಆದರೂ ನಾವು ಬಿಟ್ಟಿಲ್ಲ ಎಲ್ಲಾ ತರಹದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಅದನ್ನು ಮುಚ್ಚುವುದಕ್ಕಲ್ಲ, ಅದನ್ನು ಮುಚ್ಚಬಾರದು. ಅದನ್ನು ಮುಚ್ಚುವುದರಿಂದ ನಮ್ಮ ರೈತರಿಗೆ ಹೊಡೆತ ಬೀಳುತ್ತದೆಂದು ಅದು ಯಾವುದೇ ಕಾರಣದಿಂದ ನಾವು ಹಿಂದೆ ಬಿದ್ದಿಲ್ಲವೆಂದು ತಮಗೆ ಹೇಳುತ್ತಿದ್ದೇನೆ. ಇವತ್ತಿನ ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ನಮ್ಮ ಮಿತ್ರರು ಹೇಳಿದರು ಬರೀ ಮಾತನಾಡುವುದು ಆಗಿದೆ ಏನೂ ಕೆಲಸ ಮಾಡಲಿಲ್ಲವೆಂದು. ನಾವು ಬಿಲ್ ಮಂಡಿಸಿಲ್ಲವೆಂದು ಹೇಳಿದರು. ಬಿಲ್ ತಮ್ಮ ಮುಂದಿದೆ. ಇವತ್ತೋ ನಾಳೆಯೋ ಅಧ್ಯಕ್ಷರ ಅಪ್ಪಣೆಯನ್ನು ತೆಗೆದುಕೊಂಡು ಪಾಸ್ ಮಾಡಿರಿ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಯಾವ ಪ್ರಶ್ನೆಯೂ ಇಲ್ಲ. ನಾನು ಈಗಾಗಲೇ ಬಿಲ್ ಮಂಡಿಸಿದ್ದೇನೆ. ಅಧ್ಯಕ್ಷರು, ತಾವೇನು ತೀರ್ಮಾನ ಕೊಡುತ್ತೀರಿ ನಾನು ಸದನ ಕೊಟ್ಟ ತೀರ್ಮಾನಕ್ಕೆ ಒಪ್ಪಿಕೊಳ್ಳುತ್ತೇನೆ. ಈ ಬಗ್ಗೆ ನಾನು ಹಿಂದೆ ಬಿದ್ದಿಲ್ಲ. ತಾವೇನು ತೀರ್ಮಾನ ತೆಗೆದುಕೊಳ್ಳುತ್ತೀರೋ ತೆಗೆದುಕೊಳ್ಳಿ ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಸದಸ್ಯರುಗಳಿಗೆ ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ. ಈವೊಂದು ಪತ್ತಿನ ವ್ಯವಸ್ಥೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಬಹಳ ಮಹತ್ತರವಾದ ಸಾಧನೆಯನ್ನು ಮಾಡಿದ್ದೇವೆ. ಸಂಘಸಂಸ್ಥೆಗಳು ಸ್ವತಂತ್ರವಾಗಿ ನಿಲ್ಲಬೇಕು. ಮೊದಲು 180 ಕೋಟಿ ರೂಪಾಯಿ ಸಾಲ ಹಂಚಲಾಗಿತ್ತು. ಇವತ್ತು 700 ಕೋಟಿ ಹಂಚುವುದರ ಜೊತೆಗೆ ಸ್ವಂತ ಬಂಡವಾಳವನ್ನು ಕೂಡಿಸಿಕೊಂಡು 300 ಕೋಟಿ ರೂಪಾಯಿಗಳನ್ನು ಬಂಗಾರದ ಮೇಲೆ ಸಾಲ ಕೊಟ್ಟಿದ್ದು ಇದೆ. ತಕ್ಷಣ ರೈತರಿಗೆ ಸಾಲ ಸಿಗಬೇಕು ಆ ವ್ಯವಸ್ಥೆ ಮಾಡಿದ್ದೇವೆ. ಈವೊಂದು ದೃಷ್ಟಿಯಿಂದ ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ಬಹಳ ಮಹತ್ತರವಾದ ಸಾಧನೆ ಮಾಡಿದ್ದೇವೆ. ಅಪೆಕ್ಸ್‌ಬ್ಯಾಂಕಿನಲ್ಲಿ 1700 ಕೋಟಿ ರೂಪಾಯಿ ಡಿಪಾಸಿಟ್ ಆಗಿದೆ. ಬೆಂಗಳೂರು ಡಿಸಿಸಿ ಬ್ಯಾಂಕಿನ ಬಗ್ಗೆ ಎನ್‌ಕ್ವೈರಿ ಮಾಡಲು ಸಿಬಿಐನವರು 15 ದಿವಸಗಳಲ್ಲಿ ಬಂದು ನೋಡಿ ಹೋಗಿದ್ದಾರೆ. ಅದರ ಬಗ್ಗೆ

ಕಾರ್ಯಕ್ರಮ ಪ್ರಾರಂಭವಾಗಿದೆ. ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ಬಹಳ ಮಹತ್ತರವಾದ ಸಾಧನೆ ಮಾಡಿದ್ದೇವೆ. ಮಾನ್ಯ ಸದಸ್ಯರಾದ ಡಿ.ಆರ್.ಪಾಟೀಲ್‌ರವರು ಹೇಳಿದಹಾಗೆ ಈವೊಂದು ವ್ಯವಸ್ಥೆಯಲ್ಲಿ ನಾವೇನು ಸಾಲ ಮನ್ನಾ ಮಾಡಿದ್ದೇವೆ ಅದು ತಪ್ಪು. ಅದರಿಂದ ತೊಂದರೆಯಾಯಿತು. ಆ ದೃಷ್ಟಿಯಿಂದ ಇವತ್ತು ಸಂಘಸಂಸ್ಥೆಗಳು ವಸೂಲಾತಿಯಲ್ಲಿ ಹಿಂದೆ ಬಿದ್ದಿವೆ. ಆ ವ್ಯವಸ್ಥೆ ಕೆಟ್ಟದ್ದು ಎಂದು ಹೇಳುವ ಮಾತು ನಿಜವಾಗಲೂ ಅವರು ಏನು ಹೇಳಿದ್ದಾರೆ ಅದು ತಪ್ಪು ಕಲ್ಪನೆಯೆಂದು ನಾನು ಹೇಳುತ್ತೇನೆ. ರೈತ ಕಷ್ಟದಲ್ಲಿದ್ದಾಗ ಆತನ ನೆರವಿಗೆ ನಾವು ಹೋಗಬೇಕಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್ (ಗದಗ): ಕೃಷಿ ಪತ್ತಿನ ಸಹಕಾರಸಂಘ ಸ್ಥಾಪನೆಯಾದದ್ದು ಗ್ರಾಮೀಣ ಸಾಹುಕಾರರ ಕಪಿಮುಷ್ಠಿಯಿಂದ ಜನರನ್ನು ಬಿಡುಗಡೆ ಮಾಡಬೇಕೆನ್ನುವ ಘನ ಉದ್ದೇಶದಿಂದ 1974ನೇ ಇಸವಿಯಲ್ಲಿ ಶ್ರೀಮತಿ ಇಂದಿರಾಗಾಂಧಿಯವರು ಗ್ರಾಮೀಣ ಋಣ ಪರಿಹಾರ ಕಾನೂನು ತಂದಾಗ ಊರಿನೊಳಗೆ ಸಾಹುಕಾರರು ಯಾರೂ ರೈತರಿಗೆ ಸಾಲ ಕೊಡುತ್ತಿರಲಿಲ್ಲ. ಈಗ ನೋಡಿದ್ದೀರೋ ಇಲ್ಲವೋ ಕಳೆದ ಎರಡು ಮೂರು ವರ್ಷಗಳಿಂದ ಹಳ್ಳಿಗಳಲ್ಲಿ ಸಾಹುಕಾರರು ಸಾಲ ಕೊಡುವುದಕ್ಕೆ ಚಾಲೂ ಮಾಡಿದ್ದಾರೆ. ಇದರರ್ಥವೇನು? ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ರೈತನಿಗೆ ಬೇಕಾದಷ್ಟು ಸಾಲವನ್ನು ಕೊಡುತ್ತಿಲ್ಲ, ಬೇಕಾದಷ್ಟು ಜನರಿಗೆ ಸಾಲ ಸಂದಾಯ ಮಾಡುತ್ತಿಲ್ಲ. ನಾನು ಯಾರನ್ನು ತೆಗೆಯಬೇಕೆಂದು ಇದ್ದೆವೋ ಅವರನ್ನು ಪುನಃ ಪ್ರತಿಷ್ಠಾಪನೆ ಮಾಡುವ ವ್ಯವಸ್ಥೆಯನ್ನು ಗ್ರಾಮೀಣ ಭಾಗದಲ್ಲಿ ಕಾಣುತ್ತಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಗೆ ಲೆಕ್ಕ ಹಾಕಿದ್ದಾರೋ ನನಗಂತೂ ತಿಳಿಯದು. ಬಹುಶಃ ಮೂರು ವರ್ಷಗಳಿಂದ ಈ ವ್ಯವಸ್ಥೆ ಕಡಿಮೆಯಾಗಿದೆ - ಎಂದು ತಮಗೆ ಹೇಳುತ್ತೇನೆ. ಯಾವ ಸೊಸೈಟಿಗೆ ಹೋದರೂ ಬಂಗಾರ ಇಟ್ಟುಕೊಂಡು ಸಾಲ ಕೊಡುತ್ತಾರೆ. ಸಂಪೂರ್ಣವಾಗಿ ಸುಧಾರಿಸಿದೆಯೆಂದು ನಾನು ಹೇಳುವುದಿಲ್ಲ. ಎಲ್ಲೆಲ್ಲಿ ಸಹಕಾರ ಸಂಘಗಳು ಇವೆ ವ್ಯಾಪಾರ ದೃಷ್ಟಿಯಲ್ಲಿ 4370 ಸೊಸೈಟಿಗಳಲ್ಲಿ 2870 ಸೊಸೈಟಿಗಳು ಸಾಲ ಕೊಡಲಿಕ್ಕೆ ಶುರು ಮಾಡಿದ ಮೇಲೆ ಬಡ್ಡಿ ವ್ಯಾಪಾರಸ್ಥರು ನಿಂತುಹೋಗಿದ್ದಾರೆ. ಅದನ್ನು ಬೇಕಾದರೆ ತಾವು ತನಿಖೆ ಮಾಡಬಹುದು. ಇನ್ನು ಕೆಲವು ಸೊಸೈಟಿಗಳನ್ನು ನಾವು ಮಾಡಬೇಕಾಗುತ್ತದೆ. ಈ ವರ್ಷ ನಾವು 1800 ಸೊಸೈಟಿಗಳನ್ನು ತೆಗೆದುಕೊಂಡರೆ 4 ಸಾವಿರ ಸೊಸೈಟಿಗಳನ್ನು ಶಕ್ತಿಗೊಳಿಸಿ ಎಲ್ಲ ಸಾಲಗಳಿಗೆ ರೈತರಿಗೆ ಬೇರೆ ಕಡೆಗೆ ಹೋಗಬಾರದು. ಕೇವಲ ಸರಳ ಬಡ್ಡಿ ಆಧಾರದ ಮೇಲೆ ಬಂಗಾರ ಇಟ್ಟರೂ ಸಾಲ ಸಿಗಬೇಕು. ರೈತ ಏನೇ ಇಟ್ಟರೂ ಸಾಲ ಸಿಗುವಂತಹ ವ್ಯವಸ್ಥೆಯನ್ನು ಮಾಡಿದ್ದೇವೆ. ಇದು ತಮಗೂ ಗೊತ್ತಿದೆ. ಇಡೀ ರಾಜ್ಯಕ್ಕೆ ಆಗಿದೆಯೆಂದು ಹೇಳುವುದಿಲ್ಲ. ಬಹುಮಟ್ಟಿಗೆ ಸಾಧಿಸಿದ್ದೇವೆಂದು ಹೇಳುತ್ತೇನೆ. ಬಡ್ಡಿ ಮನ್ನಾ ಮಾಡುವುದರಿಂದ ಈವೊಂದು ಸಾಲದ ವ್ಯವಸ್ಥೆ ಹಾಳಾಗಿ ಹೋಯಿತು ಎಂದು ಹೇಳುವ ಮಾತು ಸರಿಯಲ್ಲ. ಉದಾಹರಣೆಗೆ ನಾನು ಹೇಳುತ್ತೇನೆ, ಬಡ್ಡಿಯನ್ನು

ಮನ್ನಾ ಮಾಡಿದಾಗ ಹಿಂದೆ ಮಾಡಿದಾಗ ನಿಮಗೆ ಬಡ್ಡಿ ಮನ್ನಾ ಮಾಡಿದ್ದೇವೆ ಸಾಲ ಕೊಡುವುದಿಲ್ಲವೆಂದು ರೈತರಿಗೆ ಸಾಲ ಕೊಡಲಿಲ್ಲ. ಉದಾಹರಣೆಗೆ ಒಂದೊಂದು ಸೊಸೈಟಿಯಲ್ಲಿ ಒಬ್ಬೊಬ್ಬರಿಂದ 1 ಸಾವಿರ, 2 ಸಾವಿರ ಸಾಲ ಬರಬೇಕಾಗಿತ್ತು. ಸಾಲ ಕೊಡದಿದ್ದರೆ ಸೊಸೈಟಿಗಳನ್ನು ನಡೆಸುವುದು ಹೇಗೆ? ನಾನು ಅಧಿಕಾರಕ್ಕೆ ಬಂದಾಗ ಆ ವ್ಯವಸ್ಥೆಯಿತ್ತು. ತಮಗೆ ಗೊತ್ತಿರುವ ಹಾಗೆ ಕದಡಿಯಲ್ಲಿ ಬೆಳದಡಿ ಇಲ್ಲಿ 2 ಸಾವಿರ, 3 ಸಾವಿರ ರೈತರಿಂದ ಸಾಲ ಬರುವುದು ಇದೆ. ಸಾಲ ಕಟ್ಟದಿದ್ದರೆ ಸೊಸೈಟಿ ಹೇಗೆ ನಡೆಸಬೇಕು? 4 ವರ್ಷದಿಂದ ಸಾಲ ಕಟ್ಟಲಿಲ್ಲ. ಏಕೆಂದರೆ ಮನ್ನಾ ಮಾಡಿಕೊಂಡಿದ್ದಾರೆನ್ನುವ ದೃಷ್ಟಿಯಿಂದ ಇದೇನೂ ಹೊಸದಲ್ಲ. ಜನರಿಗೆ ಸಾಲ ಕೊಡಲಿಲ್ಲ. ಅದು ತಪ್ಪಾಗಿ ಇವತ್ತು ವ್ಯವಸ್ಥೆ ಕೆಟ್ಟಿದೆ. ನಾವು ಬಂದಮೇಲೆ ತಮಗೆ ಹೇಳಿದ ಹಾಗೆ 1995ರಲ್ಲಿ 60 ಪರ್ಸೆಂಟ್ ಸಾಲ ರಿಕವರಿಯಾಗಿದೆ. 1996ರಲ್ಲಿ 78 ಪರ್ಸೆಂಟ್ ರಿಕವರಿಯಾಗಿದೆ. 1997ರಲ್ಲಿ 70 ಪರ್ಸೆಂಟ್ ರಿಕವರಿಯಾಗಿದೆ. 1998ರಲ್ಲಿ 62 ಪರ್ಸೆಂಟ್ ರಿಕವರಿಯಾಗಿದೆ. ಎಲ್ಲೆಲ್ಲಿ ತೊಂದರೆಯಾಗಿದೆ ಅಲ್ಲಿ ವಸೂಲಿಗೆ ಹೋಗಬೇಡಿಯೆಂದು ಹೇಳಿದ್ದೇನೆ. ರೈತರೇ ಮುಂದೆ ಬಂದು ಕೊಟ್ಟಿದ್ದಾರೆ. ಕೆಲವು ಸಲ ನಾವು ವಸೂಲಿಗೆ ಹೋಗಿಲ್ಲ. ವಸೂಲಿ ಮಾಡುವುದು ಬೇಡವೆಂದು ಹೇಳಿದ್ದೇವೆ. ವಸೂಲಿಯನ್ನು ಮುಂದೆ ಹಾಕುವ ವ್ಯವಸ್ಥೆ ಮಾಡಿದ್ದೇವೆ. ಬಡ್ಡಿ ಮನ್ನಾ ಆದ ಕೂಡಲೇ ಅವನು ತೆಗೆದುಕೊಂಡ ಸಾಲವನ್ನು ಕಟ್ಟುವುದು ಬೇಡವೇ? ಕಟ್ಟದಿರುವುದು ತಪ್ಪು.

ಶ್ರೀ ಡಿ.ಆರ್.ಪಾಟೀಲ್: ತಾವು ಹೇಳುವ ಹಾಗೆ ಕೆಲವು ಹಳ್ಳಿಗಳಲ್ಲಿ ವಸೂಲಿ ಮಾಡಿದ್ದಾರೆ. ಉಳಿದ ಕಡೆ ಹೇಗೆ ಮಾಡಿದ್ದಾರೋ ನನಗೆ ಗೊತ್ತಿಲ್ಲ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಕೆಸಿಸಿ ಬ್ಯಾಂಕ್‌ನವರು ಕ್ಯಾಷ್‌ಕ್ರೆಡಿಟ್ ಸಾಲ ಕೊಟ್ಟಿದ್ದಾರೆ. ಅದನ್ನು ಸದಸ್ಯರುಗಳಿಗೆ ಅಡ್ಜೆಸ್ಟ್ ಮಾಡಿ ಸಾಲ ವಸೂಲಿಯೆಂದು ತೋರಿಸಿದ್ದಾರೆ. ಹೊರತಾಗಿ ರೈತರೇ ಬಂದು ಸಾಲ ತುಂಬಿದ್ದು ಬಹಳ ಕಡಿಮೆ. ವಾಸ್ತವ ಚಿತ್ರ ತಮ್ಮ ಗಮನಕ್ಕೆ ಏನು ಬಂದಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಅದು ತಪ್ಪು ಅಭಿಪ್ರಾಯ ಇದೆ. ಅದು ಕ್ಯಾಷ್‌ಕ್ರೆಡಿಟ್ ಅಲ್ಲ. ರೈತರ ಮಾಲನ್ನು ಒತ್ತೆ ಇಟ್ಟು ಸಾಲ ತೆಗೆದುಕೊಂಡಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್: ಕ್ಯಾಷ್‌ಕ್ರೆಡಿಟ್ ಕೊಟ್ಟು ಸಾಲ ಅಡ್ಜೆಸ್ಟ್ ಮಾಡಿದ್ದಾರೆ, ಏನು ಮಾಡುತ್ತೀರಿ ಹೇಳಿ?

12.00 ಪಿ.ಎಂ

ಶ್ರೀ ಎಸ್.ಎಸ್.ಪಾಟೀಲ್: ತಾವು ಹೇಳಿದ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನಿಯಮ ಬಿಟ್ಟು ಯಾವುದನ್ನೂ ಮಾಡಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಈ ಸದನದಲ್ಲಿ ನಾವು ನೀವು ಸುಳ್ಳು ಮಾತನಾಡುವುದು ಬೇಡ. ಕ್ಯಾಷ್‌ಕ್ರೆಡಿಟ್ ಕೊಟ್ಟು ಸಾಲ ಅಡ್ಜಸ್ಟ್ ಆಗಿದ್ದರೆ ಆ ಅಧಿಕಾರಿಗಳ ಮೇಲೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಅದನ್ನು ಹೇಳಿರಿ. ನಿಮಗೆ ನಾಳೆ ಮುಂಜಾನೆ ನಾನು ಮಾಹಿತಿಯನ್ನು ಕೊಟ್ಟುಬಿಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ಕೇಳಿ, ನಬಾರ್ಡ್ ನಿಯಮ ಬಿಟ್ಟು ಮಾಡಿದ್ದರೆ ಖಂಡಿತವಾಗಿಯೂ ಕ್ರಮ ತೆಗೆದುಕೊಳ್ಳುತ್ತೇನೆ. ನಬಾರ್ಡ್ ನಿಯಮ ಏನಿದೆ, ಅದನ್ನು ಬಿಟ್ಟು ಮಾಡುವುದಕ್ಕೆ ಆಗುವುದಿಲ್ಲ. ನಬಾರ್ಡ್ ನಿಯಮ ಬಿಟ್ಟು ಮಾಡಿದರೆ ನಾಳೆ ರಿಫೈನಾನ್ಸ್ ನಮಗೆ ಸಿಗುವುದಿಲ್ಲ. ನಬಾರ್ಡ್ ನಿಯಮದ ಹಿನ್ನಲೆಯಲ್ಲಿ ಮಾಡಿದ್ದರೆ ಮಾತ್ರ ನಮಗೆ ರಿಫೈನಾನ್ಸ್ ಸಿಗುತ್ತದೆ. ಒಂದು ವೇಳೆ ನಬಾರ್ಡ್ ನಿಯಮ ಬಿಟ್ಟು ಮಾಡಿದ್ದರೆ ಖಂಡಿತವಾಗಿಯೂ ನಾನು ಕ್ರಮ ತೆಗೆದುಕೊಳ್ಳುತ್ತೇನೆ. ಆ ಮಾತು ಬೇರೆ. ಹೀಗೆ ಇದೊಂದು ರೈತರ ಪರವಾಗಿ ಕೃಷಿ ಪತ್ತಿನ ವ್ಯವಸ್ಥೆಯಲ್ಲಿ ನಾವು ಕಳೆದ ಮೂರು ವರ್ಷಗಳಲ್ಲಿ ಗಣನೀಯ ಸಾಧನೆ ಮಾಡಿದ್ದೇವೆ ಎಂದು ಹೇಳುವುದಕ್ಕೆ ನನಗೆ ಸಂತೋಷ ಮತ್ತು ಹೆಮ್ಮೆಯಾಗುತ್ತದೆ. ಇದನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ರಸಗೊಬ್ಬರ ವಿತರಣೆಯಲ್ಲಿ ಬಹುಶಃ ನಾವು ವಿತರಣೆ ಮಾಡತಕ್ಕಂಥ ರಸಗೊಬ್ಬರದಲ್ಲಿ 30 ಪರ್ಸೆಂಟನ್ನು ಸಹಕಾರ ಸಂಘಗಳ ಮೂಲಕ ಮಾಡುತ್ತೇವೆ. ಇದು ಇನ್ನೂ ಸಂಪೂರ್ಣವಾಗಿ ಆಗಬೇಕು. ಅದನ್ನು ನಮಗೆ ಮಾಡುವುದಕ್ಕೆ ಆಗಿಲ್ಲ. ಅದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಮಾರಾಟ ಮಹಾಮಂಡಳ ಇನ್ನೂ ಬಹಳ ಚುರುಕಾಗಿ ಕೆಲಸ ಮಾಡಬೇಕಾಗಿದೆ. ಅದಕ್ಕಾಗಿ ನಾವು ಹೆಚ್ಚು ಸಹಾಯ ಮಾಡುತ್ತಿದ್ದೇವೆ. ಇನ್ನೂ ಸಹಾಯ ಸಾಲದು ಎನ್ನುವ ದೃಷ್ಟಿಯಿಂದ ಈ ಒಂದು ದಿಸೆಯಲ್ಲಿಯೂ ಕೂಡ ಇಡೀ ರಾಜ್ಯದಲ್ಲಿ ನಡೆದಿರತಕ್ಕಂಥ ಗೊಬ್ಬರ ಮಾರಾಟದಲ್ಲಿ ಸಹಕಾರ ಸಂಘಗಳ ಮುಖಾಂತರ 30 ಪರ್ಸೆಂಟ್ ಗೊಬ್ಬರವನ್ನು ರೈತರಿಗೆ ಇವತ್ತು ಒದಗಿಸುತ್ತಿದ್ದೇವೆ. ಅದೇರೀತಿಯಿಂದ ಇವತ್ತು ಸಕ್ಕರೆ ಉತ್ಪಾದನೆ ಕೂಡ. ಅದರಲ್ಲೂ ಸಹ ನಾವು ಬಹಳ ಮುಂಚೂಣಿಯಲ್ಲಿದ್ದೇವೆ. ಸುಮಾರು ಉತ್ಪಾದನೆಯಾಗತಕ್ಕಂಥ ಸಕ್ಕರೆಯಲ್ಲಿ 42.5 ಪರ್ಸೆಂಟ್ ಸಕ್ಕರೆಯನ್ನು ನಾವು ಸಹಕಾರ ಸಂಘಗಳ ಮೂಲಕ ಉತ್ಪಾದನೆ ಮಾಡುತ್ತಿದ್ದೇವೆ. ಈ ನ್ಯಾಯಬೆಲೆಯ ಅಂಗಡಿಗಳು - ಇದು ಹಿಂದಿನ ಅಂಕಿಗಳು ಎಂದು ಕಾಣುತ್ತದೆ. ಇದು 46 ಅಲ್ಲ, ನಮ್ಮ ಬಸವಣ್ಣಪ್ಪನವರು ಬಂದಮೇಲೆ ಇದು 56ರ ಮೇಲೆ ಹೋಗಿದೆ. ಅರ್ಧದಷ್ಟು ನ್ಯಾಯಬೆಲೆ ಅಂಗಡಿಗಳನ್ನು ನಾವೇ ಸಹಕಾರ ಸಂಘಗಳ ಮೂಲಕ ನಡೆಸುತ್ತಿದ್ದೇವೆ. ಇವತ್ತು ಆ ಕ್ಷೇತ್ರದಲ್ಲಿಯೂ ಕೂಡ ಬಹಳ ಚೆನ್ನಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಇನ್ನು, ಕ್ಷೀರ ಉತ್ಪಾದನೆಯಲ್ಲಿ ಬಹಳ ಮಹತ್ವವಾದಂಥ ಕ್ರಾಂತಿಯನ್ನೇ ನಾವು ಮಾಡಿದ್ದೇವೆ. ಬಹುಶಃ ಇದು ಇನ್ನೂ ಆಗಬೇಕಾಗಿದೆ. ಇದು ಏನೂ ಸಾಲದು. ಕೆಲವು ಯೂನಿಟ್‌ಗಳು ಇನ್ನೂ ಹಾನಿಯಲ್ಲಿವೆ. ಅವನ್ನು ಸುಧಾರಿಸಬೇಕಾಗಿದೆ. ಕೆಲವಲ್ಲಿ ದೋಷವಾಗಿದೆ. ಮಾನ್ಯ

ಬೆಲ್ಲದ್ ಅವರು ತಮ್ಮದು ಹಾನಿಯಾಗಿದೆ ಎಂದು ಹೇಳುತ್ತಾರೆ. ಹಾನಿಯಾಗಿದೆ, ಇಲ್ಲವೆಂದು ನಾನು ಹೇಳುವುದಿಲ್ಲ. ಹಾಳಾಗಿದ್ದು ಇವತ್ತು ಪುನಶ್ಚೇತನ ಮಾಡಿಕೊಂಡರು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಹಾಲು ಉತ್ಪಾದಕರ ಸಹಕಾರ ಸಂಘ ಮಾಡುವುದರ ಮೂಲಕ ರೈತರ ಒಂದು ಸಹಕಾರ ಕ್ಷೇತ್ರದ ಕಲ್ಪನೆಯನ್ನು ತಾವು ದಯವಿಟ್ಟು ಹೇಳಿ. ಉತ್ಪಾದನೆ ಮಾಡುವವರ ಜೀವನ ಸರಿಯಾದ ಬೆಲೆಯಿಲ್ಲದೆ ನಾಶವಾಗುತ್ತಿದೆ. ಸಹಕಾರ ಕ್ಷೇತ್ರದ ಮೂಲಕ ಅವನಿಗೆ ಉತ್ತಮ ಬೆಲೆಯನ್ನು ಕೊಟ್ಟು ಹಾಲು ತೆಗೆದುಕೊಂಡು ಹೋಗತಕ್ಕಂಥ ಒಂದು ಚಿಂತನೆಯ ಆಧಾರದ ಮೇಲೆ ಹಾಲು ಉತ್ಪಾದಕರ ಕ್ಷೇತ್ರವನ್ನು ತಾವು ಸೃಷ್ಟಿಮಾಡಿ. ಅವನಿಗೆ ಐಆರ್‌ಡಿಪಿ ಸಾಲ ಕೊಟ್ಟು, ಎಮ್ಮೆ ಸಾಲವನ್ನು ಕೊಟ್ಟು, ಮಳೆಯಾಧಾರಿತ ಪ್ರದೇಶದ ರೈತರು ನೂರಕ್ಕೆ ತೊಂಭತ್ತು ಜನ ಎಮ್ಮೆ, ಹಸುವಿನ ಹಾಲಿನ ಮೂಲಕ ಜೀವನ ಸಾಗಿಸತಕ್ಕಂಥ ಜನರ ಹತ್ತಿರ ಈ ಬೆಲೆ ನಿಗದಿ ಮೂಲಕ ಹಾಲು ತೆಗೆದುಕೊಂಡು ಹೋಗುತ್ತಿದ್ದೀರಲ್ಲಾ, ಇದು ಸಹಕಾರ ಕ್ಷೇತ್ರನೋ, ಇಲ್ಲ ಹಾಲುಕಳ್ಳತನವೋ ತಾವು ದಯವಿಟ್ಟು ಹೇಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಪುಟ್ಟಣ್ಣಯ್ಯ ಅವರು ಹೇಳಿದ್ದು ನನಗೆ ಅರ್ಥವಾಗುತ್ತದೆ. ನಾವು ಹಾಲು ತೆಗೆದುಕೊಂಡು 6 ರೂಪಾಯಿ - ಏಳು ರೂಪಾಯಿ ಕೊಡುತ್ತೇವೆ. ಇವತ್ತು ಏನಾಗಿದೆ ಎಂದರೆ ಅದು ಎಂಥದ್ದೋ ನೀರು ಕುಡಿಯುತ್ತೇವಲ್ಲಾ, 'ಬಿಸ್ಲೇರಿ'ಗೆ ಹದಿನೈದು ರೂಪಾಯಿ ಇದೆ. ಆದರೆ ನಾವು ಹಾಲಿಗೆ ಏಳು ರೂಪಾಯಿ ಕೊಡುತ್ತಿದ್ದೇವೆ. ಅದು ದುರ್ದೈವದಿಂದ ಪುಟ್ಟಣ್ಣಯ್ಯನವರೇ, ತಮಗೂ ಗೊತ್ತಿದೆ. ಈರುಳ್ಳಿ ಬೆಲೆ 20 ರೂಪಾಯಿ ಆದಾಗ 'ಕಣ್ಣೀರು' ಎಂದು ಎಲ್ಲಾ ಪೇಪರ್‌ನಲ್ಲಿ ಬಂತು. ಈರುಳ್ಳಿ ಬೆಲೆ ಒಂದು ರೂಪಾಯಿ ಆದಾಗ ಯಾರೂ ಕೇಳುವವರು ಇಲ್ಲ. ಈ ಪರಿಸ್ಥಿತಿ ಇರುತ್ತದೆ. ನಾವು ರೈತರಿಗೆ ಹೆಚ್ಚು ಕೊಡಬೇಕು ಎಂದು ತಿಳಿದುಕೊಂಡು 14 ರೂಪಾಯಿ ಮಾಡುವುದಕ್ಕೆ ಆಗುವುದಿಲ್ಲ. ಹಾಗೆ ಮಾಡಿದರೆ ಪ್ರೈವೇಟ್‌ನವರು ಬಂದು ನಮ್ಮ ಎದುರುಗಡೆ ಮಾರುತ್ತಾರೆ. ಅವರ ಕೂಡ ನಾವು ಕಾಂಪೀಟ್ ಮಾಡಬೇಕಾಗುತ್ತದೆ. ಆದರೆ ಇದು ಕಡಿಮೆ ಎಂದು ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ: ಅವರ ಕೂಡ ಕಾಂಪೀಟ್ ಮಾಡಬೇಕು. ಆದರೆ ಉತ್ತಮವಾದಂಥ ಹಾಲು ಕೊಡಲಿಕ್ಕೆ ಪ್ರಯತ್ನ ಮಾಡಿದರೆ ಒಳ್ಳೆಯದಾಗಿ ನಡೆಯುತ್ತದೆ. ಈಗ ಇರುವುದು ಸರಿಯಾಗಿ ವಿತರಣೆಯಾಗುತ್ತಿಲ್ಲ, ಸರಿಯಾಗಿ ಕಲೆಕ್ಟ್ ಮಾಡುತ್ತಿಲ್ಲ. ಅದರ ಬೆಳವಣಿಗೆ ಕೂಡ ಕುಂಠಿತವಾಗುತ್ತಿದೆ. ಅದಕ್ಕೆ ಮಹತ್ವ ಕೊಡಿ.

ಶ್ರೀ ಅರಗ ಜ್ಞಾನೇಂದ್ರ: ಮಾನ್ಯ ಮಂತ್ರಿಗಳೇ, ಎಲ್ಲದಕ್ಕಿಂತಲೂ ಪ್ರೋಸೆಸಿಂಗ್ ಕಾಸ್ಟ್ ಜಾಸ್ತಿಯಾಗಿದೆ. ಇದಕ್ಕೆ ಕಾರಣ ಬೇಕಾಬಿಟ್ಟಿಯಾಗಿರತಕ್ಕಂಥ

ಅಪಾಯಿಂಟ್‌ಮೆಂಟ್ಸ್. ನೀವು ಡೈರಿಗಳಲ್ಲಿ ಹೋಗಿ ನೋಡಿ. ಒಂದು ಲಕ್ಷ ಲೀಟರ್ ಹಾಲು ಪ್ರೋಸಸ್ ಮಾಡಲಿಕ್ಕೆ ಎಷ್ಟು ಜನ ಇರಬೇಕು ಎನ್ನುವಂಥಾದ್ದು ಇದೆ. ನಾನು ಡೆನ್ಮಾರ್ಕಿಗೆ ಕೂಡ ಹೋಗಿದ್ದೇನೆ. ಅಲ್ಲಿರತಕ್ಕಂಥ ನ್ಯಾಷನಲ್ ಡೈರಿಯಲ್ಲಿ ಇರತಕ್ಕಂಥ ಜನ ಎಷ್ಟು, ನಮ್ಮ ಡೈರಿಯಲ್ಲಿ ಇರತಕ್ಕಂಥ ಜನ ಎಷ್ಟು? ಇಲ್ಲಿ ಬೇಕಾಬಿಟ್ಟಿಯಾಗಿ ಅಪಾಯಿಂಟ್ ಮಾಡಿದ್ದಾರೆ. ಅವರ ಮೇಲೆ ದಯವಿಟ್ಟು ಕಡಿವಾಣ ಹಾಕಿ. ಆವಾಗ ರೈತರಿಗೆ ನ್ಯಾಯವನ್ನು ದೊರಕಿಸಿಕೊಡಬಹುದು. ಕರೆದು ಹಾಲುಕೊಟ್ಟು ಊಟ ಮಾಡುವವರಿಗೆ ನಾವು ನ್ಯಾಯವನ್ನು ದೊರಕಿಸಿಕೊಡಬಹುದು.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಕರ್ನಾಟಕದಲ್ಲಿ ಸಹಕಾರ ಕ್ಷೇತ್ರದಲ್ಲಿ ಒಂದು ಲೀಟರ್‌ಗೆ ಎಷ್ಟು ಕೊಡುತ್ತಿದ್ದಾರೆ, ಗುಜರಾತಿನಲ್ಲಿ ಎಷ್ಟು ಕೊಡುತ್ತಿದ್ದಾರೆ ಎಂದು ಕ್ಲಾರಿಫೈ ಮಾಡಿದರೆ ಸಾಕು.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಸಹಕಾರ ಸಚಿವರು ಹಾಲಿನ ಬಗ್ಗೆ ಮಾತನಾಡುವುದು ದುರ್ದೈವದ ಸಂಗತಿ. ಸ್ವಾಮಿ, ತಮಗೆ ಇರುವುದು ಒಂದೇ ಕಂಟ್ರೋಲ್, ಅದು ಎಲೆಕ್ಷನ್ ಮಾಡಿಸುವುದಕ್ಕೆ. ನಾಲ್ಕೈದು ವರ್ಷವಾಯಿತು ತುಮಕೂರು ಡೈರಿ ಎಲೆಕ್ಷನ್ ಆಗಿ, ಗುಲ್ಬರ್ಗಾ ಡೈರಿ ಬೋರ್ಡ್ ಎಲೆಕ್ಷನ್ ಆಗಿ, ಬೆಳಗಾಮ್ ಡೈರಿ ಬೋರ್ಡ್ ಎಲೆಕ್ಷನ್ ಆಗಿ, ಧಾರವಾಡದ್ದು ಎಲೆಕ್ಷನ್ ಆಗಿ. ಅದಕ್ಕಾದರೂ ಉತ್ತರ ಹೇಳುತ್ತೀರಾ? ಸ್ಪೆಶಲ್ ಆರ್ಡರ್ ಮಾಡಿಬಿಟ್ಟು ಒಬ್ಬ ಅಧಿಕಾರಿಯನ್ನು ಅಲ್ಲಿ ಇರಬೇಕು ಎಂದು ಹೇಳಿ ಮೂರು ವರ್ಷಗಳ ಮೇಲೆ ಇಡುವುದಕ್ಕೆ ಸಾಧ್ಯವಿಲ್ಲ ಎಂಬ ನಿಯಮ ಇದ್ದರೂ ನಾಲ್ಕನೇ, ಐದನೇ ವರ್ಷಕ್ಕೆ ಮುಂದುವರೆಸುತ್ತಿದ್ದೀರಿ. ಹಾಗಾದರೆ ನೀವು ರೈತರಲ್ಲವೇನು? ಇಷ್ಟು ಹೊತ್ತಿನವರೆಗೂ ರೈತರ ಪರವಾಗಿ ಭಾಷಣ ಮಾಡಿಬಿಟ್ಟಿರಿ. ಆ ಮ್ಯಾನೇಜ್‌ಮೆಂಟನ್ನು ರೈತರಿಗೆ ಕೊಡುವುದಕ್ಕೆ ನಿಮಗೇನು ತೊಂದರೆ ಇದೆ? ಏಳೂವರೆ ರೂಪಾಯಿಗೆ ಹಾಲು ತೆಗೆದುಕೊಂಡು ಹನ್ನೊಂದುರೂಪಾಯಿಗೆ ಮಾರುತ್ತೀರಿ. ನೀವು ಬಿಸ್ಲೇರಿ ವಿಷಯ ಮಾತನಾಡುತ್ತೀರಿ. ನಾವು ಕೇಳುವ ಪ್ರಶ್ನೆ ಎಂದರೆ ಇಷ್ಟು ಅಂತರವನ್ನು ಮಧ್ಯೆ ಏಕೆ ಇಟ್ಟಿದ್ದೀರಿ? ತಂದು ಮಾರುವುದರ ಮಧ್ಯೆ ಇಷ್ಟು ಅಂತರ ಏಕೆ ಇಟ್ಟಿದ್ದೀರಿ? ಜ್ಞಾನೇಂದ್ರ ಅವರು ಹೇಳಿದ ಹಾಗೆ ಅಪಾಯಿಂಟ್‌ಮೆಂಟ್ ಒಂದು ಇರಬಹುದು. ಅಲ್ಲಿ ಇರುವ ಸಂಬಳಗಳನ್ನು ತೆಗೆದು ನೋಡಿದ್ದೀರಾ? ಪ್ರಮೋಷನ್ನುಗಳನ್ನು ತೆಗೆದು ನೋಡಿದ್ದೀರಾ? ತಾವು ಯಾರದ್ದೋ ದಾಕ್ಷಿಣ್ಯಕ್ಕೆ 'ಸರಿ' ಎಂದು ರಿಜಿಸ್ಟ್ರಾರ್‌ಗೆ ಕಳುಹಿಸಿ ನಮ್ಮ ಹಾಲು ಉತ್ಪಾದಿಸುವವರನ್ನೆಲ್ಲಾ ನಿರ್ನಾಮ ಮಾಡಿ ಕುಳಿತುಬಿಟ್ಟರೆ ಹೇಗೆ? 69ರಲ್ಲಿ ಇನ್‌ಸೆಮಿನೇಶನ್ ಪ್ರೋಗ್ರಾಮ್ ಕರ್ನಾಟಕದಲ್ಲಿ ಪ್ರಾರಂಭವಾಯಿತು. ಹತ್ತು ವರ್ಷ ಆದಮೇಲೆ ಹೊರಗಡೆಯಿಂದ ಹಸು ತರಬಾರದಾಗಿತ್ತು. ಆದರೆ ಇವತ್ತೂ ಕೂಡ ತಮಿಳುನಾಡಿನಿಂದ ಹಸು ತೆಗೆದುಕೊಳ್ಳಿ ಎಂದು ನಿಯಮ ಮಾಡಿದ್ದಾರೆ. ಪ್ರತಿ ಹಸು ಕೊಳ್ಳಲಿಕ್ಕೆ ಇಷ್ಟಿಷ್ಟು ಎಂದು ಕಮೀಷನ್. ನೀವು ಸರ್ಕಾರದವರು ಎಸ್.ಸಿ.ಪಿ.

ಪ್ರೋಗ್ರಾಮ್ ಎಲ್ಲಾ ಅವರಿಗೆ ವಹಿಸಿಕೊಟ್ಟಿದ್ದೀರಿ. ಡೈರಿಯಲ್ಲಿರುವ ವೆಟರ್ನರಿ ಡಾಕ್ಟರ್‌ಗಳಿಗೆ ಲಂಚ ಎನ್ನುವುದು ಗೊತ್ತಿರಲಿಲ್ಲ. ಸರ್ಕಾರ ಈ ಕಾರ್ಯಕ್ರಮ ಮಾಡುವುದಕ್ಕೆ ಶುರುಮಾಡಿ ಪ್ರತಿಯೊಬ್ಬ ಡಾಕ್ಟರ್ ಇವತ್ತು ದುಡ್ಡು ತಿನ್ನುತ್ತಿದ್ದಾರೆ. ಎಲ್ಲಾ ತಮಿಳುನಾಡಿಗೆ ಹೋಗಿ, ಕೊಯಮತ್ತೂರಿಗೆ ಹೋಗಿ ಎಂದು ಹೇಳುತ್ತಾರೆ. ಇದನ್ನು ಏನಾದರೂ ನಿಯಂತ್ರಣ ಮಾಡಿದ್ದೀರಾ? ನೀವು ಈಗ ಕೊಟ್ಟಿರುವ ಮ್ಯಾನೇಜರ್, ಜನರಲ್ ಮ್ಯಾನೇಜನ್, ಎಂ.ಡಿ. ಇಷ್ಟು ಪೋಸ್ಟ್‌ಗಳನ್ನು ಹೆಚ್ಚು ಮಾಡಿದ್ದೀರಲ್ಲಾ, ಇದಕ್ಕೆ ಏನಾದರೂ ತರ್ಕ ಇದೆಯಾ? ಸ್ವಲ್ಪ ನೋಡಬೇಕು ಸ್ವಾಮಿ. ನಮಗೆ ಸಂಬಂಧವಿಲ್ಲ ಎಂದು ನೀವು ತಿಳಿದುಕೊಂಡುಬಿಟ್ಟಿದ್ದೀರಿ. ಡೈರಿ ಕೋಆಪರೇಟಿವ್ಸ್‌ನಲ್ಲಿ 5600 ಸೊಸೈಟಿಗಳು ಇರುವುದು ಇದೊಂದೇ ಸೆಕ್ಟರ್‌ನಲ್ಲಿ. 300-400 ಮಹಿಳಾ ಸೊಸೈಟಿಗಳು ಇರುವುದು.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಜ್ಞಾನೇಂದ್ರ ಅವರು ಹೇಳಿದ ಹಾಗೆ ಅಲ್ಲಿ ಹೆಚ್ಚಿಗೆ ನೌಕರಿದಾರರನ್ನು ನೇಮಿಸಿಕೊಂಡಿದ್ದಾರೆ. ನೀವು ಏಕೆ ಕಡಿವಾಣ ಹಾಕಬಾರದು ಎನ್ನುವ ಮಾತನ್ನು ಅವರು ಹೇಳಿದರು. ಒಂದು ಕಡೆ ನಾವು ಹೇಳುತ್ತೇವೆ, ಅದಕ್ಕೆಲ್ಲ ಸ್ವಾಯತ್ತತೆ ಕೊಡಬೇಕು, ಎಲ್ಲಿಯಾದರೂ ಸರ್ಕಾರ ಕೈಹಾಕಬಾರದು ಎಂದು ನಮ್ಮ ಮಾಧುಸ್ವಾಮಿಯವರು ಒಂದು ಕಡೆ ಹೇಳುತ್ತಾರೆ. ಇನ್ನೊಂದುಕಡೆ ನಮ್ಮ ಡಿ.ಆರ್.ಪಾಟೀಲರು ಹೇಳಿದರು ನೀವು ಅದನ್ನು 107ನ್ನು ತಿದ್ದಿ, ನೀವು ಎಲ್ಲಾ ಅಧಿಕಾರವನ್ನು ಸರ್ಕಾರದಲ್ಲೇ ಇಟ್ಟುಕೊಂಡುಬಿಟ್ಟಿರಿ ಎಂದು ಹೇಳಿದರು. ಇದು ಬಂದಮೇಲೆ ತಿದ್ದಿದೆ. ಅಲ್ಲೇ ಅಧಿಕಾರಿಗಳನ್ನು ತೆಗೆದುಕೊಳ್ಳುವುದನ್ನು ಅವರು ಹೇಳಿದಹಾಗೆ ಬೋರ್ಡು ಇದ್ದಾಗಲೇ ಮಾಡಿದ್ದಾರೆ. ನಮ್ಮ ಸೊಸೈಟಿಯಲ್ಲೂ ಹೆಚ್ಚು ಮಾಡಿದ್ದಾರೆ. ತುಮಕೂರಿನಲ್ಲಿ ಹೆಚ್ಚಿಗೆ ಮಾಡಿದ್ದಾರೆ. ನಾನು ಇಲ್ಲ ಎಂದು ಹೇಳುವುದಿಲ್ಲ. ಅದು ತಪ್ಪಾಗಿದೆ. ಆದರೆ ಅವರನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಕೋರ್ಟಿಗೆ ಹೋಗಿ ಕೇಸ್ ಹಾಕಿ ಸ್ಟೇ ತಂದುಬಿಡುತ್ತಾರೆ. ಈ ಪರಿಸ್ಥಿತಿಯಿಂದ ಇವತ್ತು ಲಕ್ಷಾನುಗಟ್ಟಲೆ ಹಾಳಾಗುವುದಕ್ಕೆ ಇದು ಒಂದು ಕಾರಣ ಇದೆ. ಬಹುಶಃ ಅದು ಬೋರ್ಡ್ ಇದ್ದಾಗಲೇ ಆಗಿದೆ. ಮಾಧುಸ್ವಾಮಿಯವರೇ, ಇದು ಸ್ಪೆಷಲ್ ಆಫೀಸರ್ ಮಾಡಿದ್ದು ಅಲ್ಲ. ಸ್ಪೆಷಲ್ ಆಫೀಸರ್ ಮಾಡಬೇಕಾದರೆ ಕಾನೂನಿನ ಪ್ರಕಾರವೇ ಮಾಡಿದ್ದೇವೆ. ನಾನು ನಿಮ್ಮ ಪರವಾಗಿಯೇ ಇದ್ದೇನೆ. ಅಧಿಕಾರಿಗಳ ಕೈಗೆ ಸಂಸ್ಥೆಯನ್ನು ಕೊಡಬೇಕು ಎಂದು ಅಲ್ಲ. ತಾವು ಅಮೆಂಡ್‌ಮೆಂಟನ್ನು ತಂದುಬಿಟ್ಟರೆ ಅವರ ಅಧಿಕಾರವೂ ಉಳಿಯುವುದಿಲ್ಲ ಮತ್ತು ಸಂಪೂರ್ಣವಾಗಿ ನಿಮಗೆ ಅಧಿಕಾರ ಬರುತ್ತದೆ. ಆದ್ದರಿಂದ ದಯವಿಟ್ಟು ತಾವು ತೀವ್ರದಲ್ಲಿ ಇಲ್ಲಿ ಒಪ್ಪಿಕೊಂಡುಬಿಟ್ಟರೆ ಒಳ್ಳೆಯದು. ನಿಯಮ 121 ತೆಗೆದುಬಿಡುತ್ತೇನೆ. ಆಗ ಸ್ವಾಯತ್ತತೆ ಸಂಪೂರ್ಣವಾಗಿ ಬರುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಈ ರೀತಿಯಾಗಿ ನಾವು ಅನುಕೂಲವನ್ನು ಖಂಡಿತವಾಗಿಯೂ ಒದಗಿಸಿಕೊಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಓ.ಓ.ಡಿ. ಇದ್ದಾಗ ನಾವು ಅಪಾಯಿಂಟ್‌ಮೆಂಟ್ ಬಿಲ್ಲನ್ನು ಎನ್‌ಹಾನ್ಸ್ ಮಾಡುವುದಕ್ಕೆ ಆಗುವುದಿಲ್ಲ. ನ್ಯಾಷನಲ್ ಡೈರಿಯವರು, ಕರ್ನಾಟಕ ಸರ್ಕಾರದ ಕೆ.ಎಂ.ಎಫ್. ಬೋರ್ಡಿನವರು ಕುಳಿತು, ಸ್ಟಾಫ್ ಪ್ಯಾಟರ್ನ್‌ನ್ನು ಫಿಕ್ಸ್ ಮಾಡಿರುವುದು. ತಮ್ಮ ಸರ್ಕಾರದಲ್ಲಿ ತಾವು ಬಂದಮೇಲೆ ಅದನ್ನೂ ತೆಗೆದುನೋಡಿಲ್ಲ. ಈ ಸ್ಥಿತಿಗೆ ನಾವು ಜವಾಬ್ದಾರರು ಎಂದು ದಯಮಾಡಿ ಮಾಡಬೇಡಿ. ಸ್ಪೆಷಲ್ ಆಫೀಸರ್ ಹಾಕಿದ ದಿವಸ ಮಿಲ್ಕ್ ಪೇಮೆಂಟ್ ಮಾಡುವುದಕ್ಕೆ ಆಗುವುದಿಲ್ಲ. ಅಪೆಕ್ಸ್ ಬ್ಯಾಂಕ್ ಲೋನ್‌ಗೆ ಸರ್ಕಾರ ಗ್ಯಾರಂಟಿ ಕೊಡುತ್ತದೆ ಎನ್ನುವ ಒಂದೇ ಒಂದು ಕಾರಣಕ್ಕೆ ಆವತ್ತು ನೀವು ಹಾಕಿದ್ದು ಅದು ಮಿಸ್‌ಅಪ್ರೋಪ್ರಿಯೇಷನ್ ಆಗಿದೆ. ಬೋರ್ಡ್‌ನವರು ಅಪಾಯಿಂಟ್‌ಮೆಂಟ್ ಮಾಡುವುದಕ್ಕೆ ಪರ್ಮಿಷನ್ ಕೇಳಿದ್ದಾರೆ ಎಂದು ಹೇಳಲಿಲ್ಲ.

ಆದರೆ, ತಾವು ಎನ್.ಡಿ.ಡಿ.ಬಿ. ಜೊತೆ ಒಪ್ಪಿದ್ದೀರಿ. ತಾವು ಗವರ್ನಮೆಂಟ್ ಆಫ್ ಇಂಡಿಯಾ ಜೊತೆ ಒಪ್ಪಿದ್ದೀರಿ. ಯಾವುದೇ ಕಾರಣಕ್ಕೆ ಮೂರು ವರ್ಷಕ್ಕಿಂತ ಜಾಸ್ತಿ ಮ್ಯಾನೇಜ್‌ಮೆಂಟಿಗೆ ಎಲೆಕ್ಷನ್ ಇಲ್ಲದೇ ಖಾಲಿ ಇಡುವುದಿಲ್ಲ ಎಂದು. ಅದೆಲ್ಲವನ್ನೂ ವೈಯಲೇಟ್ ಮಾಡಿ ನೀವು ಇವತ್ತು ಡೈರಿಗಳಿಗೆ ಅಡ್ಮಿನಿಸ್ಟ್ರೇಟರನ್ನು ಇಟ್ಟಿದ್ದೀರಿ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಅವರು ಹೇಳುವ ಮಾತು, ಸತ್ಯವಾದ ಮಾತು, ನಾನು ಇಲ್ಲವೆಂದು ಹೇಳುವುದಿಲ್ಲ. ಮೂರು ವರ್ಷಗಳ ಮೇಲೆ, ಮುಂದು ಹಾಕುವಂಥ ಅಧಿಕಾರ ನಮಗೆ ಇಲ್ಲ. ಅದು ಒಂದು ಸೆಕ್ಷನ್ ಇದೆ. 121 ಎಂದು ಮಾಡಿಕೊಂಡು ಕಾಯಿದೆಯನ್ನೇ ತಿದ್ದಿದ್ದಾರೆ. ಅದನ್ನು ಓದಿಬಿಡಿ, ಬೇಕಾದ್ದು ಮಾಡುವುದಕ್ಕೆ ಬರುತ್ತದೆ, ಮಾಡಿದ್ದಾರೆ. ಅದನ್ನು ಈಗ ತೆಗೆದಿದ್ದೇನೆ. ಅದೆಲ್ಲಾ ತಪ್ಪು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತೇನೆ. ಮುಂದೆ ಹಾಕುವ ಅಧಿಕಾರವನ್ನೇ ತೆಗೆದಿದ್ದೇನೆ. ಸೊಸೈಟಿಯವರು ಚುನಾವಣೆಯನ್ನು ನಿಗದಿತ ವೇಳೆಯಲ್ಲಿ ಮಾಡಲೇಬೇಕು. ಮಾಡದೇ ಇದ್ದರೆ, ಆಟೋಮ್ಯಾಟಿಕ್ ಆಗಿ ಅಡ್ಮಿನಿಸ್ಟ್ರೇಟರ್ ಬರುತ್ತಾರೆ, 6 ತಿಂಗಳಲ್ಲಿ ಚುನಾವಣೆ ಮಾಡಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಅದು ತಪ್ಪು ಎಂದು ನಿಮ್ಮ ಆತ್ಮ ಒಪ್ಪಿದಮೇಲೆ, ಆ ಅಧಿಕಾರ ತಾವೇ ಚಲಾಯಿಸಿದಿರಿ. ನಿಮ್ಮ ಮುಂದೆ ಬರುವವರು ಮಾತ್ರ ಮಾಡಬಾರದು, ನೀವು ಎಂಜಾಯ್ ಮಾಡಿಕೊಂಡು ಹೋಗಬೇಕೆಂದು ಹೇಳುತ್ತೀರಾ?

ಶ್ರೀ ಎಸ್.ಎಸ್.ಪಾಟೀಲ್: ನಾನು ಇಲ್ಲ ಎಂದು ಹೇಳುವುದಿಲ್ಲ; ಇಲ್ಲ ಎಂದು ಒಪ್ಪಿಕೊಳ್ಳುವುದಿಲ್ಲ. ಮುಂದೆ ಹಾಕಿದ್ದೇನೆ. ತಾವು ಹೇಳಿದ್ದೀರಿ, 121ನ್ನು ನಿಮ್ಮಷ್ಟು ಉಪಯೋಗಿಸಿದವರು ಯಾರೂ ಇಲ್ಲ ಎಂದು. ನಿಮ್ಮ ಹಿಂದಿನ ಲೆಕ್ಕ ತೆಗೆಸಿದೆ, ನಾವು ಬಹಳ ಕಡಿಮೆ ಉಪಯೋಗಿಸಿದ್ದೇವೆ. ನೀವು 500 ಮಾಡಿದ್ದರೆ, ನಾನು 300

ಮಾಡಿದ್ದೇನೆ. ಅರಗ ಜ್ಞಾನೇಂದ್ರ ಅವರು ಬಹಳ ತಪ್ಪು ಮಾಡಿಬಿಟ್ಟಿರಿ ನೀವು ಎಂದರು. ಅವರನ್ನೆಲ್ಲಾ ಆಗ ಹೋಗುವ ಹಾಗೆ ಮಾಡಿದಿರಿ. ನೀವೆಲ್ಲಾ ಒಳ್ಳೆಯ ಸಹಕಾರಿ ಕೆಲಸ ಮಾಡಿದಿರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಮೊದಲಿನಿಂದಲೂ ಹೇಳುತ್ತಿದ್ದಿರಲ್ಲಾ. ನೀವು ಸರಿ ಇಲ್ಲ, ನಾವು ಹರಿಶ್ಚಂದ್ರನ ಮಕ್ಕಳಿದ್ದೇವೆಂದು ಹೇಳಿದ್ದಿರಲ್ಲಾ. ಈಗ ನೀವೇನು ಮಾಡಿದಿರಿ ಎಂದು.

ಶ್ರೀ ಎಸ್.ಎಸ್.ಪಾಟೀಲ್: ನಾನು ಹೇಳಿಲ್ಲ ಸಾರ್.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನೀವು ಬೇರೆಯವರು ಚೆನ್ನಾಗಿಲ್ಲವೆಂದು ಟೀಕೆ ಮಾಡುತ್ತಿದ್ದೀರಿ. ಅವರನ್ನು ಟೀಕೆ ಮಾಡಿದ ಮೇಲೆ ನೀವಾದರೂ ಹೇಳಿಕೊಳ್ಳಬಹುದಿತ್ತು.

ಶ್ರೀ ಎಸ್.ಎಸ್.ಪಾಟೀಲ್: ಅದಕ್ಕೆ ಈಗಾಗಲೇ ತಿದ್ದುಪಡಿ ತಂದಿದ್ದೇನೆ. ಆ ಕಾರಣದಿಂದ ಕಾಯಿದೆಯಲ್ಲಿ ಅವಕಾಶವಿರುವವರೆಗೆ, ಒಂದು ರಾಜಕೀಯ ಪಕ್ಷವಾಗಿ ಯಾರ ಕಡೆಯಿಂದಲೂ ಅದನ್ನು ಆಚರಣೆಗೆ ತರುವುದಕ್ಕೆ ಸಾಧ್ಯವಿಲ್ಲ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ಕಾರಣದಿಂದ, ಕಾಯಿದೆಯಿಂದಲೇ ಅದನ್ನು ಹೊಡೆದು ಹಾಕುತ್ತೇವೆ. ಆಗ ಈ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಬಹುತೇಕ ನೀವು ಮನೆಗೆ ಹೋಗುವ ಮುನ್ನ ಆ ಕಾಯಿದೆ ತರುತ್ತೀರೇನು?

ಶ್ರೀ ಎಸ್.ಎಸ್.ಪಾಟೀಲ್: ಇಲ್ಲಿ ಇಡುತ್ತೇನೆ, ನಾಳೆಯೇ ನೀವು ಪಾಸ್ ಮಾಡಿ. ವಿಶೇಷವಾಗಿ ತಂದು, ಇಲ್ಲಿ ವಿರೋಧಪಕ್ಷದವರೊಂದಿಗೆ ಚರ್ಚೆ ಮಾಡಲೇಬೇಕಾಗುತ್ತದೆ. ಅವರು ಹೇಳಿದ್ದನ್ನು ನಾನು ತಪ್ಪು ಎಂದು ಹೇಳುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ನಾಮಕರಣದ ಅಧಿಕಾರ ಇರಬಾರದು ಎಂದು ನಾವು ಬಹಳಷ್ಟು ಹೋರಾಟ ಮಾಡಿದ್ದೇವೆ; ಒತ್ತಾಯ ಮಾಡಿದ್ದೇವೆ.

ಶ್ರೀ ಎಸ್.ಎಸ್.ಪಾಟೀಲ್: ಅದೆಲ್ಲವೂ ಅದರಲ್ಲಿ ಬಂದಿದೆ. ಬಹುಶಃ ಸನ್ಮಾನ್ಯ ಅಧ್ಯಕ್ಷರ ಮುಂದೆ ಇದೆ. ಅಧ್ಯಕ್ಷರು ಎಂದು ಇಲ್ಲಿ ತರುತ್ತಾರೆಯೋ ಆ ದಿನ ತಾವು ಚರ್ಚೆ ಮಾಡಿ. ಒಳ್ಳೆಯ ಸಲಹೆ ಇದ್ದರೆ, ಅವುಗಳನ್ನೂ ಕೂಡ ನಾವು ಅದರಲ್ಲಿ ಸೇರಿಸುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ನೀವು ಇಷ್ಟೆಲ್ಲಾ ಹೇಳುತ್ತೀರಿ. ಬಿಲ್ ಪಾಸಾಗಬೇಕೆಂದೇನೂ ಇಲ್ಲ. ಸರ್ಕಾರಕ್ಕೆ ಬೇಕಾದರೆ ಆರ್ಡಿನೆನ್ಸ್ ಮಾಡಿಕೊಳ್ಳುವ

ಅಧಿಕಾರವೂ ಇದೆ. ನೀವು ಆರ್ಡಿನೆನ್ಸ್ ಮಾಡಿ ಅದನ್ನು ತೆಗೆದುಬಿಡಬೇಕಾಗಿತ್ತು.

ಶ್ರೀ ಎಸ್.ಎಸ್.ಪಾಟೀಲ್: ಅಧ್ಯಕ್ಷರೇ, ಶಾಸಕರು ಹೇಳುವುದು ಇಲ್ಲಿ ಚರ್ಚೆಯಾಗಬೇಕೆಂದು ತಿಳಿದುಕೊಂಡು ನಿರ್ಣಯವಾದ ಮೇಲೆ, ನಾನು ಇಲ್ಲೊಂದು ಆರ್ಡಿನೆನ್ಸ್ ಹೊರಡಿಸಿದರೆ, ವಿರೋಧ ಪಕ್ಷದ ನಾಯಕರು ತಾವೆಲ್ಲಾ ನಮಗೆ ಏನೆಂದು ಹೇಳುತ್ತೀರಿ. ಚರ್ಚೆಯಾಗಬೇಕು, ಚರ್ಚೆಗೆ ಅವಕಾಶ ನೀಡಬೇಕೆಂದು ಹೇಳಿಯೇ ಹೋದ ಸಲ ಮುಂದಕ್ಕೆ ಹಾಕಿದ್ದೇವೆ. ಇದು ಹೌದೋ ಅಲ್ಲವೋ ತಾವೇ ಹೇಳಿ. ನಾವು ಅಧಿವೇಶನವಾದ ಮೇಲೆ ಆರ್ಡಿನೆನ್ಸ್ ಹೊರಡಿಸಿದರೆ, ಅಷ್ಟೊಂದು ಸರಿಯಲ್ಲ. ಆದ್ದರಿಂದ ಖಂಡಿತವಾಗಿಯೂ ಚರ್ಚೆಯಾಗಲಿ.

ಶ್ರೀ ಡಿ.ಆರ್.ಪಾಟೀಲ್: ನೀವು ಆರ್ಡಿನೆನ್ಸ್ ಹೊರಡಿಸಿದ್ದು ಎಪಿಎಂಸಿಗೆ ನಾಮಿನೇಷನ್ ಮಾಡುವುದಕ್ಕೆ.

ಗೊಂದಲ

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಎಂಪಿಎಂಸಿಗೆ ನಾಮಿನೇಷನ್ ಮಾಡುವುದಕ್ಕೆ ಎರಡುಸಾರಿ ತರಾತುರಿಯಲ್ಲಿ ಸುಗ್ರೀವಾಜ್ಞೆ ಹೊರಡಿಸಬಹುದು. ನಾವು ಇದರ ಬಗ್ಗೆ ಅಡ್ಡ ಬರುವುದಿಲ್ಲ, ಇಲ್ಲಿಯವರೆಗೂ ಜಗಳ ನಡೆದಿದೆ.

ಶ್ರೀ ಡಿ.ಆರ್.ಪಾಟೀಲ್: ಒಂದು ಒಪ್ಪಂದಕ್ಕೆ ಬರುವುದು ಒಳ್ಳೆಯದು. ನೀವು ಪ್ರಿನ್ಸಿಪಲ್ಸ್, ತತ್ವ, ಆದರ್ಶ ದಯವಿಟ್ಟು ಇಲ್ಲಿ ಮಾತನಾಡಬೇಡಿ. ತತ್ವ, ಆದರ್ಶಗಳನ್ನು ಪಬ್ಲಿಕ್ ಮೀಟಿಂಗ್‌ನಲ್ಲಿ ಮಾತನಾಡಿ. ಅಲ್ಲಿ ತಿರುಗಿ ಉತ್ತರ ಕೊಡುವುದಕ್ಕೆ ಜನಕ್ಕೆ ಅವಕಾಶವಿರುವುದಿಲ್ಲ. ಇಲ್ಲಿ ನಾವೆಲ್ಲರೂ ಇರುತ್ತೇವೆ, ನಿಮ್ಮನ್ನು ಕೇಳುತ್ತೇವೆ. ಅದಕ್ಕಾಗಿ ತತ್ವ, ಆದರ್ಶದ ಬಗ್ಗೆ ಏನೂ ಮಾತನಾಡುವುದು ಬೇಡ.

ಶ್ರೀ ವಾಟಾಳ್ ನಾಗರಾಜ್: ಮೈಸೂರಿನಲ್ಲಿ ಸುಮಾರು ಎರಡು ವರ್ಷದ ಹಿಂದೆ, ಒಂದು ಸಹಕಾರ ಸಂಘದ ಸಮಾರಂಭದಲ್ಲಿ ತಾವೂ ಅವರು ಭಾಗವಹಿಸಿದ್ದಿರಿ. ಇದು ನನಗೆ ಇನ್ನೂ ಜ್ಞಾಪಕವಿದೆ. ಬಹಳ ಜೋರಾಗಿ ಮಾಡಿದ ಭಾಷಣವನ್ನು ನಾನು ಓದಿದೆ. ನಾಮಕರಣ ಪದ್ಧತಿಯನ್ನು ಸಂಪೂರ್ಣವಾಗಿ ವಿರೋಧಿಸುತ್ತೇವೆ, ಪ್ರಜಾತಂತ್ರ ವ್ಯವಸ್ಥೆಗೆ ಇದು ಅಪಾಯಕಾರಿ ಬೆಳವಣಿಗೆ ಎಂದು ಇಬ್ಬರೂ ಒಟ್ಟಿಗೆ ಹೇಳಿದ್ದಿರಿ. ನಿಮಗೆ ಆತ್ಮ ಇದ್ದರೆ, ಇದನ್ನು ವಿರೋಧಿಸುತ್ತೀರಾ ಅಥವಾ ರಾಜಕೀಯಕ್ಕೋಸ್ಕರ ಇಟ್ಟುಕೊಳ್ಳುತ್ತೀರಾ ಎಂಬುದನ್ನು ಹೇಳಿ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ವಾಟಾಳ್ ಅವರೇ, ನೀವು ಅರ್ಧ ಕೇಳಿದಿರಿ. ನಾವು ಆ ಸಭೆಯೊಳಗೆ ಭಾಗವಹಿಸಿದ್ದೆವು. ಮಾನ್ಯ ಸ್ಪೀಕರ್‌ರವರೂ ಆ ಸಭೆಯೊಳಗೆ ಭಾಗವಹಿಸಿದ್ದರು. ಸಚಿವರು ಏನು ಹೇಳಿದರು, ಒಂದು ವೇಳೆ ಯಾರಾದರೂ

ನಾಮಕರಣ ಮಾಡಬೇಕೆಂದರೆ, ಒಂದು ವೇಳೆ ನಾಮಕರಣ ಮಾಡಿದವರನ್ನು ಅಧ್ಯಕ್ಷರು, ಉಪಾಧ್ಯಕ್ಷರು ಮಾಡಿ ಎಂದರೆ, ನನ್ನ ಸಚಿವ ಪದವಿ ಬಿಡುತ್ತೇನೆಯೇ ಹೊರತಾಗಿ, ನಾಮಕರಣ ಮಾಡುವುದಿಲ್ಲವೆಂದು ಅವರು ಹೇಳಿದರು. ಆಗ, ಬಹಳ ತೊಂದರೆಗೆ ಸಿಕ್ಕಿಹಾಕಿಕೊಳ್ಳುವ ಮಾತು ಹೇಳುತ್ತಿದ್ದೀರಿ ಎಂದು ಸ್ಪೀಕರ್‌ರವರು ಹೇಳಿದರು. ಮರುದಿವಸಕ್ಕೇ ನಾಮಕರಣ ಚಾಲೂ ಮಾಡಿದರು. ಆದರೆ, ಪ್ರತಿಯೊಂದು ಸಭೆಯೊಳಗೆ ಅಥವಾ ಯಾವುದೇ ಒಂದು ಸಾರ್ವಜನಿಕ ಸಭೆಯೊಳಗೆ ಮಾತು ಪ್ರಾರಂಭ ಮಾಡಬೇಕಾದರೆ, ನಮ್ಮ ಎಸ್.ಎಸ್.ಪಾಟೀಲರು ಬಸವಣ್ಣನವರ ವಚನದಿಂದಲೇ ಪ್ರಾರಂಭ ಮಾಡುತ್ತಾರೆ. ಅದರೊಳಗೆ ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ಎಂಬ ಬಸವಣ್ಣನವರ ವಚನ ಇದೆಯಲ್ಲಾ, ಇದನ್ನು ಮುಂದಿಗೆ ಹೇಳುವುದಕ್ಕಷ್ಟೇ ಅಪ್ಲೈ ಮಾಡುತ್ತಾರೆ ಇವರು. ಇವೆಲ್ಲಾ ವಚನಗಳು ಕೇಳುವವರಿಗೆ, ಹೇಳುವವರಿಗೆ ಅಲ್ಲ ಎಂಬ ಅವರ ತತ್ವ.

ಶ್ರೀ ವಾಟಾಳ್ ನಾಗರಾಜ್: ''ಹುಸಿಯ ನುಡಿಯ ಬೇಡ'' ಎಂಬುದನ್ನಾದರೂ ಅವರು ಇಟ್ಟುಕೊಳ್ಳಬೇಕಲ್ಲಾ. ಅಷ್ಟಕ್ಕಾದರೂ ನೀವು ಇರಬೇಕಲ್ಲಾ. ಮಿಕ್ಕಿದ್ದು ಒಪ್ಪಿಕೊಳ್ಳದಿದ್ದರೂ ಚಿಂತೆಯಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳಿದ್ದೇನೆ, ಅದರಂತೆ ನಡೆದುಕೊಂಡಿದ್ದೇನೆಂದು ನನಗನಿಸುತ್ತದೆ. ಅವರು ಹೇಗೆ ಕಂಡಿದ್ದಾರೋ ನನಗೆ ಗೊತ್ತಿಲ್ಲ. ಅದು ನೋಡುವವರ ದೃಷ್ಟಿ.

ಶ್ರೀ ಡಿ.ಆರ್.ಪಾಟೀಲ್: ನೀವೂ ಸಾಕ್ಷಿ ಇದ್ದೀರಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅವರು ಮೈಸೂರಿನಲ್ಲಿ ಒಂದು ಕಡೆ ಹೇಳಿದ್ದಾರೆ ಮತ್ತು ಬೆಂಗಳೂರಿನಲ್ಲಿಯೂ ಒಂದು ಕಡೆ ಹೇಳಿದ್ದಾರೆ.

ಅಧ್ಯಕ್ಷರು: ರೆಡ್ಡಿಯವರೇ, ನಿಮಗಿನ್ನೂ ಲಗ್ನವಾಗಿಲ್ಲ, ನಮಗೆ ಸಂಸಾರದ ಜಂಜಾಟ ಜಾಸ್ತಿ ವಯಸ್ಸಾಯಿತು. ನಮಗೆ ನೆನಪಿನ ಶಕ್ತಿ ಕಡಿಮೆಯಾಗಿದೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಹೇಳಿದಂತೆ ನಡೆದುಕೊಂಡಿದ್ದರೆ, ನಾನು ಈ ಸದನದಿಂದ ಹೊರಗೆ ಹೋಗುತ್ತೇನೆ. ಅವರು ಹೇಳಿದಂತೆ ನಡೆದುಕೊಳ್ಳಲಿಲ್ಲವೆಂದರೆ, ಅವರೇನಾದರೂ ಕ್ರಮ ಕೈಗೊಳ್ಳಬೇಕು. ಏನು ಮಾಡಿದ್ದಾರೆ ಎಂಬುದಕ್ಕೆ ತಾವು ಸಾಕ್ಷ್ಯ ಇದ್ದೀರಿ. ತಾವೇ ಸ್ವತಃ ಎರಡೂ ಕಿವಿಯಲ್ಲೂ ಕೇಳಿದ್ದೀರಿ. ಅವರು ಏನೇನು ಮಾಡಿದ್ದಾರೆಂಬುದನ್ನೂ ನೋಡಿದ್ದೀರಿ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಅನೇಕ ವಿಚಾರಗಳಲ್ಲಿ ತಾವು ಧ್ವನಿಗೂಡಿಸಿದ್ದೀರಿ ತಾವು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಡಿ.ಆರ್.ಪಾಟೀಲರು ಚಾಲೆಂಜ್ ಹಾಕುತ್ತಿದ್ದಾರೆ. ಬಹುಶಃ ಅವರಿಗೆ ಅನಿಸುತ್ತದೆ, ಯಾರೂ ಮಾಡದ ಕೆಲಸವನ್ನು ಈ ಮನುಷ್ಯ ಮಾಡುವುದಕ್ಕೆ ನಿಂತಿದ್ದಾನೆ. ಇವನನ್ನು ಹೊರಗೆ ಕಳುಹಿಸಬೇಕೆಂದು ಮಾಡುತ್ತಿದ್ದಾರೋ ಏನೋ ಎಂದು ನನಗನ್ನಿಸುತ್ತದೆ. ಈ ಅಧಿವೇಶನದಲ್ಲಿ ಬಂದಿದೆ, ಆಗ ನಿಮಗೆ ಉತ್ತರ ಹೇಳುತ್ತೇನೆ. ಆಗ, ನಾನು ಏನು ಹೇಳಿದ್ದೆ ಎಂಬುದನ್ನು ಹೇಳಿ, ಚರ್ಚೆ ಮಾಡೋಣ. ಅವತ್ತು ಚರ್ಚೆಗೆ ಬಂದಾಗ, ಎಲ್ಲಾ ವಿಷಯಗಳಿಗೂ ನಾನು ಉತ್ತರ ಕೊಟ್ಟಿದ್ದೇನೆ. ಅದನ್ನು ತೆಗೆದುಕೊಂಡು ನೋಡಿ, ಅದರಲ್ಲಿ ಏನೇನು ಇದೆ ಎಂಬುದು ತಮಗೇ ತಿಳಿಯುತ್ತದೆ. ಬಹುಶಃ ನಾನು ಏನೇನು ಹೇಳಿದ್ದೇನೆ, ಅದನ್ನು ಈ ಬಿಲ್ಲಿನಲ್ಲಿ ಮಾಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್: ಅಧ್ಯಕ್ಷರೇ, ನಿಮ್ಮ ಕೊನೆಯ ಧ್ವನಿ ಏನು ಬರುತ್ತದೆ ಎಂದು ನಾವು ಕಾದುಕೊಂಡು ಕುಳಿತಿದ್ದೇವೆ. ನಾಮಕರಣ ಪದ್ಧತಿಯನ್ನು ನಾನು ಒಪ್ಪುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ: ಶಿವಮೊಗ್ಗ ಡಿ.ಸಿ.ಸಿ. ಬ್ಯಾಂಕಿನಲ್ಲಿ ಅವರು ಪಕ್ಷದವರನ್ನೇ ಓಲೈಸುವುದಕ್ಕೆ ಹೋಗಿ, ಹೆಚ್ಚುವರಿ ನಾಮಕರಣ ಮಾಡಿಕೊಟ್ಟರು. ಇದು ಅವರ ಹೊಡೆತ.

ಮಾನ್ಯ ಸದಸ್ಯರು: ಕೊಡ್ಲಿಪೇಟೆ ವಿ.ಎಸ್.ಎಸ್.ಎನ್.ನಲ್ಲಿ ಸುಮಾರು 74 ಲಕ್ಷ ರೂಪಾಯಿ ದುರುಪಯೋಗವಾಗಿದೆ ಎಂದು ಅವರೇ ಉತ್ತರ ಕೊಟ್ಟಿದ್ದಾರೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದರು, ಒಂದೂವರೆ ವರ್ಷವಾಯಿತು, ಇವತ್ತಿನವರೆಗೆ ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಕಾರಣವೇನೆಂದರೆ, ಅವರು ಜನತಾದಳದ ತಾಲ್ಲೂಕಿನ ಅಧ್ಯಕ್ಷರು. ಅದಕ್ಕಾಗಿ ಪೆಂಡಿಂಗ್ ಇದೆ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ಅವರು ಕೊಡ್ಲಿಪೇಟೆಯ ವಿಷಯ ಏನು ಹೇಳುತ್ತಿದ್ದಾರೆ. ಅವರ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ, ನಾವು ಕ್ರಮ ತೆಗೆದುಕೊಂಡಿದ್ದೇವೆ, ಹೈಕೋರ್ಟಿನಿಂದ ಸ್ಟೇ ಬಂದಿದೆ. ಎಲ್ಲೋ ಒಂದು ತಪ್ಪು ಹುಡುಕುತ್ತಾರೆ, ಸ್ಟೇ ತರುತ್ತಾರೆ. ಇವತ್ತಿನ ಪರಿಸ್ಥಿತಿಯಲ್ಲಿ ಅಷ್ಟು ಹಗುರ ಇಲ್ಲ ಅದು. ಅದಕ್ಕೆ ನಾನು ಏನು ಹೇಳುತ್ತೇನೆ ಎಂದರೆ, ಸ್ವಾಯತ್ತತೆ ಇರಬೇಕು. ಅಧಿಕಾರ ಜನರಲ್ ಬಾಡಿಗೆ ಇದೆ; ನಮಗಿಲ್ಲ. ಇವತ್ತೂ ಕೂಡ ಜನರಲ್ ಬಾಡಿ ಕ್ರಮ ತೆಗೆದುಕೊಳ್ಳಬಹುದು.

ಗೊಂದಲ

ಅಧ್ಯಕ್ಷರು: ಉತ್ತರ ಇನ್ನೂ ಹೆಚ್ಚು ಸಮರ್ಪಕವಾಗಿ ಬರಲಿ ಎನ್ನುವ ದೃಷ್ಟಿಯಿಂದ।

ಮಧ್ಯೆ ತಾವೆಲ್ಲರೂ ಪ್ರವೇಶ ಮಾಡುವುದಕ್ಕೆ ನಾನು ಅವಕಾಶ ಮಾಡಿಕೊಟ್ಟೆ. ಅವರು ಉತ್ತರ ಕೊಡಲಿ.

ಶ್ರೀ ಜೆ.ಸಿ.ಮಾಧುಸ್ವಾಮಿ: ಮಿಸ್ ಅಪ್ರೋಪ್ರಿಯೇಷನ್ ವಿಷಯದಲ್ಲಿ ಅವರು ಹೇಳಬಾರದು.

MR. SPEAKER: My desire was to improve the quality of reply.

ಶ್ರೀ ಡಿ.ಆರ್.ಪಾಟೀಲ್: ನಾವು ಮಧ್ಯೆ ಪ್ರವೇಶ ಮಾಡದಂತೆ, ಸರಿಯಾದ ಉತ್ತರವನ್ನು ಅವರು ಕೊಡಲಿ.

ಅಧ್ಯಕ್ಷರು: ನೀವೆಲ್ಲಾ ಮಧ್ಯೆ ಪ್ರವೇಶ ಮಾಡಿದ್ದು ಒಳ್ಳೆಯದಾಗುತ್ತದೆ ಎಂದೇ ನಾನು ಮಾಡಿಸಿದ್ದು.

ಶ್ರೀ ವಾಟಾಳ್ ನಾಗರಾಜ್: ತಾವು ಏನೇ ಅವಕಾಶ ಕೊಟ್ಟರೂ, ಅವರು ನಾಮಕರಣ ಪದ್ಧತಿ ಬಗ್ಗೆ ಧ್ವನಿಯನ್ನೇ ಬಿಡುತ್ತಾ ಇಲ್ಲ. ನೀವು ಬಹಳ ಅವಕಾಶ ಕೊಡುತ್ತಾ ಇದ್ದೀರಿ.

ಅಧ್ಯಕ್ಷರು: ನನಗೆ ಗೊತ್ತು, ನನಗೆ ವಿಶ್ವಾಸ ಇದೆ.

ಶ್ರೀ ವಾಟಾಳ್ ನಾಗರಾಜ್: ಮಸೂದೆ ಬಂದಿರುವುದು ಬೇರೆ. ನಿಮ್ಮ ಇಲಾಖೆ ಬಗ್ಗೆ ಉತ್ತರ ಕೊಡುವಾಗ, ಅವರು ಸ್ಪಷ್ಟಪಡಿಸಲಿ. ನಾಮಕರಣ ಪದ್ಧತಿ ಉಂಟೇ ಇಲ್ಲವೇ ಎಂದು ಹೇಳಲಿ.

ಶ್ರೀ ಎಸ್.ಎಸ್.ಪಾಟೀಲ್: ಮಸೂದೆ ಇಲ್ಲಿ ಚರ್ಚೆಗೆ ಬಂದಾಗ ಉತ್ತರ ಕೊಡುತ್ತೇನೆ. ತಮ್ಮ ಒಳ್ಳೆಯ ಸಲಹೆಗಳನ್ನು ಜಾರಿಗೊಳಿಸುತ್ತೇನೆ. ಈ ಸದನ ಏನು ಹೇಳುತ್ತದೆ, ಅದಕ್ಕೆ ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು: ಒಂದಲ್ಲ ಎರಡು ಸಲ ಇದೇ ವಿಚಾರ ಪ್ರಸ್ತಾಪಕ್ಕೆ ಬಂದಾಗ ಹೇಳಿದ್ದಾರೆ. ವೈಯಕ್ತಿಕವಾಗಿ ನನ್ನ ಬದ್ಧತೆ ಇದೆ. ಆದರೆ ಈ ವಿಷ ವರ್ತುಲದಲ್ಲಿ ನಾನು ಸಿಕ್ಕಿಹಾಕಿಕೊಂಡಿದ್ದೇನೆ ಎಂದು ಹೇಳಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ವೈಯಕ್ತಿಕ ಮತ್ತು ಇನ್ನೊಂದು, ಹೀಗೆ ಎರಡು ಮುಖ ಆದರೆ ಹೇಗೆ?

ಅಧ್ಯಕ್ಷರು: ಕೆಲವು ಸಾರಿ ಆಗುತ್ತದೆ. ಇಂಡಿವಿಜ್ಯುಯಲ್ ಕಮಿಟ್‌ಮೆಂಟ್ಸ್ ಬೇರೆ

ಇರುತ್ತದೆ. ಪೊಲಿಟಿಕಲ್ ಕಂಪಲ್‌ಷನ್ಸ್ ಬೇರೆ ಇರುತ್ತವೆ. ಇರಲಿ ಆವೇಶದಲ್ಲಿ ಹೇಳಿರುತ್ತಾರೆ. ಮೊದಲನೇ ಬಾರಿಗೆ. ತೀರಾ ಹಳಬರಾದರೆ ಹೇಳುವುದಿಲ್ಲ. ಜಾಗ್ರತೆಯಾಗಿ ಇರುತ್ತಾರೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ.....

ಶ್ರೀ ಅರಗಂ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ತಾವು ಭಾರಿ ರಕ್ಷಣೆ ಮಾಡುತ್ತೀರಿ.

ಶ್ರೀ ಎಚ್.ಶಿವಪ್ಪ: ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳು ಹೇಳಿದರಲ್ಲಾ, ಪೊಲಿಟಿಕಲ್ ಕಂಪಲ್‌ಷನ್ಸ್‌ನಿಂದ ನಾನು ಎಪಿಎಂಸಿಗಳಿಗೆ ನಾಮಕರಣ ಮಾಡಬೇಕಾಗುತ್ತದೆ. ಆದರೆ ವೈಯುಕ್ತಿಕವಾಗಿ ನಾನು ವಿರೋಧ ಇದ್ದರೂ ಎಂದು ಹೇಳಿದರು. But his contention has been upheld by the High Court.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಪೊಲಿಟಿಕಲ್ ಕಂಪಲ್‌ಷನ್ ಇದೆ ಎಂದು ನೀವು ನಾಮಕರಣ ಮಾಡಿದಿರಿ ಅದನ್ನೇ ಹೈಕೋರ್ಟಿನವರು ಅಪ್‌ಹೆಲ್ಡ್ ಮಾಡಿದ್ದಾರೆಂದು ಹೇಳುತ್ತೀರಾ? ಅದನ್ನು ಅವರು ಅಪ್‌ಹೆಲ್ಡ್ ಮಾಡಿಲ್ಲ.

MR. SPEAKER: The power of the House to legislate on Nominations has been upheld by the High Court. The Court would come into the picture only if it is a bad piece of legislation. When the Legislation is upheld by the High Court, there ends the matter. You would be imputing motives...

ಶ್ರೀ ಎಚ್.ಶಿವಪ್ಪ: ಈ ಒಂದು ವಿಷ ವರ್ತುಲದಲ್ಲಿ ನಾವು ಸಿಕ್ಕಿ ಹಾಕಿಕೊಂಡಿದ್ದೇವೆ. ಆದ್ದರಿಂದ ನಾಮಕರಣ ಪದ್ಧತಿಯನ್ನು ರದ್ದು ಮಾಡುವುದಕ್ಕೆ ಆಗಿಲ್ಲ ಎಂದು ಅವರು ಹೇಳಿದ್ದಾರೆ. ವೈಯುಕ್ತಿಕವಾಗಿ ಅವರು ನಾಮಕರಣ ಪದ್ಧತಿಗೆ ವಿರುದ್ಧವಾಗಿದ್ದಾರೆಂದು ಹೇಳಿದರಲ್ಲಾ, ಅದನ್ನು ನಾನು ಹೇಳಿದೆ.

ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೇ, ನೀವು ನಾಮಕರಣ ಮಾಡುವುದು ಬೇಡ ಎಂದು ನಾವು ಹೇಳಲಿಲ್ಲ. ಆದರೆ ನಿಮಗೆ ಅಧಿಕಾರ ಇದೆ ಮಾಡಿ ಎಂದು ಹೇಳುತ್ತೇವೆ. ನಾಮಕರಣ ಮಾಡುವುದಿಲ್ಲ ಎಂದು ಹೇಳುವುದು; ಆಮೇಲೆ ನಾಮಕರಣ ಮಾಡುವುದು ಇದನ್ನು ದಯವಿಟ್ಟು ಇನ್ನು ಮುಂದೆ ಮಾಡಬೇಡಿ ಎಂದು ಹೇಳುತ್ತೇವೆ.

ಶ್ರೀ ಎಚ್.ಶಿವಪ್ಪ: ಈಗಾಗಲೇ ಈ ಸದನದಲ್ಲಿ ಮಸೂದೆ ಇದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ತಮ್ಮ ಇಲಾಖೆಯ ಬಗ್ಗೆ ನೀತಿಯನ್ನು ಹೇಳತಕ್ಕಂಥಾದ್ದು, ತಮ್ಮ ಇಲಾಖೆಯ ಬಗ್ಗೆ ಸಮಗ್ರ ಚಿಂತನೆಯನ್ನು ಹೇಳತಕ್ಕಂಥಾದ್ದು ಬಿಲ್‌ನಲ್ಲಿ ಮಾಡುವುದಕ್ಕಿಂತ ನಿಮ್ಮ ನಿರ್ಧಾರ ಏನು? ನಿಮ್ಮ ಆತ್ಮಸಾಕ್ಷಿ ಏನು, ಅದನ್ನು ಹೇಳಬೇಕು. ನಾನು ಮಂತ್ರಿಯಾಗಿರುವಾಗ ನನ್ನ ಇಲಾಖೆಯಲ್ಲಿ ಇಂಥದ್ದನ್ನು ಮಾಡಬೇಕೆಂದು ಇದ್ದೇನೆ. ಅದನ್ನು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಇದನ್ನೆಲ್ಲಾ ಹೇಳಿ ಆಮೇಲೆ ಅದನ್ನು ಹೇಳುತ್ತೇನೆ. ಅದನ್ನು ಹೇಳುತ್ತೇನೆ ಮುಂದೆ ಅದನ್ನು ಹೇಳುವುದಕ್ಕೆ ಬಿಡುತ್ತಿಲ್ಲ ನಾನು ಏನು ಮಾಡಲಿ.

ಶ್ರೀ ಅರಗ ಜ್ಞಾನೇಂದ್ರ: ಮಂಗಳೂರು ಜನತಾ ಬಜಾರಿನಲ್ಲಿ ನೀವು ಎರಡು ಸೀಟುಗಳನ್ನು ಗೆದ್ದುಕೊಂಡಿರಿ. ನಮ್ಮ ಪಕ್ಷ 9 ಗೆದ್ದಿದೆ. ನಿಮ್ಮ ಪಕ್ಷದವರು ಅಧ್ಯಕ್ಷರು. ಇದನ್ನು ತಾವು ಪ್ರಜಾಪ್ರಭುತ್ವದಲ್ಲಿ ಒಪ್ಪಿಕೊಳ್ಳುತ್ತೀರಾ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಕಾಯ್ದೆಯಲ್ಲಿ ಅವಕಾಶ ಇರುವುದರಿಂದ ಆ ರೀತಿ ಆಗುತ್ತಿದೆ. ಆ ಕಾಯ್ದೆಯನ್ನು ತೆಗೆದುಬಿಟ್ಟರೆ ಆ ಪ್ರಶ್ನೆ ಬರುವುದಿಲ್ಲ.

ಶ್ರೀ ಕೆ.ಜಯರಾಮಶೆಟ್ಟಿ: ತಮಗೆ ಗೊತ್ತಾದ ಮೇಲೆ ಅದನ್ನು ಬದಲಾವಣೆ ಮಾಡುತ್ತೇನೆ ಎಂದಿರಿ. ಆದರೆ ಇದುವರೆಗೂ ಆಗಿಲ್ಲ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಬಿಲ್‌ನ ಮೇಲೆ ಮಾತನಾಡುವಾಗ ನಾನು ಮಾತನಾಡುತ್ತೇನೆ. ಬಿಲ್ ಬಂದಾಗ ನಾನು ಹೇಳಿದಂತೆ ನಡೆದುಕೊಂಡಿದ್ದೇನೆಯೇ ಇಲ್ಲವೇ ಎನ್ನುವುದು ನಿಮಗೆ ತಿಳಿಯುತ್ತದೆ. ಇನ್ನು ಕ್ಷೀರಕ್ಷೇತ್ರದಲ್ಲಿ ನಾವು ಕ್ರಾಂತಿಯನ್ನು ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳಿದಂತೆ ರೈತರಿಗೆ ಹೆಚ್ಚು ಧಾರಣೆ ಕೊಡಬೇಕೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಪುಟ್ಟಣ್ಣಯ್ಯನವರಿಗೆ ನಾನು ಹೇಳುತ್ತೇನೆ ಆ ಧಾರಣೆ ಹೆಚ್ಚು ಮಾಡುವುದು ಕಡಿಮೆ ಮಾಡುವುದು ಸರ್ಕಾರ ಇಟ್ಟುಕೊಳ್ಳಬಾರದು. ಅದು ತಪ್ಪು. ಸರ್ಕಾರ ಇಟ್ಟುಕೊಂಡಿದ್ದೇ ತಪ್ಪು. ಗುಜರಾತಿನಲ್ಲಿ ಧಾರಣೆ ಏರಿಸುವುದು ಇಳಿಸುವುದು ಸರ್ಕಾರಕ್ಕೆ ಅಧಿಕಾರ ಇಲ್ಲ. ನಮ್ಮ ಶಾಸಕ ಮಿತ್ರರು ಕೆಲವರು ಗುಜರಾತಿಗೆ ಬಂದಿದ್ದರು ನಾವು ಹೋದಾಗ. ಆಗ ನಾವು ಇಲ್ಲಿ 10 ರೂಪಾಯಿಗಳನ್ನು ಮಾಡಿದ್ದೆವು. ಆಗ ಸತ್ಯಾಗ್ರಹ ಮಾಡಿದ್ದರು ನಮ್ಮ ಬಿಜೆಪಿ ಮಿತ್ರರು. ಇದಕ್ಕಿಂತ ಹೆಚ್ಚು ಧಾರಣೆ ಇತ್ತು ಬಿಜೆಪಿ ರಾಜ್ಯದಲ್ಲಿ. ರೈತರು ಬೆಳೆದ ಮಾಲನ್ನು ಅವನೇ ಧಾರಣೆ ಫಿಕ್ಸ್ ಮಾಡಬೇಕೇ ವಿನಹಃ ನಾವು ಇಟ್ಟುಕೊಳ್ಳಬಾರದು. ಇದು ತಪ್ಪು ಎನ್ನುವ ಮಾತನ್ನು ನಾನು ಒಪ್ಪಿಕೊಳ್ಳುತ್ತೇನೆ. ಅತಿ ಶೀಘ್ರದಲ್ಲಿಯೇ ನಾವು ನಮ್ಮ ಸಚಿವ ಸಂಪುಟದಲ್ಲಿ ಮಾತನಾಡಿಕೊಂಡು ಸಂಬಂಧಪಟ್ಟ ಸಚಿವರ ಜೊತೆಯಲ್ಲಿ

ಮಾತನಾಡಿಕೊಂಡು ರೈತರಿಗೆ ಧಾರಣೆ ಫಿಕ್ಸ್ ಮಾಡುವಂತಹ ಅಧಿಕಾರ ನಾವು ಕೊಡಬೇಕೆಂದು ಇದ್ದೇವೆ. ಆ ಮಾತನ್ನು ನಾನು ಒಪ್ಪುತ್ತೇನೆ. ತೀವ್ರವಾಗಿ ಜಾರಿಗೆ ಕೊಡುವಂತಹ ಪ್ರಯತ್ನವನ್ನು ಸಹ ಮಾಡುತ್ತೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಧಾರಣೆ ನಿರ್ಧಾರ ಮಾಡುವ ಅಧಿಕಾರ ತಮಗೆ ಯಾವಾಗಿನಿಂದ ಬಂತು?

ಶ್ರೀ ಎಸ್.ಎಸ್.ಪಾಟೀಲ್: ಜನರಲ್ ಬಾಡಿ ನಿರ್ಧಾರ ಮಾಡಬೇಕು. ಇವತ್ತೂ ಜನರಲ್ ಬಾಡಿಗೆ ಅಧಿಕಾರ ಇದೆ. ನಮಗೆ ಇಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಈ ಧಾರಣೆ ನಿಗದಿ ಮಾಡುವ ಅಧಿಕಾರ ಸರ್ಕಾರಕ್ಕೆ ಮೊದಲಿನಿಂದಲೂ ಇರಲಿಲ್ಲ. ನಾವೆಲ್ಲಾ ಮಹಾಮಂಡಲಿ ಅಧ್ಯಕ್ಷರಾಗಿದ್ದಾಗ ಸರ್ಕಾರವನ್ನು ಕೇಳಿ ಧಾರಣೆ ನಿರ್ಧಾರ ಮಾಡುತ್ತಿರಲಿಲ್ಲ. ಮತ್ತೆ ಏಕೆ ನೀವು ಸರ್ಕಾರ ತೆಗೆದುಕೊಂಡಿರಿ?

ಶ್ರೀ ಎಸ್.ಎಸ್.ಪಾಟೀಲ್: ಈ ನಡುವೆ ಮಾಡಿದರು.

ಶ್ರೀ ಜೆ.ಸಿ.ಮಾಧುಸ್ವಾಮಿ: ನಿಮಗೆ ಇಲ್ಲ. ಮಹಾಮಂಡಲಿಯವರೇ ಮಾಡುವುದು.

ಶ್ರೀ ಎಸ್.ಎಸ್.ಪಾಟೀಲ್: ಅದನ್ನು ಬಿಟ್ಟುಕೊಡುತ್ತೇನೆ. ಸರ್ಕಾರವನ್ನು ಕೇಳುತ್ತಿದ್ದರು. ಹೆಚ್ಚು ಮಾಡಿ ಎಂದು. ಅದಕ್ಕೆ ಸರ್ಕಾರಕ್ಕೆ ಆ ಅಧಿಕಾರ ಇರಬಾರದು ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ವೈಜ್ಞಾನಿಕವಾಗಿ ಆಲೋಚನೆ ಮಾಡುವಂತಹ ಚಿಂತನಾ ಕ್ರಮ ಇಲ್ಲ. ಏನಾಗಿದೆ ಒಂದು ರೂಪಾಯಿ ಜಾಸ್ತಿ ಮಾಡಿದ ಕೂಡಲೇ ಎಲ್ಲರೂ ಗಲಾಟೆ ಮಾಡುವುದಕ್ಕೆ ಶುರು ಮಾಡುತ್ತಾರೆ. ನಾಳೆ ಓಟಿಗೆ ಅಪಾಯವಾಗುತ್ತದೆಂದು ಹೇಳಿ ಒಂದು ರೂಪಾಯಿ ವೈಜ್ಞಾನಿಕವಾಗಿ ಮಾಡಿ ಆಮೇಲೆ 50 ಪೈಸೆ ಮಾಡುತ್ತೀರಿ. ರೈತರಿಗೆ 50 ಪೈಸೆ ಕೊಟ್ಟಾಕ್ಷಣ ಎಲ್ಲಾ ಮೇವಿನ ಬೆಲೆ ಜಾಸ್ತಿಯಾಗುತ್ತದೆ. ಆದ್ದರಿಂದ ಒಂದು ವೈಜ್ಞಾನಿಕ ಚಿಂತನೆ ಮೇಲೆ ಬೆಲೆ ನಿಗದಿ ಮಾಡುತ್ತಿಲ್ಲ. ಆ ಹಾಲಿನ ಮೇಲೆ ರಾಜಕಾರಣ ನಡೆಯುತ್ತಾ ಹೋಗುತ್ತದೆ. ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ನಿಜವಾಗಿಯೂ ಜನರ ನೋವಿನ ಬಗ್ಗೆ ಚಿಂತನೆ ಮಾಡಿ ಬೆಲೆ ನಿಗದಿ ಮಾಡಿದರೆ ಆಗ ಏನಾದರೂ ಮಾಡಬಹುದು. ಅವರು ಹೇಳಿದ ಹಾಗೆಯೇ ಜನರಲ್ ಬಾಡಿ ಮೂಲಕ ನಾವು ಹಾಲಿನ ಬೆಲೆಯನ್ನು ನಿಗಧಿ ಮಾಡುವ ಶಕ್ತಿ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಜನರಲ್ ಬಾಡಿ ಮಾಡಿಕೊಳ್ಳುವ

ವ್ಯವಸ್ಥೆ ಅಲ್ಲಿ ಕೂಡ ಮಾಡೋಣ. ಇವತ್ತು ಕ್ಷೀರ ಉತ್ಪಾದನೆಯಲ್ಲಿ ಕೂಡ ನಾವು ಕೆಲಸ ಮಾಡಿದ್ದೇವೆ. ಹತ್ತಿ ಉತ್ಪಾದನೆಯಲ್ಲಿ ಕೂಡ ನಾವು 33 ಪರ್ಸೆಂಟ್ ಕೆಲಸವನ್ನು ಮಾಡಿದ್ದೇವೆ. ಇತ್ತೀಚೆಗೆ ನಮ್ಮ ಇಂಡಸ್ಟ್ರೀಗಳು ಸ್ವಲ್ಪ ಹಾನಿಯಲ್ಲಿವೆ ನಾನು ಇಲ್ಲ ಎಂದು ಹೇಳುವುದಿಲ್ಲ. ಅವುಗಳನ್ನೂ ಸಹ ಸುಧಾರಣೆ ಮಾಡುವಂತಹ ಪ್ರಯತ್ನವನ್ನು ನಾವು ಮಾಡುತ್ತಿದ್ದೇವೆ. ಮಾನ್ಯ ಡಿ.ಆರ್.ಪಾಟೀಲ್ ಅವರು ಮಾತನಾಡುತ್ತಾ ಬಜೆಟ್‌ನಲ್ಲಿ ಹಿಂದೆ 43 ಕೋಟಿ ರೂಪಾಯಿ ಇತ್ತು ನೀವು ಬಹಳ ಕಡಿಮೆ ಮಾಡಿದಿರಿ ಎನ್ನುವ ಮಾತನ್ನು ಹೇಳಿದರು. ಅದನ್ನು ನಿಜವಾಗಿಯೂ ನಾವು ಒಪ್ಪತಕ್ಕಂಥ ಮಾತು ಕಡಿಮೆ ಆಗಿದೆ. ಇಲ್ಲ ಎಂದು ನಾನು ಹೇಳುವುದಿಲ್ಲ. ಅದು ಏನಾಗಿದೆ ಎನ್ನುವ ಪರಿಸ್ಥಿತಿ ತಮಗೂ ಗೊತ್ತಿದೆ. ಪ್ಲಾನ್ ಸೈಜ್ ಕಡಿಮೆ ಮಾಡಿದ್ದಾರೆ. ಕೇಂದ್ರ ಸರ್ಕಾರದವರು 18 ಸಾವಿರ ಕೋಟಿ ಕೊಟ್ಟ ಕೂಡಲೇ ನಮ್ಮ ಪ್ಲಾನ್ ಸೈಜ್ ಇಲ್ಲಿ 800 ಕೋಟಿ ರೂಪಾಯಿಗಳ ಪ್ಲಾನ್ ಸೈಜ್ ಕಟ್ ಆಗಿದೆ. ನಮ್ಮ ಉದ್ದೇಶ ಏನು ಇದೆ ಅಂದ್ರೆ ಸಾಧ್ಯವಾದಷ್ಟು ಸರ್ಕಾರದ ಮೇಲೆ ಅವಲಂಬನೆಯಾಗದೆ ಅವು ನಡೆಯಬೇಕು. ಕೆಲವೊಂದು ನಡೆಯುತ್ತಿವೆ. ಈ ಬಜೆಟ್ ಬೇಡ. ಇವತ್ತು ಸ್ವಲ್ಪ ದಿವಸ ಬೇಕಾಗುತ್ತದೆ. ಈ ಬಜೆಟ್ ಬೇಡ. ಕೇವಲ ಸರ್ಕಾರಿ ನೌಕರರ ಪಗಾರ ಕೊಟ್ಟರೆ ಸಾಕು ಆಗ ಸರ್ಕಾರದ ಹಸ್ತಕ್ಷೇಪ ಇದರಲ್ಲಿ ಕಡಿಮೆ ಆಗುತ್ತವೆ. ಎಲ್ಲಿಯವರೆಗೂ ನಮ್ಮ ಸೊಸೈಟಿಗೆ ಒಂದು ಲಕ್ಷ ಎರಡು ಲಕ್ಷ ಕೊಡಿ ಎಂದು ಕೇಳುತ್ತೇವೆ. ಅಲ್ಲಿಯವರೆಗೂ ಸರ್ಕಾರದವರು ನಮ್ಮ ಬೆನ್ನು ಹತ್ತುತ್ತಾರೆ. ನಾನೇ ಬೆನ್ನು ಹತ್ತುತ್ತೇನೆ. ಈ ಕಾರಣದಿಂದ ಒಂದೇ ವರ್ಷದಲ್ಲಿ ಕಡಿಮೆ ಮಾಡುವುದಕ್ಕಾಗುವುದಿಲ್ಲ ಹಂತಹಂತವಾಗಿ ಕಡಿಮೆ ಮಾಡುತ್ತೇವೆ. ಸಂಪೂರ್ಣವಾಗಿ ಸ್ವತಂತ್ರವಾಗಿ ನಡೆಯಬೇಕು ಬಹಳಷ್ಟು ಅಂದರೆ ನಮ್ಮ ನೌಕರರಿಗೆ ಪಗಾರ ಕೊಡುವಷ್ಟು ಇದ್ದರೆ ಸಾಕು. ಅದು ಆಗುತ್ತದೆ ಅದಕ್ಕೆ ಸ್ವಲ್ಪ ದಿವಸ ತೆಗೆದುಕೊಳ್ಳುತ್ತದೆ. ಇನ್ನು ತಾವು ಹೇಳಿದಿರಿ ಗೌಡರ ಹಿಡಿತ ಸ್ವಲ್ಪ ಕಡಿಮೆ ಮಾಡಬೇಕೆಂದು ಹೇಳಿದಿರಿ. ಹೇಳಿದ ಗೌಡರು ಬಿಟ್ಟುಬಿಟ್ಟರೆ ಸಾಕು. ರಾಜ್ಯಕ್ಕೆ ತುಂಬಾ ಅನುಕೂಲವಾಗುತ್ತದೆ.

ಶ್ರೀ ಡಿ.ಆರ್.ಪಾಟೀಲ್: ನೀವು ಹುಲಕೋಟಿ ಸೊಸೈಟಿ ಆಡಳಿತವನ್ನು ನೋಡಿ, ಅಲ್ಲಿ ಯಾರು ಛೇರ್ಮನ್‌ರು ಇರುತ್ತಾರೆ, ಕಲಗೇರಿಯೊಳಗೆ ಯಾರು ಛೇರ್ಮನ್‌ರು ಇರುತ್ತಾರೆ ಎಂದು ನೋಡಿ. ಆಗ ಸತ್ಯ ಏನು ಎಂದು ನಿಮಗೆ ಗೊತ್ತಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾಡುತ್ತೇವೆ ಅಷ್ಟೇ; ಅದು ಎಲ್ಲರಿಗೂ ಗುರುತು ಇದೆ. ನಾವು ಏನು ಹೇಳುತ್ತೇವೆ ಅದನ್ನು ನಾವು ಬಿಟ್ಟುಬಿಟ್ಟರೆ ಸಾಕು. ಬಸವಣ್ಣನವರ ವಚನದಲ್ಲಿ ಒಂದು ಕಡೆ ಹೇಳುತ್ತಾರೆ. ಅದು ನನಗೆ ನೆನಪು ಬರುತ್ತದೆ. ಲೋಕದ ಡೊಂಕನು ನೀವೇಕೆ ತಿದ್ದುವಿರಿ. ನಿಮ್ಮ ನಿಮ್ಮ ತನುವನ್ನು ಸಂತೈಸಿಕೊಳ್ಳಿ. ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ. ನೆರೆಮನೆಯ ದುಃಖಕ್ಕೆ ಅಳುವವರನೆತ್ತ ಕೂಡಲ ಸಂಗಮದೇವ ಎಂದು ಹೇಳುತ್ತಾರೆ. ನಾವು ಬಿಟ್ಟುಬಿಟ್ಟರೆ ಸಾಕು. ನಾನು ಶುದ್ಧಿ ಇದ್ದು ಸೂಳಿಗೇರಿ

ಮನೆ ಕೆಟ್ಟಿದ್ದು ಎಂದು ಹೇಳುತ್ತಾರೆ. ಕೆಟ್ಟ ಶಬ್ಧದಲ್ಲಿ ನಮ್ಮಲ್ಲಿ ಒಂದು ಗಾದೆ ಮಾತು ಇದೆ. ಹಾಗೆ ನಾವು ಶುದ್ಧಿ ಇದ್ದುಬಿಟ್ಟರೆ ಸಾಕು. ಹಾಗೆಯೇ ಇವತ್ತು ನಾನು ನೀವು ಸುಧಾರಿಸಿಕೊಂಡರೆ ಸಾಕು. ಇಡೀ ರಾಜ್ಯವೇ ಸುಧಾರಿಸುತ್ತದೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಗೌಡ್ರೆ ಬರೀ ಉಪದೇಶ ಹೇಳಿ ಕೈಬಿಟ್ಟುಬಿಡಬೇಡಿ. 15 ಪರ್ಸೆಂಟಿನಿಂದ ನೂರು ಪರ್ಸೆಂಟ್ ಬರುವುದಕ್ಕೆ ಕೆಳವರ್ಗದ ಜನರು ಅಧಿಕಾರಕ್ಕೆ ಬರುವಂತೆ ಏನು ವ್ಯವಸ್ಥೆ ಮಾಡುತ್ತೀರಿ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಒಂದು ಎಸ್.ಸಿ ಒಂದು ಎಸ್.ಟಿ ಮತ್ತು ಒಂದು ಬಿಸಿಯ ಸ್ತ್ರೀಯರಿಗೆ ಎಂದು ಕಾಯ್ದೆಯಲ್ಲಿ ಅವಕಾಶ ಇದೆ.

ಶ್ರೀ ಕುಂಬ್ಳೆ ಸುಂದರರಾವ್: ಮಾನ್ಯ ಅಧ್ಯಕ್ಷರೇ, ಈ ಮಧ್ಯೆ ನನಗೆ ಒಂದು ನೆನಪು ಆಯಿತು. ನಿಮ್ಮ ನಿಮ್ಮ ಸರ್ವ ಸಂತೈಸಿಕೊಳ್ಳಿ. ಮನವ ಸಂತೈಸಿಕೊಳ್ಳಿ ಎಂದು ವಚನ ಉದ್ದರಿಸಿದಿರಿ ಸಂತೋಷ. ಈಗ ಬಸವೇಶ್ವರರ ವಚನಗಳೆಲ್ಲಾ ಬದಲಾಗುತ್ತಿರುವುದರಿಂದ ಇದರ ಜೊತೆಗೆ ನಿಮ್ಮ ನಿಮ್ಮ ತನು ನಿಮ್ಮ ನಿಮ್ಮ ಮನ ಎನ್ನುವುದರ ಜೊತೆಗೆ ನಿಮ್ಮ ಪಕ್ಷವನ್ನು ಸಂತೈಸಿಕೊಳ್ಳಿ ಎನ್ನುವ ಒಂದು ತಿದ್ದುಪಡಿಯನ್ನು ಸೇರಿಸಿಕೊಳ್ಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ಹಾಗೇಯೇ ಪಕ್ಷದ ಬಗ್ಗೆ ಹೇಳಬೇಕೆಂದರೆ ಬಸವಣ್ಣನವರ ವಚನಗಳನ್ನು ಹೇಳಿದರೆ ಎಲ್ಲರೂ ಸಿಟ್ಟಿಗೇಳುತ್ತಾರೆ. ಆ ವಚನ ಹೇಳಿದರೆ ಎಲ್ಲಾ ಪಕ್ಷದವರು ಸಿಟ್ಟಿಗೇಳುತ್ತೀರಿ ಆದ್ದರಿಂದ ಬೇಡ.

12.30 ಪಿ.ಎಂ

ಮಾನ್ಯ ಅಧ್ಯಕ್ಷರೇ, ನಮ್ಮ ಆರ್‌ಡಿಪಿಆರ್ ಆಕ್ಟ್‌ಗೂ ಇದಕ್ಕೂ ಅಂತರ ಇದೆ. ಇದನ್ನು ಒಂದು ಕಡೆ ಸ್ವತಂತ್ರವಾಗಿ ನಿರ್ವಹಿಸಬೇಕೆಂದು ಹೇಳುತ್ತೇವೆ. ಇಲ್ಲಿ ಎಸ್‌ಸಿ/ಎಸ್‌ಟಿಯವರೂ ಕೂಡ ಅವರದ್ದೇ ಆದ ಸೊಸೈಟಿಯನ್ನು ಕಟ್ಟುವಂಥ ವ್ಯವಸ್ಥೆ ಇದೆ. ಇವೊತ್ತು ಸಂಪೂರ್ಣವಾಗಿ ಅವರೇ ಇರುವ ವ್ಯವಸ್ಥೆ ಇರುವುದರಿಂದ ಅವರ ಬಗ್ಗೆ ನಾವು ಚಿಂತನೆ ಮಾಡುತ್ತಾ ಇದ್ದೇವೆ. ನಮ್ಮ ರಾಜ್ಯದಲ್ಲಿ ಎಸ್‌ಸಿ/ ಎಸ್‌ಟಿ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಸೊಸೈಟಿಗಳು ಇವೆ. ಎಲ್ಲವೂ ಚೆನ್ನಾಗಿ ಕೆಲಸ ಮಾಡುತ್ತಿವೆ. ಅಲ್ಲೊಂದು ಇಲ್ಲೊಂದು ಕೆಟ್ಟಿರಬಹುದು. ಅದನ್ನು ನಾವು ಹೆಚ್ಚು ಗಣನೆಗೆ ತೆಗೆದುಕೊಳ್ಳುವುದು ಬೇಡ. ಆದ್ದರಿಂದ ಅವರುಗಳನ್ನು ಈ ಸಹಕಾರ ಸಂಸ್ಥೆಗಳ ಮೂಲಕ ಎತ್ತುವಂಥ ವ್ಯವಸ್ಥೆಯು ಇಲ್ಲಿ ಇದೆ ಎಂಬ ಮಾತನ್ನು ಹೇಳಬಯಸುತ್ತೇನೆ. ಇವೊತ್ತು ಬಜೆಟ್‌ನಲ್ಲಿ ಕಡಿಮೆಯಾದ ಮಾತನ್ನೂ ಕೂಡ ತಮಗೆ ಹೇಳುತ್ತಾ, ತಮ್ಮ ಬೇಡಿಕೆಗಳ ಮೇಲಿನ ವಿಷಯಕ್ಕೆ ಉತ್ತರವನ್ನು ಕೊಡಬಯಸುತ್ತೇನೆ.

ಕೃಷಿ ಉತ್ಪನ್ನ ಮಾರಾಟದ ಬಗ್ಗೆ ಬಹಳ ಸ್ವಾರಸ್ಯಕರವಾದ ಚರ್ಚೆಯನ್ನು ಮಾಡಿದ್ದಾರೆ. ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ನಾವು ಅಧಿಕಾರಕ್ಕೆ ಬಂದಮೇಲೆ ಮಾಡಿದ ಸುಧಾರಣೆಗಳನ್ನು ಹಲವಾರು ಸಂದರ್ಭದಲ್ಲಿ ಹೇಳಿದ್ದೇವೆ. ರೈತರು ಬೆಳೆಯಲು ಬೇಕಾಗುವ ಹಣಕಾಸಿನ ವ್ಯವಸ್ಥೆಯನ್ನು ಪ್ರಾಥಮಿಕ ಸಹಕಾರ ಸಂಘಗಳ ಮೂಲಕ ಕೊಡಬೇಕು, ಬೆಳೆದಂಥ ಮಾಲನ್ನು ತಾಲ್ಲೂಕು ಮಾರಾಟ ಸಹಕಾರ ಸಂಘಗಳ ಮುಖಾಂತರ ಮಾರಾಟ ಮಾಡಬೇಕು. ಅಲ್ಲಿ ರೈತರ ಸರಕುಗಳನ್ನು ಖರೀದಿ ಮಾಡುವಂಥ ಒಂದು ವ್ಯವಸ್ಥೆಯು ಇರಬೇಕು. ಅಲ್ಲಿಂದ ರಾಜ್ಯ ಮಾರಾಟ ಸಹಕಾರ ಸಂಘವು ತೆಗೆದುಕೊಂಡು ಮಾರಾಟ ಮಾಡುವುದು, ಎಕ್ಸ್‌ಪೋರ್ಟ್ ಮಾಡುವುದು ಮುಂತಾಗಿ ಮಾಡಬೇಕೆಂದು ಇದೆ. ಇದು ನಮ್ಮಲ್ಲಿರುವ ವ್ಯವಸ್ಥೆ. ಈ ಕಾರಣಕ್ಕಾಗಿ ನಮ್ಮಲ್ಲಿ ಏನಾಗಿದೆ ಅಂದರೆ, ನಮ್ಮಲ್ಲಿ ಎಲ್ಲಾ ಜಿಲ್ಲಾ ಮಟ್ಟದಲ್ಲಿ ಮಾರಾಟ ಮಂಡಳಿಯು ಇದ್ದಿರಲಿಲ್ಲ. ಈ ಕಾರಣಕ್ಕಾಗಿ ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಫೆಡರೇಷನ್ ಮಾಡಬೇಕೆಂದು ಕಾರ್ಯಪ್ರವೃತ್ತರಾಗಿದ್ದೇವೆ. ಈಗಾಗಲೇ 19 ಜಿಲ್ಲೆಗಳಿಂದ ಪ್ರೊಪೋಸಲ್ಸ್ ಬಂದಿವೆ. 3-4 ಕಡೆಗಳಲ್ಲಿ ಈ ಕೆಲಸವು ಆಗಿದೆ. ಈ ವ್ಯವಸ್ಥೆಯನ್ನು ಎಲ್ಲಾ ಜಿಲ್ಲೆಗಳಲ್ಲಿ ಮಾಡುತ್ತೇವೆ. ತಾಲ್ಲೂಕು ಮಾರಾಟ ಸಹಕಾರ ಸಂಘದಲ್ಲಿ ಮಾಲನ್ನು ತಂದು ಹಾಕಬೇಕು, ಜಿಲ್ಲಾ ಮಾರಾಟ ಸಹಕಾರ ಸಂಘಗಳಿಗೆ ಹೋಗಿ ಅದನ್ನು ಖರೀದಿ ಮಾಡಬೇಕು, ಅವರು ಖರೀದಿ ಮಾಡಿದಂಥ ಮಾಲನ್ನು ರಾಜ್ಯ ಮಾರಾಟ ಸಹಕಾರ ಸಂಘವು ತೆಗೆದುಕೊಂಡು ಎಕ್ಸ್‌ಪೋರ್ಟ್ ಮುಂತಾದ ಕೆಲಸವನ್ನು ಮಾಡಬೇಕು. ಇಂಥ ಒಂದು ವ್ಯವಸ್ಥೆಯನ್ನು ನಾವು ಸರಿಯಾಗಿ ಜಾರಿಗೆ ತರಬೇಕಾಗಿದೆ. ಆ ಮೂಲಕ ಮಾತ್ರ ನಾವು ರೈತರನ್ನು ರಕ್ಷಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದನ್ನು ಮಾಡುವ ಕುರಿತು ನಾವು ಪ್ರಯತ್ನ ಮಾಡುತ್ತಾ ಇದ್ದೇವೆ ಮತ್ತು ಅದಕ್ಕೆ ಹೊಸ ರೂಪವನ್ನು ಕೊಡುತ್ತಾ ಇದ್ದೇವೆ. ಹೆಚ್ಚು ಹಣವನ್ನು ಕೊಡುತ್ತಾ ಇದ್ದೇವೆ. ಒಂದು ಫಂಡನ್ನು ಸ್ಥಾಪಿಸಿ ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಕೆಲಸಕಾರ್ಯಗಳನ್ನು ಮಾಡಲು ವ್ಯವಸ್ಥೆ ಮಾಡುತ್ತೇವೆ. ಈ ಬಗ್ಗೆ ಅವಶ್ಯಕ ತೀರ್ಮಾನಗಳನ್ನು ಮಾಡಿದ್ದೇವೆ. ಹಾಗೆಯೇ ನಾವು ಹೊಸದಾಗಿ ಸಹಕಾರ ನೀತಿಯನ್ನೂ ಕೂಡ ತರುತ್ತೇವೆ. ಅದರಲ್ಲಿ ಈ ಎಲ್ಲಾ ಅಂಶಗಳನ್ನು ಅಳವಡಿಸಿಕೊಳ್ಳುತ್ತೇವೆ ಎಂಬ ಮಾತನ್ನು ಹೇಳಿ, ಧಾರವಾಡ ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಫೆಡರೇಷನ್‌ನ್ನು ಡಿ.ಆರ್.ಪಾಟೀಲ್‌ರವರು, ಹೆಚ್.ಕೆ.ಪಾಟೀಲರು ಅದರ ವಿರುದ್ಧ ಇದ್ದಾರೆ ಎಂಬ ಕಾರಣಕ್ಕಾಗಿ ಮಾಡಿದ್ದಾರೆ ಎಂಬ ಮಾತನ್ನು ಹೇಳಿದ್ದೀರಿ. ಅಲ್ಲಿ ಎರಡು ಸಂಘಗಳು ಇದ್ದವು. ಅಲ್ಲಿ ಕೇವಲ ಮಾರ್ಕೆಟಿಂಗ್ ಸೊಸೈಟಿಗಳು ಮಾತ್ರ ಮೆಂಬರ್ ಆಗಿದ್ದಾವೆ. ಅಲ್ಲಿನ ಮೆಂಬರ್‌ಶಿಫ್ ಹೇಗಿದೆ ಅಂದರೆ, ತಮಗೆ ಎಷ್ಟು ಬೇಕೋ ಅಷ್ಟಕ್ಕೆ ಇದ್ದಾವೆ. ಜನರಲ್ ಬಾಡಿಯೂ ಅದೇ, ಬೋರ್ಡ್ ಕೂಡ ಅದೇ. ಈ ಸ್ಥಿತಿಯು ಅಲ್ಲಿದೆ. ನಾನೇ ಒಂದು ಸೊಸೈಟಿಯವರನ್ನು ಮೆಂಬರ್ ಆಗಲು ಅಲ್ಲಿಗೆ ಕಳುಹಿಸಿದೆ. ನಮ್ಮಲ್ಲಿ ಅಧಿಕೃತ ಶೇರು ಬಂಡವಾಳ ಆಗಿದೆ ಎಂದು ಅವರನ್ನು ಮೆಂಬರ್ ಮಾಡಿಕೊಳ್ಳದೇ ವಾಪಸ್ ಕಳುಹಿಸಿದರು. ಇವೊತ್ತು ನಾವು ಡಿಸ್ಟ್ರಿಕ್ಟ್ ಮಾರ್ಕೆಟಿಂಗ್

ಫೆಡರೇಷನ್‌ನಲ್ಲಿ ಪ್ರಾಥಮಿಕ ಸಂಘಗಳು ಮೆಂಬರ್ ಆಗಬೇಕು. ಇದು ನಮ್ಮ ವ್ಯವಸ್ಥೆ. ಪ್ರಾಥಮಿಕ ಸಂಘಗಳಿಂದ ಕೆಲವು ರೆಪ್ರಸೆಂಟೇಷನ್ಸ್ ಬರಬೇಕು, ಮಾರಾಟ ಸಹಕಾರ ಸಂಘಗಳಿಂದ ಕೆಲವು ರೆಪ್ರಸೆಂಟೇಶನ್ಸ್ ಬರಬೇಕು, ಡಿಸಿಸಿ ಮತ್ತು ಫೈನಾನ್ಸಿಷಿಯಲ್ ಬ್ಯಾಂಕ್‌ಗಳಿಂದ ರೆಪ್ರಸೆಂಟೇಷನ್ ಬರಬೇಕೆಂಬ ವ್ಯವಸ್ಥೆಗೆ ಅಲ್ಲಿ ಕೂಡಿಸಿದ್ದೇವೆಯೇ ಹೊರತು ರಾಜಕೀಯವಾಗಿ ಅಲ್ಲಿ ನಾವು ಮಾಡಿಲ್ಲ. ಇವೊತ್ತಿಗೂ ನೀವು ಒಪ್ಪಿಕೊಂಡರೆ ಎಲ್ಲರೂ ಕುಳಿತುಕೊಂಡು ಏನು ಮಾಡಬೇಕೆಂಬುದನ್ನು ತೀರ್ಮಾನಿಸಿ ಮಾಡಲು ನಾವು ತಯಾರಾಗಿದ್ದೇವೆ. ಅಲ್ಲಿ ಕೋಟಿಗಟ್ಟಲೆ ಆಸ್ತಿ ಇದೆ. ಅದು ಸರಿಯಾಗಿ ನಡೆಯುತ್ತಾ ಇಲ್ಲ. ಆ ಕಾರಣಕ್ಕಾಗಿ ಇಡೀ ರಾಜ್ಯದಲ್ಲಿ ಒಂದೇ ರೀತಿಯ ವ್ಯವಸ್ಥೆಯು ಇರಬೇಕೆಂದು ಅಲ್ಲಿ ಒಂದು ಕ್ರಮವನ್ನು ತಂದಿದ್ದೇನೆ ಎಂದು ಹೇಳಬಯಸುತ್ತೇನೆ. ಮಾನ್ಯ ಸದಸ್ಯರು ಎಲ್ಲಾ ರೈತರು ಈ ಸಂಘಗಳಿಗೆ ಮೆಂಬರ್ ಆಗಬೇಕೆಂದು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಈಗಿನ ಕಾಯಿದೆಯಲ್ಲಿ ಆ ಬಗ್ಗೆ ವ್ಯವಸ್ಥೆಯು ಇದೆ. ಅರ್ಜಿ ಕೊಟ್ಟ ಕೂಡಲೇ ಕ್ರೆಡಿಟ್ ಸೊಸೈಟಿಯಲ್ಲಿ ಅವನು ಮೆಂಬರ್ ಆಗುತ್ತಾನೆ. ಅದನ್ನು ಅವರು ತಿರಸ್ಕಾರ ಮಾಡಲು ಬರುವುದಿಲ್ಲ. ಸೆಕ್ಷನ್ 165ದಲ್ಲಿ ಅದಕ್ಕೆ ಸೂಕ್ತವಾದ ವ್ಯವಸ್ಥೆಯು ಇದೆ. ಇಂಥ ವ್ಯವಸ್ಥೆಯನ್ನು ಹಿಂದೆಯೇ ಮಾಡಿದ್ದರು.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಸಚಿವರು ಹೇಳಿದಂತೆ ಅರ್ಜಿ ಕೊಟ್ಟರೆ ಮೆಂಬರ್ ಆಗುತ್ತಾರೆ. ಆದರೆ ಅವರು ಅರ್ಜಿಗಳನ್ನು ತೆಗೆದುಕೊಳ್ಳುವುದೇ ಇಲ್ಲವಲ್ಲಾ?

ಶ್ರೀ ಎಸ್.ಎಸ್.ಪಾಟೀಲ್: ನಾನೂ ಕೂಡ ಹೇಳಿದ್ದೆ, ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಫೆಡರೇಷನ್ನಿನವರು ಕೊಟ್ಟ ಅರ್ಜಿಯನ್ನು ವಾಪಸ್ ಕಳುಹಿಸಿದ್ದರು ಎಂದು. ಆದರೆ ಈಗ ಕಾಯಿದೆಯಲ್ಲಿ ಎಲ್ಲಾ ವ್ಯವಸ್ಥೆಯೂ ಇದೆ. ನನ್ನ ವಿಚಾರ ಏನೆಂದರೆ ಸಮಾನ ಮನಸ್ಕರು ಎಲ್ಲರೂ ಸೇರಿ ಸಂಘವನ್ನು ಕಟ್ಟಿಕೊಳ್ಳಲಿ, ಅದಕ್ಕೆ ನಾವು ಬೇಡ ಎಂದು ಹೇಳುವುದಿಲ್ಲ. ಹಾಗೆ ಇದನ್ನು ಮಾಡಿಕೊಡಬೇಕು. ಈ ವ್ಯವಸ್ಥೆಯಲ್ಲಿ ನಾವು ನೋಡಿದ ಅನುಭವ ಇದೆ. ಯಾರೋ ಕಟ್ಟುತ್ತಾರೆ ಬಂದು ಎಲೆಕ್ಷನ್ ಮಾಡಿ ಅದನ್ನು ತೆಗೆದು ಒಗೆದು ಸೊಸೈಟಿಯನ್ನು ಕೆಡಿಸಿ ಬಿಟ್ಟಿರುವ ಎಷ್ಟೋ ಉದಾಹರಣೆಗಳು ನಮ್ಮಲ್ಲಿವೆ.

ಅಧ್ಯಕ್ಷರು: ಮಾನ್ಯ ಡಿ.ಆರ್.ಪಾಟೀಲರು ಹೇಳುವ ಮಾತಿನ ಉದ್ದೇಶ ಏನೆಂದರೆ, ವಯಸ್ಕರ ಮತದಾನ ಪದ್ಧತಿಯನ್ನು ಜಾರಿಗೆ ತಂದಮೇಲೆ, ಸಂವಿಧಾನಬದ್ಧವಾಗಿ ಎಲ್ಲರಿಗೂ ರಾಜಕೀಯ ಸ್ವಾತಂತ್ರ್ಯವನ್ನು ಕೊಟ್ಟಿದ್ದೇವೆ. ಈ ದೇಶದಲ್ಲಿ ಎರಡು ಓಟು ಇರತಕ್ಕಂಥವರು ಯಾರೂ ಇಲ್ಲ. ಆರ್ಥಿಕ ಸಮಾನತೆಯನ್ನು, ಸಾಮಾಜಿಕ ಸಮಾನತೆಯನ್ನು ಕೊಡುವುದಕ್ಕೆ ನಾವು ಇನ್ನೂ ಕೂಡ ಪ್ರಗತಿಯನ್ನು ಸಾಧಿಸಿಲ್ಲ. ಆ ದಿಸೆಯಲ್ಲಿ ಹಿಂದೆ ಬಿದ್ದಿದ್ದೇವೆ. ಸಹಕಾರಿ ಕ್ಷೇತ್ರದ ಮುಖಾಂತರ ಆರ್ಥಿಕ ಸಮಾನತೆಯನ್ನು ಕೊಡುವುದಕ್ಕೆ ಸಾಕಷ್ಟು ಅವಕಾಶಗಳು ಇರುತ್ತವೆ. ಈ ರಾಜ್ಯದ ಜನಸಂಖ್ಯೆಯ ಹಿತದೃಷ್ಟಿಯಿಂದ ಸಹಕಾರ ಸಂಘಗಳಲ್ಲಿ ಜನರು ಎಷ್ಟು ಸದಸ್ಯರಾಗಿದ್ದಾರೆ

ಎಂಬುದನ್ನು ನೋಡಿದಾಗ ಇದು ತೃಪ್ತಿಕರವಾಗಿಲ್ಲ, ಹಾಗಾಗಿ ಕಡ್ಡಾಯವಾಗಿ ಎಲ್ಲರೂ ಸಹಕಾರ ಸಂಘಗಳಲ್ಲಿ ಮೆಂಬರ್ ಎಂದು ಆಗತಕ್ಕಂಥ ಒಂದು ವ್ಯವಸ್ಥೆಯು ಬರಬೇಕೆಂದು ಅವರು ಹೇಳುವುದು. ಮೂಲ ಕಲ್ಪನೆ ಅದಾಗಿದೆ. ನಾವು ಸೊಸೈಟಿ ಮಾಡುವುದು, ಯಾರೋ ಹತ್ತು ಜನರು ಅದನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳುವುದು, ಆ ಸೊಸೈಟಿಗೆ ಅವರೇ ಮಾಲೀಕರು ಆಗತಕ್ಕಂಥಾದ್ದು ಆಗಬಾರದು ಎಂಬುದು ಅವರ ಅಭಿಪ್ರಾಯ. ಸಹಕಾರಿ ತತ್ವದ ಮೇಲೆ ನಡೆಯಬೇಕೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಸಚಿವರು ಯಾರ್‍ಯಾರು ಸಮಾನ ಮನಸ್ಕರಿರುತ್ತಾರೆ ಅವರೆಲ್ಲರೂ ಕೂಡಿ ಇಂಥ ಒಂದು ಸಂಸ್ಥೆಯನ್ನು ಮಾಡಿಕೊಳ್ಳಬೇಕು ಎಂದು ಹೇಳಿದ್ದಾರೆ. ಯಾರ್‍ಯಾರು ಹತ್ತಿ ಮಾರಾಟ ಮಾಡುತ್ತಿದ್ದರು, ಹತ್ತಿ ಮಾರಾಟ ಸಹಕಾರಿ ಸಂಘಗಳು, ಯಾರ ಸೊಸೈಟಿಯಲ್ಲಿ ಆವಾಗ ಹತ್ತಿ ಬರುತ್ತಾ ಇತ್ತು, ಆ ಸಂಘಗಳು ಕೂಡಿಕೊಂಡು ಡಿಸ್ಟ್ರಿಕ್ಟ್ ಮಾರ್ಕೆಟಿಂಗ್ ಫೆಡರೇಷನ್ ಮಾಡಿದರು. ಅದನ್ನು ಕೆಡಿಸಬೇಕೆಂದು ನಿಮ್ಮ ಮನಸ್ಸೋ ಅಥವಾ ಉಳಿಸಬೇಕೆಂದೋ? 1959ರಲ್ಲಿ ರಿಜಿಸ್ಟ್ರೇಷನ್ ಆದ ಈ ಸಂಸ್ಥೆ ಇವೊತ್ತಿನವರೆವಿಗೂ ಲಾಭವನ್ನು ಮಾಡಿದೆ. 'ಎ' ಕ್ಲಾಸ್ ಇದೆ, ಇದನ್ನು ಒಂದು ದಿವಾಳಿ ಆದ ಸಂಸ್ಥೆಗೆ ಅಮಾಲ್ಗಮೇಟ್ ಮಾಡಿ, ಆ ದಿವಾಳಿ ಆದ ಸಂಸ್ಥೆಯ ಡೈರೆಕ್ಟರನ್ನೇ ಇದಕ್ಕೆ ಚೇರ್ಮನ್ ಮಾಡಿ, ಅವರು ಹೆಚ್ಚು ಸಂಖ್ಯೆಯಲ್ಲಿ ಇರುವ ಹಾಗೆ ಮಾಡಿ, ಈ ಸಂಸ್ಥೆಯೊಳಗೆ ಮೂರು ಜನ ಡೈರೆಕ್ಟರನ್ನು ತೆಗೆದುಕೊಳ್ಳುವ ಹಾಗೆ ಮಾಡಿದ್ದೀರಿ. ಆ ಮೂರು ಮಂದಿ ಡೈರೆಕ್ಟರ್‌ಗಳೂ ** ಅಲ್ಲವೇ? ಚೇರ್ಮನ್‌ರೂ ಕೂಡ **, ಇವರು 9 ಮಂದಿಯನ್ನು ನಾಮಿನೇಷನ್ ಮಾಡಿದ್ದಾರೆ. ಆ ಒಂಬತ್ತು ಮಂದಿಯಲ್ಲಿ ಐದು ಮಂದಿ ಸಾದರರು. ನಾಲ್ಕು ಮಂದಿ ಇತರೇಯವರು. ಇದನ್ನು ಮಾಡಿ ರಾಜಕೀಯಕ್ಕಲ್ಲ, ಅದಕ್ಕಲ್ಲ, ಇದಕ್ಕಲ್ಲ, ಎಂದು ಹೇಳುತ್ತೀರಿ.

ಶ್ರೀ ಎಸ್.ಎಸ್.ಪಾಟೀಲ್: ಹೀಗೆ ಮಾತನಾಡಿದರೆ, ಬಹಳ ಮಾತನಾಡಬೇಕಾಗುತ್ತದೆ. ದಯವಿಟ್ಟು ಆ ಮಾತನ್ನು ವಾಪಸ್ ತೆಗೆದುಕೊಳ್ಳಿ. ಯಾರನ್ನು ನಾಮಿನೇಷನ್ ಮಾಡಿದ್ದೇವೆ ಅವರು ಯಾವ ಜಾತಿಯವರು ಎಂದು ನಾನು ನೋಡಿಲ್ಲ ಮಾನ್ಯ ಅಧ್ಯಕ್ಷರೇ. ಅಲ್ಲಿದ್ದ ಡೈರಕ್ಟರ್‌ಗಳನ್ನು ನಾಮಿನೇಟ್ ಮಾಡಿದ್ದೇವೆ. ಹೊರಗಿನವರನ್ನು ನಾನು ಮಾಡಿಲ್ಲ. ಅವರು ಹೇಳಿದ ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕಾಗುತ್ತದೆ. ನಾನೂ ಕೂಡ ಅವರ ಮಾತಿಗೆ ಸರಿಯಾದ ಉತ್ತರವನ್ನು ಹೇಳಬೇಕಾಗುತ್ತದೆ. ಜಾತಿ ಮಾತುಗಳಿಗೆ ಬಂದರೆ ನಾನು ಬೇರೆ ಉತ್ತರವನ್ನು ಹೇಳಬೇಕಾಗುತ್ತದೆ. ಅವರು ಸಾದರರು ಇರಬಹುದು, ನಾನು ಏನು ಮಾಡಲಿ? ನಿಮಗೂ ಗೊತ್ತಿದೆ ಅಲ್ಲಿನ ವಿಚಾರ. ಹೀಗೆ ತಾವು ಹೇಳುವುದು ಸರಿಯಲ್ಲ.....

** ಪದವನ್ನು ಅಧ್ಯಕ್ಷರ ಅಪ್ಪಣೆ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಡಿ.ಆರ್.ಪಾಟೀಲ್: ತಾವು ದಯವಿಟ್ಟು ಒಂದು ನಿಮಿಷ ನನಗೆ ಮಾತನಾಡಲು ಬಿಡಿ. ಒಂದು ನಿಮಿಷ ತಾವು ಈಲ್ಡ್ ಆಗಿ. ಮಾನ್ಯ ಅಧ್ಯಕ್ಷರೇ, ಈ ಮಾತನ್ನು ನಾನು ಹೇಳಿಲ್ಲ. ಮಾನ್ಯ ಬಿ.ಜಿ.ಬಣಕಾರ್‌ರವರು, ಅವರು ತಮ್ಮ ಕುರ್ಚಿಯಲ್ಲಿ ಕುಳಿತಿದ್ದವರು ಮತ್ತು ಅವರೂ ಸಾದರರೇ. ಅವರು ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಪತ್ರವನ್ನು ಬರೆದಿದ್ದಾರೆ. ಆ ಪತ್ರದಲ್ಲಿ ಮುಖ್ಯಮಂತ್ರಿಯವರಿಗೆ ವಿಷಯಗಳನ್ನು ಹೇಳಿದ್ದಾರೆ. 12 ಜನ ಡೈರೆಕ್ಟರ್ಸ್ ಇದ್ದಂಥ ಈ ಸಂಸ್ಥೆಯೊಳಗೆ ಎಲ್ಲಾ ಸಮಾಜದವರೂ ಇದ್ದರು, ಅವರೆಲ್ಲರನ್ನೂ ಬಿಟ್ಟು ಈ ಸಂಸ್ಥೆಯಲ್ಲಿ ಮೂರು ಡೈರೆಕ್ಟರನ್ನು ಮಾಡಿದ್ದಾರೆ. ಆ ಮೂರು ಮಂದಿಯೂ ಸಾದರರು ಇದ್ದಾರೆ. ಇದು ಅವರು ಪತ್ರದಲ್ಲಿ ಹೇಳಿದದ್ದು. ಇದು ಬೇರೆಯಾರೂ ಹೇಳಿದ್ದಲ್ಲ, ಮಾಜಿ ಸ್ಪೀಕರ್ ಬಿ.ಜಿ.ಬಣಕಾರ್‌ರವರು ಹೇಳಿದ್ದು...

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಬಣಕಾರ್‌ರವರನ್ನು ಈ ವಿಚಾರದಲ್ಲಿ ಕಂಡು ಮಾತನಾಡುತ್ತೇನೆ. ಅವರಿಗೆ ಇಲ್ಲಿ ಬರುವುದಕ್ಕೆ ಆಗುವುದಿಲ್ಲ.

SRI D.R.PATIL: It is a fact, what you have done. I am charging you.

(Interruptions)

ನೀವು ಅದನ್ನು ಸಹಕಾರಿ ಚಳುವಳಿ ದೃಷ್ಟಿಯಿಂದ ಮಾಡಿದ್ದರೆ ಅದು ಬೇರೆ ವಿಚಾರ.

ಅಧ್ಯಕ್ಷರು: ಮಾನ್ಯ ಡಿ.ಆರ್.ಪಾಟೀಲ್‌ರವರೇ, ಒಬ್ಬರು ಆಡಳಿತ ನಡೆಸುವ ವೇಳೆಗೆ, ಒಬ್ಬರು ಮಂತ್ರಿಯಾಗಿರತಕ್ಕಂಥಾದ್ದು, ಅದೇ ವೇಳೆಗೆ ಒಂದು ಸೊಸೈಟಿಗೆ ನಾಮಿನೇಟ್ ಆಗತಕ್ಕಂಥ ಡೈರೆಕ್ಟರ್‌ರು ಅವರದ್ದೇ ಸಮಾಜಕ್ಕೆ ಸೇರಿರತಕ್ಕಂಥವರಾಗಿರುವುದು It might be a strange coincidence. ಅದನ್ನು ಉದ್ದೇಶಪೂರ್ವಕವಾಗಿ, ಅವರು ಆಸಕ್ತಿ ವಹಿಸಿ ಮಾಡಿರುತ್ತಾರೆ ಎಂದು ನಾವು ಒಂದು ನಿರ್ಣಯಕ್ಕೆ ಬಂದು ಆಪಾದನೆ ಮಾಡಿ, ಪ್ರತಿಪಾದನೆ ಮಾಡಿ ಅವರು ತಮ್ಮ ಜಾತಿಯ ಹಿತಾಸಕ್ತಿಯನ್ನು ಕಾಪಾಡಿದ್ದಾರೆ ಎಂದು ಆಪಾದನೆ ಮಾಡತಕ್ಕಂಥಾದ್ದು ಸಾಧುವಲ್ಲ. ಉದಾಹರಣೆಗೆ ಮಾನ್ಯ ರೋಷನ್ ಬೇಗ್‌ರವರು ಇದ್ದಾರೆ. ಅವರು ಮುಸಲ್ಮಾನ ಸಮಾಜದವರು ಯಾರೋ ಒಬ್ಬ ಕಾನ್‌ಸ್ಟೇಬಲ್ ಎಲ್ಲೋ ಒಂದು ತಪ್ಪು ಮಾಡುತ್ತಾರೆ, ಅವರು ಅದೇ ಸಮಾಜದವರಾಗಿದ್ದಾರೆ, ಆಗ ನೇರವಾಗಿ ಆ ಕಾನ್‌ಸ್ಟೇಬಲ್ ಮಾಡಿರತಕ್ಕಂಥ ತಪ್ಪನ್ನು to link it up to the Minister concerned, it is not proper ಫ್ಯಾಕ್ಟ್ಸ್ ಇರಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಒಬ್ಬ ಡೈರೆಕ್ಟರ್ ಹೀಗೆ ಆದರೆ ಪರವಾಗಿಲ್ಲ. ಆದರೆ ಮೂರು ಜನರೂ ಒಂದೇ ಜಾತಿಗೆ ಸೇರಿದವರಾಗಿದ್ದಾರೆ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆಗಳ ಮೇಲೆ ಮಾತನಾಡುವಾಗ ಈ ವಿಚಾರದಲ್ಲಿ ಮಾತನಾಡಿಲ್ಲ. ಯಾರ್‍ಯಾರು ಕೂಡಿ ಮಾಡಿಕೊಳ್ಳಬೇಕು ಎನ್ನುತ್ತಾರೋ ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಹೇಳಿದಿರಿ.

ಅಧ್ಯಕ್ಷರು: ಮಾನ್ಯ ಡಿ.ಆರ್.ಪಾಟೀಲರೇ, ಇದು ಏನಾಗುತ್ತದೆ ಎಂದರೆ ನಾಳೆ ನೀವು ಸಹಕಾರ ಮಂತ್ರಿಗಳಾದರೂ ಕೂಡ ವಿವರಣೆ ತರಿಸುವಾಗ ಯಾರನ್ನಾದರೂ ನಾಮಿನೇಷನ್ ಮಾಡಲಿಕ್ಕೆ ಅವರು ಎಲ್ಲಾದರೂ ಡಿಫಾಲ್ಟರ್ ಆಗಿದ್ದಾರೋ, ಏನು? ಯಾವ ಸಂಘಕ್ಕೆ ಅವರನ್ನು ನಾಮಿನೇಟ್ ಮಾಡಬೇಕು. ಅವರು ಮೆಂಬರ್ ಇದ್ದಾರೆಯೋ ಏನೋ ಎಂದು ಅಷ್ಟನ್ನೇ ನೋಡಬೇಕಾಗುತ್ತದೆ. ಅವರು ಯಾವ ಜಾತಿ, ಉಪಜಾತಿ ಎಂದು ನೋಡುವುದಕ್ಕೆ ಸಾಧ್ಯವಿಲ್ಲ. ಅದನ್ನು ನಾವು ಬಹಳ ದೂರ ತೆಗೆದುಕೊಂಡು ಹೋಗುವುದು ಬೇಡ. It could be a co-incidence. For the purpose of maintaining better standards, I would not allow thoses references to go on record. It is not in good taste.

Sri D.R.Patil: I don't object.

Mr. Speaker: It is not in good taste.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಬಿ.ಜಿ.ಬಣಕಾರ್‌ರವರ ಬಗ್ಗೆ ಪ್ರಸ್ತಾಪ ಮಾಡಿದಿರಿ, ಅವರ ಬಗ್ಗೆ ತಮಗೂ ಗೊತ್ತಿದೆ. ಅವರು ಹಿರಿಯ ಸಹಕಾರಿಗಳು. ಅವರು ಆ ಕ್ಷೇತ್ರದಲ್ಲಿ ಸೇವೆ ಮಾಡಿರುವ ಬಗ್ಗೆ ನಿಮಗೂ ಸಾಕಷ್ಟು ಗೊತ್ತಿದೆ. ಅವರು ಸ್ಪೀಕರ್ ಆಗಿದ್ದಂಥವರು. ಅವರು ಹೆಸರನ್ನು ಪ್ರಸ್ತಾಪ ಮಾಡಿದ್ದರಿಂದ ಈ ಸದನದ ಘನತೆ ಕಡಿಮೆಯಾಯಿತು ಎಂದು ನನಗನಿಸುತ್ತದೆ. ಅವರು ಎಷ್ಟು ನೊಂದು ಬರೆಯುತ್ತಿದ್ದಾರೆ ಎನ್ನುವ ಅಂಶವನ್ನು ಗಮನಿಸಬೇಕು. ಇಲ್ಲಿ ನೇರವಾಗಿ ನಿಮ್ಮನ್ನು ಜಾತಿವಾದಿಗಳು ಎಂದು ಕರೆಯುತ್ತಿದ್ದಾರೆ ಎನ್ನುವ ಪ್ರಶ್ನೆ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ಸಹಕಾರಿ ಕ್ಷೇತ್ರದಲ್ಲೇ ಈ ರೀತಿ ಜಾತಿವಾದ, ನಾಮಿನೇಷನ್ ಈ ಎರಡೂ ಅಂಶವನ್ನು ಯಾರು ಮಾಡಿರುವುದು? ತಾವು ಮಂತ್ರಿಗಳು ಇದ್ದೀರಿ. ಇದನ್ನು ಮಾಡುವ ಸಂದರ್ಭದಲ್ಲಿ ಒಂದು ಸಾರಿ ನೋಡಬೇಕಲ್ಲ. ಯಾರಿದ್ದಾರೆ, ಏನು ಎಂದು ನೋಡಬೇಕು. ಮೊದಲನೆಯದಾಗಿ ನಾಮಿನೇಷನ್ ಬಗ್ಗೆ ನನಗೆ ಗೊತ್ತಿರುವ ಪ್ರಕಾರ ಸನ್ಮಾನ್ಯ ಮಂತ್ರಿಗಳು ಸಹಕಾರಿ ಕ್ಷೇತ್ರದಲ್ಲಿ ತುಂಬಾ ಪರಿಣಿತರು. ಇಡೀ ರಾಜ್ಯದಲ್ಲಿ ಯಾವ ಕ್ಷೇತ್ರದಲ್ಲಿ ಸಹಕಾರಿ ಕ್ಷೇತ್ರದ ಭಾಷಣವನ್ನು ಮಾಡುವಾಗ ಕೇಳಿದ್ದೇನೆ. ಅತೀ ಉತ್ಕೃಷ್ಟವಾದ ಭಾಷಣವನ್ನು ಮಾಡುತ್ತಾರೆ. ಕೇವಲ ಭಾಷಣಕ್ಕೆ ಸೀಮಿತವಾಗಿಬಿಟ್ಟರೆ ಖಂಡಿತ ಗೌರವ ಬರುವುದಿಲ್ಲ. ನಿಮ್ಮಂಥವರ ಕೈಯಲ್ಲಿ ಅಧಿಕಾರ ಸಿಕ್ಕಂಥ

ಸಂದರ್ಭದಲ್ಲೂ ಕೂಡ ಒಂದು ಸ್ವಲ್ಪ ಸ್ವಲ್ಪ ದಾರಿ ಆ ಕಡೆ ನೋಡಬೇಕು. ಸನ್ಮಾನ್ಯ ಜ್ಞಾನೇಂದ್ರ ಮಂಗಳೂರು ಬಗ್ಗೆ ಹೇಳಿದರು, 9 ಗೆದ್ದಂಥ ಬಿಜೆಪಿಯನ್ನು ಆ ಸಂದರ್ಭದಲ್ಲಿ ಈ ರೀತಿ ಮಾಡಿದರೆ ಸಹಕಾರ ಕ್ಷೇತ್ರವನ್ನು ಕೊಲೆ ಮಾಡಿದಂತಾಯಿತು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಅದಕ್ಕಾಗಿಯೇ ಕಾಯ್ದೆಯಲ್ಲಿ ಆ ಅವಕಾಶವನ್ನು ತೆಗೆದಿದ್ದೇನೆ. ಇದು ನಿಮಗೂ ರಾಜಕೀಯವಾಗಿ ಬರುತ್ತದೆ. ನೀವು ರಾಜಕೀಯ ಮಾಡುವವರು ಇದ್ದೀರಿ. ನಾನು ಇಲ್ಲ ಎಂದು ಹೇಳುವುದಿಲ್ಲ. ಆ ಮಾತಿಗೆ ನಾನು ಒಪ್ಪಿಕೊಳ್ಳುತ್ತೇನೆ. ಅದು ತಪ್ಪಾಗುತ್ತದೆ. ಆದರೆ ನಾವು ರಾಜಕೀಯವಾಗಿ ಮಾಡಬೇಕಾಗುತ್ತದೆ.

ಅಧ್ಯಕ್ಷರು: ಸನ್ಮಾನ್ಯ ಡಿ.ಆರ್.ಪಾಟೀಲರು ಮಾತನಾಡುವ ವೇಳೆಗೆ ಸಾದರರು ಎಂದು ರೆಫರೆನ್ಸ್ ಮಾಡಿದ್ದಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ತಪ್ಪೇನು ಇದೆ?

ಶ್ರೀ ಎಂ.ವೀರಪ್ಪಮೊಯಿಲಿ: ಇದರ ಬಗ್ಗೆ ಹೇಳುವುದಲ್ಲ. ನಾನು ಹೇಳುವುದು ಎಂದರೆ ಮಾನ್ಯ ಎಸ್.ಎಸ್.ಪಾಟೀಲರು ಹೊಸದಾಗಿ ಏನು ಮಾಡಿದ್ದಾರೆ ಎಂದು ಕೇಳುವುದು. ಅವರೇನು ಪ್ರತ್ಯೇಕವಾಗಿ ಏನಾದರೂ ಮಾಡಿದ್ದಾರೆಯೇ? ಅದಕ್ಕೆ ಹೇಳುವುದು, ಜಾತಿಯಿಂದಲೇ ನಡೆಯುವುದು. ಅದಕ್ಕೆ ಹೇಳುವುದು ವೇದಾಂತ, ಬಸವತತ್ವ ಅದನ್ನೆಲ್ಲಾ ಬಿಟ್ಟು ಬರೀ ಜಾತಿ ಬಗ್ಗೆ ಮಾತನಾಡಿದರೆ ಇದು ಸರಿಹೋಗುತ್ತದೆ. ಎರಡನ್ನೂ ಮಿಕ್ಸಪ್ ಮಾಡಿದರೆ ಅದೇನಾಗುತ್ತದೆ ವೇದಾಂತ, ಬಸವತತ್ವ ಎಲ್ಲಾ ತಿರುಗಿಬೀಳುತ್ತದೆ. ನಾನು ನಿಮ್ಮ ಪರವಾಗಿದ್ದೇನೆ. ಮಾನ್ಯ ಡಿ.ಆರ್.ಪಾಟೀಲರು ಮಾತನಾಡುವುದು ಅದು ಬಹಳ ತಪ್ಪು ಎಂದು ನನಗನ್ನಿಸುತ್ತಿದೆ. ಏಕೆಂದರೆ ಅವರು ಹೊಸದಾಗಿ ಮಾಡಿದ್ದಾರೆ, ಎಲ್ಲರೂ ಮಾಡಿರುವುದು ಅವರೂ ಮಾಡಿದ್ದಾರೆ. ಜಾತಿಯಿಂದಲೇ ಈಗ ಎಲ್ಲಾ ನಡೆಯುವುದು. ಚುನಾವಣೆ ನಡೆಯುವುದು ಜಾತಿಯಲ್ಲೇ, ಎಲ್ಲಾ ನಡೆಯುವುದು ಜಾತಿಯಲ್ಲೇ, ಆದ್ದರಿಂದ ಪಾಪ, Why you single out Mr. S.S.Patil? I join with him. ಅವರು ಏನು ತಪ್ಪು ಮಾಡಿದ್ದಾರೆ?

MR. SPEAKER: I am happy. Mr. Moily, you are in your elements. I congratulate you. I want this. It has been long overdue in this House.

ಶ್ರೀ ಎಸ್.ಸುರೇಶ್‌ಕುಮಾರ್: ಮಾನ್ಯ ವೀರಪ್ಪಮೊಯಿಲಿಯವರು ಒಂದು ಮಾತನ್ನು ಹೇಳಿದರು. ಇದು ನನಗನಿಸಿದ್ದು, ಇದು ಇಂಡಿಯಾ. In india, the

slogan is 'Not cast your vote. It is vote your caste.

SRI M. VEERAPPA MOILY: I don't blame even BJP now. ಸುಮ್ಮನೆ ಬಿ.ಜೆ.ಪಿ ಕಮ್ಯೂನಲ್ ಎಂದು ಹೇಳುತ್ತೇವೆ. ಈಗ ಕಮ್ಯೂನಲ್ ಎಲ್ಲಾ ಹೊರಟು ಹೋಗಿದೆ. ಬರೀ ಜಾತಿ. ಆದ್ದರಿಂದ ಇವತ್ತು ಅವರದೇನೂ ತಪ್ಪಿಲ್ಲ. ಕಾಂಗ್ರೆಸ್‌ನವರು ಜಾತಿಯನ್ನೇ ಮಾಡುವುದು. ಜನತಾದಳದವರು ಜಾತಿಯನ್ನೇ ಮಾಡುವುದು. ಸುಮ್ಮನೆ ಕಮ್ಯೂನಲ್ ಪಾರ್ಟಿ ಎಂದು ಹೇಳಿ ನಿಮ್ಮನ್ನು ಪಾಪ ನಾವು ಹೇಳುತ್ತಿರುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ವೀರಪ್ಪಮೊಯಿಲಿಯವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಅನೇಕ ವರ್ಷಗಳ ನಂತರವಾದರೂ ಕೂಡ ಈ ದೇಶದಲ್ಲಿರುವ ಸತ್ಯ ಹೊರಗೆ ಬಂತಲ್ಲ ಎಂದು ವೀರಪ್ಪಮೊಯಿಲಿಯವರಿಗೆ ಅಭಿನಂದನೆ ಸಲ್ಲಿಸುತ್ತೇವೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಇತ್ತೀಚಿನ ದಿನಗಳಲ್ಲಿ ಮೊಯಿಲಿಯವರ ವಾದ ಬದಲಾವಣೆಯಾಗುತ್ತಿರುವ ಉದ್ದೇಶವೇನು?

ಅಧ್ಯಕ್ಷರು: ಅವರ ವಾದದಲ್ಲಿ ಬದಲಾವಣೆ ಇಲ್ಲ. ಯಾವ ಮನುಷ್ಯ ರಾಜಕಾರಣದಲ್ಲಿ ಬಂದು ಜಾತಿಯ ಬಲವೇ ಇಲ್ಲದೆ ಅನೇಕ ಕಷ್ಟನಷ್ಟಗಳನ್ನು ಅನುಭವಿಸಿರುತ್ತಾನೆ, ಅಪಮಾನಗಳನ್ನು ನುಂಗಿರುತ್ತಾನೆ, ಅವರು ಅದನ್ನೆಲ್ಲಾ ಕೂಡ ಬಹಳ ಸರಳವಾದ ರೀತಿಯಲ್ಲಿ ಆ ನೋವನ್ನೆಲ್ಲಾ ನುಂಗಿ ಹೇಳುವ ವಿಧಾನ ಅಷ್ಟೆ. ಅವರು ಹೇಳಿದ ಮಾತಿನ ಹಿಂದೆ ಎಷ್ಟು ನೋವು ಇದೆ ಎಂದು ಯಾರಿಗೆ ಸೈದ್ಧಾಂತಿಕವಾಗಿ ಅದರಲ್ಲಿ ನಂಬಿಕೆ ಇರುತ್ತದೆ, ಅವರಿಗಷ್ಟಾದರೂ ಪರಿಚಯವಾಯಿತು. Lot of pains.

ಶ್ರೀ ವಾಟಾಳ್ ನಾಗರಾಜ್: ನಾನು ಇಲ್ಲಿ ಯಾವ ಪಾಯಿಂಟ್‌ಗೆ ಹೋಗುತ್ತೇನೆ ಎಂದರೆ ಬಿ.ಜೆ.ಪಿ.ಯನ್ನು ಆ ಮಟ್ಟಕ್ಕೆ....

ಅಧ್ಯಕ್ಷರು: ಇಲ್ಲ.

ಶ್ರೀ ವಾಟಾಳ್ ನಾಗರಾಜ್: ಸಮಗ್ರವಾಗಿ ನನಗೂ ಗೊತ್ತಿದೆ. ಅದೇ ಬೇರೆ, ಇದೇ ಬೇರೆ. ಈ ಜಾತಿ ಯಾವ ರೀತಿ ನಡೆಯುತ್ತಿದೆ ಎಂದು ನನಗೂ ಗೊತ್ತಿದೆ. ಮೊಯಿಲಿಯವರು ಬಿಜೆಪಿಯನ್ನು ನಾವು ಏಕೆ ಬಯ್ಯಬೇಕು ಎಂದು ಹೇಳಿದರು, ಅಷ್ಟಕ್ಕೆ ನಾನು ಹೇಳಿದ್ದು.

ಅಧ್ಯಕ್ಷರು: ಇಲ್ಲ, ಮೊಯಿಲಿಯವರ ಹತ್ತಿರ ಹೋಗುವುದಕ್ಕೆ ಸಾಧ್ಯವಿಲ್ಲ.

ರೆಡ್ಡಿಯವರ ಹತ್ತಿರ ಬರುವುದಕ್ಕೆ ಸಾಧ್ಯವಿಲ್ಲ. ನೀವು ಮಧ್ಯದಲ್ಲಿ ಹುಷಾರಾಗಿರಿ.

ಶ್ರೀ ವಾಟಾಳ್ ನಾಗರಾಜ್: ನನಗೇನೂ ಇಲ್ಲ. ಯಾವ ಸೋಂಕೂ ನನಗೆ ತಗಲುವುದಿಲ್ಲ. ಇಂಥ ಜಾತಿಯ ಸಾಂಕ್ರಾಮಿಕ ರೋಗಗಳು ನಮ್ಮ ಸುತ್ತ ಇಲ್ಲವೇ ಇಲ್ಲ. ಅದರಲ್ಲೇನೂ ಅನುಮಾನ ಪಡುವುದಕ್ಕೆ ಹೋಗಬೇಡಿ ತಾವು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೇ, ಈಗ By considerations being a secularist or non-casteist is different. By conviction ಸೆಕ್ಯುಲರಿಸ್ಟ್ ಆಗುವುದು, ನಾನ್ ಕ್ಯಾಸ್ಟಿಸ್ಟ್ ಆಗುವುದು ಡಿಫರೆನ್ಸ್. ಆ ಡಿಫರೆನ್ಸ್‌ನ ವ್ಯತ್ಯಾಸವೇ ಇಲ್ಲಿ ಬರುತ್ತಿರುವುದು. ಬೇರೇನೂ ಇಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಅಧ್ಯಕ್ಷರೇ, ನಾನು ಪಾಟೀಲರಿಗೆ ಹೇಳಿದ್ದು ಮಾರ್ಕೆಟಿಂಗ್ ಫೆಡರೇಷನ್ ಬಗ್ಗೆ, ಯಾರು ಹತ್ತಿ ವ್ಯವಹಾರವನ್ನು ಮಾಡುತ್ತಾರೆ, ಅದೇ ಸೊಸೈಟಿಯಲ್ಲಿ ಮೆಂಬರ್ ಮಾಡಿ ನನಗೆ ಹೇಳಿ ರೊಕ್ಕ ತುಂಬಿ ಕಳುಹಿಸಿದರೆ ನಮ್ಮ ಅಧಿಕೃತ ಶೇರು ಬಂಡವಾಳ ಮುಗಿದಿದೆ ಎಂದು ಹೇಳಿ ಉತ್ತರ ಕಳುಹಿಸುತ್ತಾರೆ. ಶೇರು ಬಂಡವಾಳವನ್ನು ತೆಗೆದುಕೊಳ್ಳಬೇಕು, ಮೆಂಬರ್ ಮಾಡಿಕೊಳ್ಳಬೇಕು. ಅದಕ್ಕೆ ಪರ್ಮಿಷನ್ ಕೊಡುತ್ತೇವೆ.

ಶ್ರೀ ಡಿ.ಆರ್.ಪಾಟೀಲ್: ಶೇರು ಬಂಡವಾಳ ಹೆಚ್ಚಾಗಬೇಕಾದರೆ ಬೈಲಾ ಅಮೆಂಡ್‌ಮೆಂಟ್ ಆಗಬೇಕು. ಬೈಲಾ ಅಮೆಂಡ್‌ಮೆಂಟ್ ಆಗಬೇಕಾದರೆ ಜನರಲ್ ಬಾಡಿಗೆ ಹೋಗಬೇಕು.

(ಗೊಂದಲ)

ಅಧ್ಯಕ್ಷರು: ಈಗ ಸ್ವಲ್ಪ ಹೊತ್ತು ಅವರು ಉತ್ತರ ಮುಗಿಸಲಿ. ದಯಮಾಡಿ ಸಹಕರಿಸಿ.

ಶ್ರೀ ಎಸ್.ಎಸ್.ಪಾಟೀಲ್: ನಾನೇನು ಹೇಳುವುದು ಕನಿಷ್ಠ ಬೈಲಾದಲ್ಲಿದ್ದವರೇ ಮೆಂಬರ್ ಆಗಬೇಕು. ನಾನು ಹೇಳುವುದು, ಅದು ವ್ಯವಹಾರಿಕವಾಗಿ ನಾವು ಮಾಡುತ್ತೇವೆ. ಕಡೆಗೆ ಅದಕ್ಕೂ ಕಾಯ್ದೆ ಆರ್ಡರ್ ಹೊರಡಿಸುವ ಪ್ರಸಂಗ ಬಂತು. ಎಲ್ಲವನ್ನೂ ಕಾಯ್ದೆಯಿಂದಲೇ ಮಾಡುವುದಾ? ಅಧಿಕೃತ ಶೇರು ಬಂಡವಾಳದ ಮ್ಯಾಕ್ಸಿಮಮ್ ಲಿಮಿಟನ್ನು ತೆಗೆದುಬಿಡಿ ಎಂದು ಆರ್ಡರನ್ನು ಹೊರಡಿಸಿದೆ. ಆ ಸ್ಥಿತಿಗೆ ಬಂದು ಮುಟ್ಟುತ್ತದೆ. ಯಾರು ಹಿಡಿತದಲ್ಲಿಟ್ಟುಕೊಳ್ಳುತ್ತಾರೆ, ಅವರು ಇನ್ನೊಬ್ಬರನ್ನು ಮೆಂಬರನ್ನು ಮಾಡಿಕೊಳ್ಳುವುದಿಲ್ಲ ಎಂದು ಹೇಳಿದರೆ ಎಲ್ಲವನ್ನೂ ಕಾಯ್ದೆಯಿಂದ ತಿದ್ದುವುದಕ್ಕಾಗುತ್ತದೆಯೇ? ಹೇಳಿ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಕೆಟ್ಟ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇದ್ದಂಥ ಸಂಘಗಳಲ್ಲಿಯೇ ಮೆಂಬರನ್ನು

ಮಾಡಿಕೊಳ್ಳಬೇಕು.

ಶ್ರೀ ಡಿ.ಆರ್.ಪಾಟೀಲ್: ನೀವು ಅದನ್ನು ಮಾಡಿ ತೋರಿಸಿ. ಆ ಸಂಸ್ಥೆಯಲ್ಲಿ ದಳದವರೂ ಇದ್ದಾರೆ, ಬಿಜೆಪಿಯವರೂ ಇದ್ದಾರೆ, ಕಾಂಗ್ರೆಸ್‌ನವರು ಇದ್ದಾರೆ, ತಮಗೆ ಬೇಕಾದವರು ಅಷ್ಟೇ ಇದ್ದಾರೆ. ನಿಮ್ಮ ಸಿದ್ಧನಗೌಡರೂ ಇದ್ದಾರೆ. ಬಣಕಾರ್‌ರವರೂ ಇದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ನಾನು ಅವರಿಗೆ ರಿಕ್ವೆಸ್ಟ್ ಮಾಡುತ್ತೇನೆ. ದಯವಿಟ್ಟು ಅವರು ನೇರವಾಗಿ ತಮ್ಮ ಇಲಾಖೆಗೆ ಸಂಬಂಧಪಟ್ಟದ್ದನ್ನು ತೆಗೆದುಕೊಳ್ಳಿ. ಆ ಧಾರವಾಡ ಜಿಲ್ಲೆಯ ಕೋ-ಆಪರೇಷನ್ ಪಾಲಿಟಿಕ್ಸ್ ಇಲ್ಲಿಲ್ಲಾ ಹೇಳಿಕೊಂಡು ಹೋದರೆ ಹೇಗೆ? ಇಡೀ ರಾಜ್ಯದ್ದು ಹೇಳಿ. ನಿಮ್ಮ ನೀತಿಯೇನು? ಹೊಸದಾಗಿ ಏನು ಕಾರ್ಯಕ್ರಮ ಹಾಕಿದ್ದೀರಿ? ಏನು ಯೋಜನೆಗಳನ್ನು ಹಾಕಿದ್ದೀರಿ? ಒಂದೆರಡು ಯಾವುದು ಅವರದ್ದು ಇದೆ, ಅದನ್ನು ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಇವತ್ತು ಮಾನ್ಯ ಡಿ.ಆರ್.ಪಾಟೀಲರು ಲ್ಯಾಂಪ್ ಸೊಸೈಟಿಯ ಬಗ್ಗೆ ಮಾತನಾಡಿದರು, ನಿಜವಾಗಿಯೂ ಅದು ಖರ್ಚಾಗಿಲ್ಲ ಎನ್ನುವ ಮಾತನ್ನು ಬಹಳ ಕಳಕಳಿಯಿಂದ ಹೇಳಿದರು. ನಾನು ಒಪ್ಪುತ್ತೇನೆ. ಈಗಾಗಲೇ 35 ಲಕ್ಷ ರೂಪಾಯಿ ಖರ್ಚಾಗಿದೆ. ಕೇಂದ್ರ ಪರಿಷ್ಕೃತ ಯೋಜನೆ ಅದು ಮಂಜೂರಾಗಿ ಬರಲಿಲ್ಲ. ಅದು ಮಂಜೂರಾಗಿ ಬಂದ ಕೂಡಲೇ ತಕ್ಷಣ ನಾವು ಆ ಲ್ಯಾಂಪ್ ಸೊಸೈಟಿ ಬಗ್ಗೆ ಆಸ್ಥೆ ವಹಿಸಿದ್ದೇವೆ. ಬಹಳ ಚೆನ್ನಾಗಿ ನಡೆಯುತ್ತಿದೆ. ಅವುಗಳನ್ನೂ ಸಹ ಇಂಪ್ರೂವ್ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ನಮ್ಮ ಯೋಜನೆಯ ಬಗ್ಗೆ ನಾನು ಹೇಳಿದ್ದೇನೆ. ಇಲ್ಲಿ ಎನ್‌ಸಿಡಿಸಿ ಯೋಜನೆ ಇದೆ. ಸನ್ಮಾನ್ಯ ಪಾಟೀಲರು ಉತ್ತಮವಾದ ಸಲಹೆಯನ್ನು ಮಾಡಿದರು. ವರ್ಷಕ್ಕೆ ಒಂದು ಕಳುಹಿಸುತ್ತೀರಿ, ವರ್ಷದ ಆಖೈರಿಗೆ ಕಳುಹಿಸುತ್ತೀರಿ. ಹೀಗಾಗಿ ಅವುಗಳು ಮಂಜೂರಾಗಿ ಬರುವುದಿಲ್ಲ ಎನ್ನುವ ಮಾತನ್ನು ಹೇಳಿದರು. ನಿಜವಾಗಿಯೂ ಅದನ್ನು ತೀವ್ರವಾಗಿ ಕಳುಹಿಸುತ್ತೇವೆ. ಇನ್ನೊಂದು ಎನ್‌ಸಿಡಿಸಿ ದುಡ್ಡನ್ನು ನಿಲ್ಲಿಸಿಬಿಟ್ಟಿದ್ದರು. ನಮ್ಮ ಸರ್ಕಾರ ಬಂದ ಮೇಲೆ ನಮ್ಮ ಉಪಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ನಮಗೆ ಕೊಡುವುದನ್ನೇ ಬಂದ್ ಮಾಡಿದ್ದರು. ಏಕೆಂದರೆ ಎಲ್ಲಾ ಟೆಕ್ಸ್‌ಟೈಲ್ ಮಿಲ್‌ಗಳು, ಕೆಲವು ಆಯಿಲ್ ಮಿಲ್ಸ್‌ಗಳು ಕೂಡ ಎನ್‌ಸಿಡಿಸಿ ಲೋನನ್ನು ತುಂಬಿರಲಿಲ್ಲ. ಡಿಫಾಲ್ಟರ್ ಆಗಿಬಿಟ್ಟಿದ್ದರು. ಈ ಕಾರಣದಿಂದ ಇವತ್ತು ನಮ್ಮಗಳಿಗೆ ಎನ್‌ಸಿಡಿಸಿಯವರು ಸಾಲ ಕೊಡುತ್ತಿರಲಿಲ್ಲ. ಸುಮಾರು 16 ಕೋಟಿ ರೂಪಾಯಿ ಮೊನ್ನೆ ತುಂಬಿದ್ದೇವೆ. ಸರ್ಕಾರದ ಪರವಾಗಿ ನಾವು ಇವತ್ತು ತುಂಬಿ ಅದನ್ನೂ ಕೂಡ ಎನ್‌ಸಿಡಿಸಿ ಕೂಡ ರೀಫೈನಾನ್ಸ್ ಕೊಡುವ ವ್ಯವಸ್ಥೆ ಮಾಡಿಕೊಂಡಿದ್ದೇವೆ. ನಾವು ಇವತ್ತು ರಾಜ್ಯದಲ್ಲಿ ಒಂದು ಹಾರ್ಟಿಕಲ್ಚರ್ ಫೆಡರೇಷನ್

ಮಾಡುವುದಕ್ಕೆ ಹೊರಟಿದ್ದೇವೆ. ಹಾರ್ಟಿಕಲ್ಚರಲ್ ಪ್ರೊಡ್ಯೂಸ್ ಅನ್ನು ಖರೀದಿಸಿ ಅದನ್ನು ಎಕ್ಸ್‌ಪೋರ್ಟ್ ಮಾಡಬೇಕೆನ್ನುವ ದೃಷ್ಟಿಯಿಂದ ಅದೂ ಕೂಡ ಈಗಾಗಲೇ ತಯಾರಾಗಿದೆ. ಈ ದಿಸೆಯಲ್ಲಿ ನಮಗೆ ದುಡ್ಡು ಬೇಕಾಗಿರುವುದರಿಂದ ಅದು ಎನ್.ಸಿ.ಡಿ.ಸಿ.ಯಲ್ಲಿತ್ತು. ಇವೊತ್ತು ಅದನ್ನು ತೆಗೆದುಕೊಂಡು ಫೆಡರೇಷನ್ ಮಾಡಿ ಆ ಮೂಲಕ ರೈತರುಗಳಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಅಲ್ಲದೆ, ಎನ್.ಸಿ.ಡಿ.ಸಿ. ಮಾದರಿಯಲ್ಲಿಯೇ ನಾವು ಕೆ.ಸಿ.ಡಿ.ಸಿಯನ್ನು ಮಾಡಬೇಕೆಂದು ತೀರ್ಮಾನಿಸಿದ್ದೇವೆ. ಈ ಕುರಿತಂತೆ ಸಂಬಂಧಿಸಿದ ಎಲ್ಲರನ್ನೂ ನಾನು ಕರೆಯುತ್ತೇನೆ. ಇದಕ್ಕೆ ಅಗತ್ಯವಾದ ಸಂಪನ್ಮೂಲಗಳನ್ನು ಬೇರೆ ರಾಜ್ಯಗಳಿಂದ ಪಡೆಯದೆ ನಮ್ಮ ರಾಜ್ಯದಲ್ಲಿಯೇ ಲಭ್ಯವಾಗುವ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಂಡು ಕೆ.ಸಿ.ಡಿ.ಸಿ (ಕರ್ನಾಟಕ ಕೋಆಪರೇಟಿವ್ ಡೆವಲಪ್‌ಮೆಂಟ್ ಕಾರ್ಪೊರೇಷನ್) ಯನ್ನು ಸ್ಥಾಪಿಸಲಾಗುತ್ತದೆ. ಇದರ ಬಗ್ಗೆ ಮಾನ್ಯ ಉಪಮುಖ್ಯಮಂತ್ರಿಗಳು ಏನಿದು ಎಂದು ಕೇಳಿದ್ದಾರೆ, ಈಗ ನಾನು ಅಂಜಿಕೊಂಡು ಹೇಳಬೇಕಾಗುತ್ತದೆ. ಕೆ.ಸಿ.ಡಿ.ಸಿ ಸ್ಥಾಪನೆಯಾದರೆ ಸುಮಾರು ಶೇಕಡಾ 27ರಷ್ಟು ಬಡ್ಡಿ ಕೊಡುತ್ತೇವೆ. ಇವೊತ್ತು ನಾವು ಕೊಡುವುದು ಶೇಕಡಾ ಹದಿನೇಳೂವರೆಯಷ್ಟಾದರೂ ಎನ್.ಸಿ.ಡಿ.ಸಿ ವ್ಯವಹಾರದಲ್ಲಿ ಅವರು ಷೇರು ಕೊಡುವುದು ಮುಂತಾದವನ್ನೆಲ್ಲಾ ಲೆಕ್ಕ ಹಾಕಿದರೆ ಶೇಕಡಾ 27ರಷ್ಟು ಬಡ್ಡಿ ಆಗುತ್ತದೆ. ಆ ಕಾರಣದಿಂದ ಆ ಹಣವನ್ನು ನಾವು ಕ್ರೋಢೀಕರಿಸಿಕೊಂಡು ನಮ್ಮ ರಾಜ್ಯದಲ್ಲಿರುವ ಟೆಕ್ಸ್‌ಟೈಲ್ ಮಿಲ್ಸ್, ಶುಗರ್ ಫ್ಯಾಕ್ಟರಿಗಳು, ಮತ್ತು ಕೆಲವು ಬ್ಯಾಂಕುಗಳನ್ನು ಸುಧಾರಿಸಬೇಕೆನ್ನುವ ದೃಷ್ಟಿಯಿಂದ ರಾಜ್ಯದಲ್ಲಿ ಹೊಸದಾಗಿ ಕೆ.ಸಿ.ಡಿ.ಸಿಯನ್ನು ಸ್ಥಾಪಿಸಿ ಅದರ ಮುಖಾಂತರ ನಿಧಿಯನ್ನು ಸೃಷ್ಟಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಅರ್ಬನ್ ಬ್ಯಾಂಕ್ ಬಗ್ಗೆ ಹೇಳುವುದಾದರೆ, ಇವೊತ್ತು ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಅರ್ಬನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ರಾಷ್ಟ್ರಮಟ್ಟದಲ್ಲಿ ನಾವು ಮೂರನೇ ಸ್ಥಾನದಲ್ಲಿದ್ದೇವೆ. ಮತ್ತು ಮಹಿಳಾ ಅರ್ಬನ್ ಬ್ಯಾಂಕಿಂಗ್ ಕ್ಷೇತ್ರದಲ್ಲೂ ನಾವು ಎರಡನೇ ಸ್ಥಾನದಲ್ಲಿದ್ದೇವೆ. ಅರ್ಬನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಮುಂಬಯಿಗೆ ಸೈಡ್ ಹೊಡೆದು ಇನ್ನೂ ಮೇಲೆ ಹೋಗುವಂಥ ಪರಿಸ್ಥಿತಿಯಲ್ಲಿದ್ದೇವೆ. ನಾನು ಈ ಖಾತೆಯನ್ನು ವಹಿಸಿಕೊಳ್ಳುವ ಪೂರ್ವದಲ್ಲಿ 1,000 ಕೋಟಿ ರೂಪಾಯಿಗಳಷ್ಟು ಠೇವಣಿ ಇದ್ದರೆ ಇವೊತ್ತು ನಮ್ಮ ಅರ್ಬನ್ ಬ್ಯಾಂಕ್‌ನಲ್ಲಿ ಠೇವಣಿ 2,450 ಕೋಟಿ ರೂಪಾಯಿಗಳಾಗಿದೆ. ಆ ದಿವಸ ಮಾನ್ಯ ಮುಖ್ಯಮಂತ್ರಿಗಳು ಯಾವುದೋ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿಮಿತ್ತ ಬೀದರ್‌ಗೆ ಬಂದಿದ್ದಾಗ, ಅವರಿಗೆ ಇವೊತ್ತು ಸರ್ಕಾರಕ್ಕೆ ಬೇಕಾದರೆ 1,000 ಕೋಟಿ ರೂಪಾಯಿಗಳಷ್ಟು ಸಾಲ ಕೊಡುತ್ತೇವೆಂದು ಹೇಳಿದ್ದೆ. ಅಷ್ಟು ಶಕ್ತಿ ನಮ್ಮಲ್ಲಿದೆ, ಕ್ರೋಢೀಕರಿಸಿದ್ದೇವೆ, ಇಲ್ಲವೆಂದು ಹೇಳುವುದಿಲ್ಲ. ಆ ದೃಷ್ಟಿಯಿಂದ ಇವೊತ್ತು ನಾವು ಕೆ.ಸಿ.ಡಿ.ಸಿ.ಯನ್ನು ರಚನೆ ಮಾಡಿಕೊಂಡು ನಮ್ಮ ಹಣಕಾಸು ಇಲಾಖೆಯಿಂದ ಎಷ್ಟು ಸಾಧ್ಯವಿದೆಯೋ ಅಷ್ಟು ಪ್ರಮಾಣದಲ್ಲಿ ಸಾಲ ತೆಗೆದುಕೊಂಡು, ಕೆಟ್ಟಿರುವ ಅರ್ಬನ್ ಬ್ಯಾಂಕ್ ಇರಬಹುದು,

ಇನ್ನಿತರ ಯಾವ್ಯಾವುದು ಕೆಟ್ಟಿವೆಯೋ ಅವುಗಳನ್ನೆಲ್ಲಾ ಸುಧಾರಿಸುವಂಥ ವ್ಯವಸ್ಥೆಯನ್ನು ಕೆ.ಸಿ.ಡಿ.ಸಿ ಮುಖಾಂತರ ಮಾಡುತ್ತೇವೆ. ಇನ್ನೊಂದು ಮುಖ್ಯವಾದ ವಿಚಾರವೇನೆಂದರೆ, ಅರ್ಬನ್ ಬ್ಯಾಂಕಿಂಗ್ ಕ್ಷೇತ್ರದಲ್ಲಿ ನಾವು ಮಹತ್ತರ ಸಾಧನೆ ಮಾಡಿದ್ದೇವೆ. ಇವುಗಳ ಸಂಖ್ಯೆ 200 ಇದ್ದುದು ಇವೊತ್ತು 258ಕ್ಕೆ ತಲುಪಿದೆ. ಅದೇ ರೀತಿ ಪ್ರಾರಂಭದಲ್ಲಿ ಎರಡು ಮಹಿಳಾ ಅರ್ಬನ್ ಬ್ಯಾಂಕ್‌ಗಳಿದ್ದು ಈಗ ಸುಮಾರು 18 ಬ್ಯಾಂಕ್‌ಗಳು ಕಾರ್ಯನಿರ್ವಹಿಸುತ್ತಿವೆ. ಈ ಕುರಿತು ಇರುವ ಎಲ್ಲಾ ಪ್ರಪೋಸಲ್‌ಗಳು ಮಂಜೂರಾಗಿ ಬಂದರೆ ನಮಗೆ ಬಹಳಷ್ಟು ಅನುಕೂಲವಾಗುತ್ತದೆ. ಗದಗ್‌ನ ಅರ್ಬನ್ ಬ್ಯಾಂಕ್ ಬಗ್ಗೆ ತಾವು ಕೇಳಿದಿರಿ, ನಾನು ಅದರ ಬಗ್ಗೆ ಮಾತನಾಡಿ ನಿಲ್ಲಿಸಿದ್ದೆ. ಏಕೆಂದರೆ, ಅಲ್ಲೊಂದು ನಮಗೆ ಜಾಗ ಬೇಕಾಗಿತ್ತು, ತೆಗೆದುಕೊಂಡೆವು. ಪಾಟೀಲರೇ, ತಾವು ದಯವಿಟ್ಟು ಆ ಜಾಗವನ್ನು ಬಿಡಿಸಿಕೊಳ್ಳಬೇಕು. ಗದಗನ್ನು ಈಗ ಜಿಲ್ಲೆಯನ್ನಾಗಿ ಮಾರ್ಪಡಿಸಿರುವುದರಿಂದ, ನಮಗೆ ಜಾಗವಿಲ್ಲದೆ ಸುಮ್ಮನೆ ಎಲ್ಲಿಯೋ ಇಟ್ಟಿದ್ದಾರೆ. ಮುಂದೆ ಅದು ನಮ್ಮ ಜಿಲ್ಲಾ ಆಡಳಿತ ವ್ಯವಸ್ಥೆಗೆ ಅಗತ್ಯವಾಗಿ ಬೇಕಾಗುತ್ತದಾದ್ದರಿಂದ ಅದನ್ನು ಪಡೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಮಹಿಳಾ ಬ್ಯಾಂಕ್‌ಗಳಿಗೆ ಸಬ್ಸಿಡಿ ನಿಲ್ಲಿಸಲಾಗಿದೆಯೆಂದು ಹೇಳಿದ್ದೀರಿ, ನಾವು ಮಹಿಳಾ ಸೊಸೈಟಿಗಳಿಗೆ ಸಬ್ಸಿಡಿ ಕೊಡುವುದನ್ನು ನಿಲ್ಲಿಸಿಲ್ಲ. ಅವು ಶಾಶ್ವತವಾಗಿ ನಡೆಯಬೇಕು ಮತ್ತು ಸರ್ಕಾರ ಸ್ವಲ್ಪ ಹಣ ಕೊಟ್ಟರೂ ಹಿಡಿತವಿಟ್ಟುಕೊಂಡರೆ ಅದರ ಅಧೀನದಲ್ಲಿ ಹೋಗುವುದು ಪ್ರಾರಂಭವಾಗುತ್ತದೆ. ಅದಕ್ಕೋಸ್ಕರ ಮಹಿಳಾ ಅರ್ಬನ್ ಬ್ಯಾಂಕಿಗೆ ಬೇಡ, ಅವು ಶಾಶ್ವತವಾಗಿ ಕಾರ್ಯನಿರ್ವಹಿಸಲಿ. ನಾವು ಸ್ವಲ್ಪ ಕೊಟ್ಟರೂ ಅವರು ಅಲ್ಲಿಗೆ ಹೋಗಲು ಬರುವುದಿಲ್ಲ, ಕಾಯ್ದೆಯಡಿ ಬರಬೇಕಾಗುತ್ತದೆ. ಆ ದೃಷ್ಟಿಯಿಂದ ಮಹಿಳಾ ಸೊಸೈಟಿಗಳಿಗೆ ಆ್ಯಸ್ ಇಟ್ ಈಸ್ ಕೊಡುವಂಥ ವ್ಯವಸ್ಥೆಯನ್ನು ಮುಂದುವರೆಸಿದ್ದೇವೆ. ಹಿಂದೆ ಎರಡು ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದರು. ಸರ್ಕಾರದ ಸೊಸೈಟಿಗಳಿದ್ದರೂ ಅವರು ಬರುವುದಿಲ್ಲ. ಆ ಕಾರಣಕ್ಕಾಗಿ ಅದನ್ನು ತೆಗೆದಿದ್ದೇವೆಯೇ ಹೊರತು ಬೇರಾವುದೇ ಉದ್ದೇಶದಿಂದಲ್ಲ. ಮಹಿಳಾ ಸೊಸೈಟಿಗಳಿಗೆ ಆ ಸೌಲಭ್ಯ ಕೊಡುವಂಥ ವ್ಯವಸ್ಥೆಯನ್ನು ಮುಂದುವರೆಸಿದ್ದೇವೆ. ಪುನಶ್ಚೇತನ ಕಾರ್ಯಕ್ರಮದ ಬಗ್ಗೆ ಈಗಾಗಲೇ ಹೇಳಿದಂತೆ ಒಂದು ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಿ ಆ ಮುಖಾಂತರ ರಾಜ್ಯದಲ್ಲಿರುವ ಕೆಟ್ಟಿರುವ ಸಂಘಗಳನ್ನು ಸುಧಾರಿಸಿ ಪುನಶ್ಚೇತನಗೊಳಿಸುವುದಕ್ಕೆ ನಾವು ಒಂದು ವ್ಯವಸ್ಥೆ ಮಾಡುತ್ತೇವೆ. ನಿಯಮ 17ರಡಿ ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಆಡಳಿತ ಮಂಡಳಿಗೆ ಕನಿಷ್ಠ ಮಿತಿ ಹಾಕಿ, ಗರಿಷ್ಠ ಹಾಕಬೇಡಿ ಎಂದು ಹೇಳಿದ್ದೀರಿ. ಅಂದರೆ, ಅನ್‌ವೀಲ್ಡ್ ಆಗುತ್ತದೆ, ನಾಳೆ ರಾಜ್ಯದಲ್ಲಿ ಒಂದೇ ಮಾದರಿಯಾಗಿರಲಿ ಎನ್ನುವ ದೃಷ್ಟಿಯಿಂದ ತಿಳಿಸಿದ್ದೀರಿ. ನಾವು ಕಾಯ್ದೆಯಲ್ಲಿ ತಂದಿದ್ದೇವೆ. ನನ್ನ ಉದ್ದೇಶವೇನೆಂದರೆ, ರಾಜ್ಯದಲ್ಲಿ ಒಂದೇ ಮಾದರಿಯಾದ ವ್ಯವಸ್ಥೆ ಇರಬೇಕು. ಒಬ್ಬರು 6, 9, 12, 15 ಈ ರೀತಿ ಮಾಡಿಕೊಳ್ಳುವಂತಾಗಬಾರದು. ಆದುದರಿಂದ, ಯಾವ್ಯಾವ ಆಡಳಿತ ಮಂಡಳಿಗೆ ಎಷ್ಟೆಷ್ಟಿರಬೇಕೆನ್ನುವ ದೃಷ್ಟಿಯಿಂದ

ಮಾಡಿದ್ದೇವೆಯೇ ಹೊರತು ಅದರಲ್ಲಿ ಬೇರಾವುದೇ ಉದ್ದೇಶವಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸೆಕ್ಷನ್ 121ರ ಬಗ್ಗೆ ಹೇಳಿದ್ದು ಅದನ್ನು ತೆಗೆದಿದ್ದೇವೆ. ಮುಂದೆ ಈ ಬಗ್ಗೆ ಬರುವ ಪ್ರಶ್ನೆ, ಟೀಕೆಗಳಿಗೆ ನಾನು ಗುರಿಯಾಗುವುದಿಲ್ಲವೆಂದು ತಿಳಿದಿದ್ದೇನೆ. ಇನ್ನು ಪ್ರವಾಸ ಭತ್ಯೆಯ ಬಗ್ಗೆ ಹೇಳಬಯಸುತ್ತೇನೆ. ಕಾರಿಗೆ ಸಂಬಂಧಿಸಿದಂತೆ ಪ್ರವಾಸ ಭತ್ಯೆಯನ್ನು ತೆಗೆದಿದ್ದೀರೆಂದು ಹೇಳಿದರು. ಸ್ವಂತ ಕಾರಿದ್ದವರಿಗಷ್ಟೇ ಈ ಸೌಲಭ್ಯ, ಇನ್ನೊಬ್ಬರು ಟ್ಯಾಕ್ಸಿ ತಂದಿದ್ದೇವೆಂದರೆ ಅವರಿಗೆ ಆ ಸೌಲಭ್ಯ ಕೊಡುವುದಿಲ್ಲ. ಅಂದರೆ, ಒಬ್ಬ ಸಾಮಾನ್ಯ ವ್ಯಕ್ತಿ ಕಡಿಮೆ ತೆಗೆದುಕೊಳ್ಳಬೇಕು, ಇವರು ಹೆಚ್ಚು ತೆಗೆದುಕೊಳ್ಳಬೇಕೆಂದರೆ ಹೇಗೆ? ಅದಕ್ಕೋಸ್ಕರ ಎರಡನ್ನೂ ಒಂದೇ ಮಾಡಿ ಹೆಚ್ಚು ಮಾಡಿದ್ದೇವೆ. ಇದರ ಜೊತೆಗೆ ಸಿಟ್ಟಿಂಗ್ ಫೀ 250 ರೂಪಾಯಿಗಳಿದ್ದುದು 300 ರೂಪಾಯಿಗಳೆಂದು ಮಾಡಿ, ಡಿ.ಎ. ಸಹ ಹೆಚ್ಚು ಮಾಡಿದ್ದೇವೆ, ಬೇಕಾದರೆ ಅದನ್ನು ಅನಂತರ ದ್ವಿಗುಣ ಮಾಡಿಕೊಡೋಣ. ಇದರಲ್ಲಿ 3-4 ಸಂಸ್ಥೆಗಳು ಲಾಭದಲ್ಲಿದ್ದರೆ, ರಾಜ್ಯಮಟ್ಟದ ಸಂಸ್ಥೆಗಳು ಲುಕ್ಸಾನಿನಲ್ಲಿವೆ. ಅವರಿಗೆ ಕೊಡಬೇಡಿರೆಂದು ಹೇಳಲು ನಮಗೆ ಸಾಧ್ಯವಿಲ್ಲ. ಈ ದೃಷ್ಟಿಯಿಂದ ಹೆಚ್ಚು ಮಾಡುವುದು ಯೋಗ್ಯವಿರುವುದರಿಂದ ಅದನ್ನೂ ಕೂಡ ಹೆಚ್ಚು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನ. ಇನ್ನು ಗ್ರಾಹಕರ ಸಹಕಾರ ಸಂಘಗಳು ಉತ್ತಮ ರೀತಿಯಲ್ಲಿ ಕಾರ್ಯ ನಿರ್ವಹಿಸುವ ಮಟ್ಟಕ್ಕೆ ತರದಿದ್ದರೂ ನಾವು ಕಂಟ್ರೋಲ್ ಮಾಡಿದ್ದೇವೆ. ನಮ್ಮ ಯಾವುದೇ ಗ್ರಾಹಕರ ಸಹಕಾರ ಸಂಘ ನಾಲ್ಕು ರೂಪಾಯಿಗಳನ್ನು ಇಟ್ಟುಕೊಂಡು ಕುಳಿತರೆ ನಾಲ್ಕೂವರೆ ರೂಪಾಯಿಗಳನ್ನು ಮಾಡುವುದಕ್ಕೆ ಇನ್ನೊಬ್ಬರಿಗೆ ಬರುವುದಿಲ್ಲ. ಆ ದೃಷ್ಟಿಯಿಂದ ನಾವು ಕಂಟ್ರೋಲ್ ಮಾಡಿದ್ದೇವೆ. ಆದರೂ ಕೂಡ ರಾಜ್ಯದಲ್ಲಿ ಗ್ರಾಹಕರ ಮಹಾಮಂಡಲಿ ಇದೆ. ಇವೊತ್ತು ಅದನ್ನು ನಾವು ಸುಧಾರಿಸಿದ್ದೇವೆ, ಇನ್ನು ಸುಧಾರಿಸುವುದು ಬಹಳ ಇದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಅದು ಕಷ್ಟದಲ್ಲಿರುವುದರಿಂದ ಆದರೂ ಸಹ ಕಳೆದ 2-3 ವರ್ಷಗಳಿಂದ ಮೊದಲಿಗಿಂತ ಚೆನ್ನಾಗಿ ಕಾರ್ಯನಿರ್ವಹಿಸುತ್ತಿದೆ. ಸಹೋದರಿ ಶ್ರೀಮತಿ ಪ್ರಮೀಳಾ ನೇಸರ್ಗಿಯವರು ಮಾತನಾಡುತ್ತಾ 3-4 ಸೊಸೈಟಿಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ತಾವು ಎನ್.ಜಿ.ಇ.ಎಫ್ ಸೊಸೈಟಿ ಬಗ್ಗೆ ಮಾತನಾಡಿ, ಅದರಲ್ಲಿ ಚೀಫ್ ಸೆಕ್ರೆಟರಿಯವರ ಪತ್ನಿಯಿದ್ದು, ನೀವು ಸಡಿಲ ಬಿಟ್ಟಿದ್ದೀರೆನ್ನುವ ಮಾತನ್ನು ಹೇಳಿದ್ದಾರೆ. ಆದರೆ ಆ ತರಹವೇನೂ ಇಲ್ಲ. ಅಲ್ಲಿ ಏನಾಗಿದೆಯೆಂದರೆ, ಅಲ್ಲಿಗೆ ಸ್ಪೆಷಲ್ ಆಫೀಸರ್ ಅವರನ್ನು ಹಾಕಿದ ನಂತರ ಇನ್ನೂ ಚಾರ್ಜ್ ಕೊಟ್ಟಿರಲಿಲ್ಲ. ಮತ್ತು ಡಿಪಾಸಿಟರ್ಸ್ ಏನಿದ್ದರು, ಅವರುಗಳು ಕೋರ್ಟಿಗೆ ಹೋಗಿದ್ದಾರೆ. ಆ ಕಾರಣಕ್ಕೋಸ್ಕರ ಇವೊತ್ತು ಡಿಸಿಸಿ ಬ್ಯಾಂಕ್‌ನವರದೂ ಸಹ ಇದ್ದು, ಜಮಾ ಮಾಡಿಕೊಳ್ಳುತ್ತಿದ್ದಾರೆ, ಅದನ್ನೂ ಕೂಡ ತೆಗೆದಿಟ್ಟಿದ್ದೇವೆ. ಈ ಎಲ್ಲಾ ವ್ಯವಸ್ಥೆ ಮಾಡಿದ ನಂತರ ಡಿಪಾಸಿಟರ್ಸ್‌ಗೆ ನಾವು ಕೊಡಲೇಬೇಕು, ಅದರ ಬಗ್ಗೆ ನಾವು ಕ್ರಮ ಕೈಗೊಳ್ಳುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಎನ್.ಜಿ.ಇ.ಎಫ್.ಗೆ ಮೊದಲು ಛೇರ್ಮನ್ ಆಗಿದ್ದಂಥವರು ಚೀಫ್ ಸೆಕ್ರೆಟರಿ ಅವರ ಧರ್ಮಪತ್ನಿಯವರು. ಆಗ ಅಲ್ಲಿನ ಸೊಸೈಟಿಯಲ್ಲಿ ಏನೇನು ಅವ್ಯವಹಾರಗಳಾಗಿದ್ದವು ಎಂಬುದರ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿದೆ. ತಮಗೂ ಕೂಡ ಅವರೇ ಖುದ್ದಾಗಿ ಬಂದು ಮೆಮೊರ್‍ಯಾಂಡಮ್ ಕೊಟ್ಟಿದ್ದರೂ ಇದುವರೆವಿಗೂ ಕೂಡ ತಾವು ಯಾವುದೇ ಕಾರ್ಯಕ್ರಮ ಹಾಕಿಕೊಂಡಿಲ್ಲ. ನಾನು ಆಗಲೇ ಹೇಳಿದಂತೆ, ಯಡಿಯೂರಪ್ಪನವರೆಂದರೆ ನಮ್ಮವರಲ್ಲ, ಅಲ್ಲಿರುವ ಸ್ಪೆಷಲ್ ಆಫೀಸರ್ ಆಗಿದ್ದು, ಅವರ ಮೇಲೂ ತಾವು ಕ್ರಮ ತೆಗೆದುಕೊಂಡಿಲ್ಲ, ಅದರ ಬಗ್ಗೆ ಯಾವುದೇ ಉತ್ತರ ಕೊಡುತ್ತಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಅಲ್ಲಿಗೆ ನಾವು ಸ್ಪೆಷಲ್ ಆಫೀಸರ್ ಅವರನ್ನು ಹಾಕಿದ್ದೇವೆ.

ಅಧ್ಯಕ್ಷರು: ಚೀಫ್ ಸೆಕ್ರೆಟರಿಯವರ ಶ್ರೀಮತಿಯವರು ಎನ್.ಜಿ.ಇ.ಎಫ್ ಛೇರ್ಮನ್ ಆಗಿದ್ದಾರೆಯೇ?

ಶ್ರೀಮತಿ ಪ್ರಮೀಳಾ ನೇಸರ್ಗಿ: ಎನ್.ಜಿ.ಇ.ಎಫ್‌ನಲ್ಲಿ ಛೇರ್ಮನ್ ಆಗಿದ್ದಾಗ ಹೌಸಿಂಗ್ ಬಿಲ್ಡಿಂಗ್ ಸೊಸೈಟಿಯಲ್ಲಾಗಿರುವಂಥ ಅವ್ಯವಹಾರದಲ್ಲಿ ಅವರ ಪಾತ್ರವೂ ಇತ್ತೆಂಬುದರ ಬಗ್ಗೆ ಕಂಪ್ಲೇಂಟ್ ಕೊಡಲಾಗಿತ್ತು.

ಅಧ್ಯಕ್ಷರು: ನೀವು ಏನು ಹೇಳುತ್ತಿದ್ದೀರೆಂಬುದರ ಬಗ್ಗೆ ನನಗರ್ಥವಾಗುತ್ತಿಲ್ಲ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಅವರೇ ಪ್ರಿಸೈಡ್ ಮಾಡಿ ಎನ್‌ಜಿಎಫ್ ಕಾರನ್ನು ತೆಗೆದುಕೊಂಡು ಹೋಗಿ ಭಾಗವಹಿಸಿದ್ದರು, ಅದರ ಬಗ್ಗೆ ಪೂರ್ಣ ಮಾಹಿತಿಯನ್ನು ಫೋಟೋ ಸಮೇತ ಮಾನ್ಯ ಸಚಿವರಿಗೆ ಕೊಟ್ಟಿದ್ದೆ. ಇವೊತ್ತಿನವರೆವಿಗೂ ಕ್ರಮ ಕೈಗೊಂಡಿಲ್ಲ.

MR. SPEAKER: What is your inference? Atleast, I was not present here. ನಿಮ್ಮ ಅಭಿಪ್ರಾಯವೇನು?

SMT. PRAMILA NESARGI: As the Chairman of the society, she had taken interest in the House Building Society. ಅವರು ಎನ್.ಜಿ.ಇ.ಎಫ್.ನ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾಗ, ಆ ಸೊಸೈಟಿಯಲ್ಲಿ ಅವ್ಯವಹಾರವಾದಾಗ ಯಡಿಯೂರಪ್ಪನವರನ್ನು ಸ್ಪೆಷಲ್ ಆಫೀಸರ್ ಎಂದು ಅಲ್ಲಿಗೆ ನೇಮಕ ಮಾಡಿದ್ದಾರೆ. ಇದರ ಬಗ್ಗೆ ಸುಪ್ರೀಂ ಕೋರ್ಟ್ ಆರ್ಡರ್ ಆದನಂತರ ಇವರಿಬ್ಬರೂ ಸಹ ಸ್ಪಾಟ್‌ಗೆ ಎನ್.ಜಿ.ಇ.ಎಫ್ ಕಾರನ್ನು ತೆಗೆದುಕೊಂಡು ಹೋಗಿ ಆ ಜಮೀನನ್ನು ಯಾರಿಗೆ ವಾಪಸ್ಸು ಕೊಡಬೇಕಾಗಿತ್ತೋ ಅವರಿಗೆ ವಾಪಸ್ಸು

ಕೊಡದೆ, ಇವೊತ್ತಿನವರೆಗೆ ಅಲ್ಲಿ ಆಗಿರುವ ಅವ್ಯವಹಾರದ ಬಗ್ಗೆ ಫುಲ್ ಮೆಮೊರ್‍ಯಾಂಡಮ್ ಕೊಟ್ಟು 6-8 ತಿಂಗಳುಗಳಾದವು.

MR. SPEAKER: She, as chairman of which society? As Chairman and M.D. of NGEF....

ಶ್ರೀಮತಿ ಪ್ರಮೀಳಾ ನೇಸರ್ಗಿ: ಸಭಾಧ್ಯಕ್ಷರೇ, As Chairman and M.D. of NGEF....

MR. SPEAKER: How do you bring in the name of C.M.D? Because she is a very senior IAS Officer....

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದೇನೆಂದರೆ, ಜಮೀನು ಯಾರಿಗೆ ಸೇರಿತ್ತು, ಆ ಜಮೀನನ್ನು ಜಮೀನಿನ ಮಾಲೀಕರಿಗೆ ವಾಪಸ್ಸು ಕೊಡುವುದು ಬಿಟ್ಟು ಇವರು ಸೊಸೈಟಿಯನ್ನು ವಶಪಡಿಸಿಕೊಂಡರು. ಇದರ ಬಗ್ಗೆ ಸಿ.ಎಂ.ಡಿ.ಯವರು ಇಂಟ್ರೆಸ್ಟ್ ತೆಗೆದುಕೊಂಡರು ಎಂಬುದೇ ಅವರ ವಾದ.

ಶ್ರೀ ಎಂ.ವೀರಪ್ಪ ಮೊಯಿಲಿ (ಕಾರ್ಕಳ): ಇಲ್ಲಿ ಕೆಲವರು ಅಧಿಕಾರಿಗಳು ತಮ್ಮನ್ನು ಡಿಫೆಂಡ್ ಮಾಡಿಕೊಳ್ಳುವುದಕ್ಕೆ ಇಲ್ಲ. ಈಗ ಆ ಕುರಿತು ಏನಾದರೂ ಇದ್ದರೆ ಅವರು ಬರೆದು ಕೊಡಲಿ, ಆಗ ವಿಚಾರ ಮಾಡಬಹುದು. ಆದರೆ, ಇಲ್ಲಿ ಉದ್ಭವಿಸಿರುವ ಪ್ರಶ್ನೆಯೇನೆಂದರೆ, ಅವರು ಹೇಳಿರುವ ಪ್ರಕಾರ She is the CMD of NGEF. ಸೊಸೈಟಿಯ ಛೇರ್ಮನ್ ಅಲ್ಲ. ಹಾಗಿರುವಾಗ ಇದರಲ್ಲಿ ಸ್ಪೆಷಲ್ ಆಫೀಸರ್ ಆಗಿರುವವರು ಕೋಆಪರೇಟಿವ್ ಡಿಪಾರ್ಟ್‌ಮೆಂಟಿನವರು. ಆದುದರಿಂದ, ಇದನ್ನು ಬಹಳ ವೇಗ್ ಆಗಿ, ಅಂದರೆ, ಜಮೀನನ್ನೂ ಜಮೀನುದಾರರಿಗೆ ಬಿಟ್ಟುಕೊಡಲಿಲ್ಲವೆಂಬುದು ಒಂದು ಅಲಿಗೇಷನ್. ಎನ್.ಜಿ.ಇ.ಎಫ್.ನ ಕೋಆಪರೇಟೀವ್ ಸೊಸೈಟಿ ಜಮೀನ್ದಾರರಿಗೆ ಕೊಟ್ಟಿದ್ದರೆ ದೊಡ್ಡ ಸ್ಕ್ಯಾಂಡಲ್ ಆಗಿರುತ್ತಿತ್ತು. ಆದುದರಿಂದ, ದಯಮಾಡಿ ಯಾರದೇ ಹೆಸರನ್ನು ತರುವಾಗ ಆಧಾರವಿಲ್ಲದೆ ಯಾವ ರೀತಿ ಇನ್‌ವಾಲ್ವ್ ಮಾಡುವುದು? ಈಗ ಅದನ್ನು ಡಿಫೆಂಡ್ ಮಾಡುವುದಕ್ಕೆ ಯಾರೂ ಇಲ್ಲ. ಸುಮ್ಮನೆ ವೇಗ್ ಆಗಿ ವಿಷಯ ಹರಿದುಬಿಟ್ಟರೆ ಅದು ಅಪಾರ್ಥಕ್ಕೆಡೆಯುಂಟು ಮಾಡುತ್ತದೆ.

1.00 ಪಿ.ಎಂ

ಅಧ್ಯಕ್ಷರು: ಚರ್ಚೆಯಲ್ಲಿ ಅವರು ಪಾಲ್ಗೊಂಡಾಗ ನಾನು ಇರಲಿಲ್ಲ, ಅದಕ್ಕೇ ನಾನು ತಕ್ಷಣ ಮಧ್ಯ ಪ್ರವೇಶ ಮಾಡಿದ್ದುದು.

ಶ್ರೀಮತಿ ಪ್ರಮೀಳಾ ನೇಸರ್ಗಿ: ಇಲ್ಲಿ ಪ್ರಪ್ರಥಮವಾಗಿ ಅದನ್ನು ತಂದಿಲ್ಲ. ದೂರಿನ ಅರ್ಜಿಯನ್ನು ದಾಖಲೆಗಳ ಸಮೇತ ಅಲ್ಲಿರತಕ್ಕವರು ಕೊಟ್ಟಿದ್ದಾರೆ. ಅದು ತಮಗೆ ಗೊತ್ತಿದೆ.

ಶ್ರೀ ಎಸ್.ಎಸ್.ಪಾಟೀಲ್: ಒಂದನ್ನೂ ನಾವು ಬಿಟ್ಟಿಲ್ಲ, ಕ್ರಮ ತೆಗೆದುಕೊಂಡಿದ್ದೇವೆ.

ಅಧ್ಯಕ್ಷರು: ಏನೇ ದಾಖಲೆಗಳು ಇದ್ದರೂ ಅಧಿಕಾರಿ ಇದ್ದದ್ದು as CMD of NGEF. Whatever you are referring is matter pertaining to Co-operative Society. So, CMD, NGEF will have nothing to do with the Co-operative Society. It is not fair to drag the name of the CMD here.

ಶ್ರೀಮತಿ ಪ್ರಮೀಳಾ ನೇಸರ್ಗಿ: ಆ ರೀತಿಯಾಗಿದ್ದರೆ ನಾನು ಈ ವಿಚಾರವನ್ನು ತರುತ್ತಲೇ ಇರಲಿಲ್ಲ. ಅವರು ಸಿ.ಎಂ.ಡಿ.ಯಾಗಿ ಅಲ್ಲಿ ಹಸ್ತಕ್ಷೇಪ ಮಾಡಬಾರದಿತ್ತು. ಆದರೂ ವಿಶೇಷ ಆಸಕ್ತಿವಹಿಸಿ ಈ ಸೊಸೈಟಿಯ ಅವ್ಯವಹಾರದಲ್ಲಿ ಭಾಗಿಯಾಗಿದ್ದರು ಎಂಬ ಬಗ್ಗೆ ದಾಖಲೆಗಳ ಸಮೇತ ಕೊಟ್ಟಿದ್ದರೂ ಸಹ ಕ್ರಮ ತೆಗೆದುಕೊಂಡಿಲ್ಲ. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರೆಂದು ಕೇಳಿದೆ.

MR. SPEAKER: Such references should not find a place in our record. ತಾವು ಸರ್ಕಾರದವರೇ ಇದರ ಬಗ್ಗೆ ಡಿಫೆಂಡ್ ಮಾಡಬೇಕಾಗುತ್ತದೆ, ಇದನ್ನು ನಾನು ಮಾಡುವುದಕ್ಕೆ ಬಿಡಬಾರದಿತ್ತು.

ಶ್ರೀ ಎಸ್.ಎಸ್.ಪಾಟೀಲ್: ನಾವು ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರದ ಕಡೆಯ ಹಂತಕ್ಕೆ ಬಂದಿದ್ದಾರೆ. ಆದರೆ ಅವರು ಕೆಲವು ವಿಚಾರಗಳ ಬಗ್ಗೆ ಉತ್ತರ ಕೊಟ್ಟಿಲ್ಲ. ಅದರ ಬಗ್ಗೆ ಅವರ ಗಮನಕ್ಕೆ ತರುತ್ತಿದ್ದೇನೆ. ಸಹಕಾರಿ ಕ್ಷೇತ್ರದ ಸಕ್ಕರೆ ಕಾರ್ಖಾನೆಗಳು ನಡೆಯುತ್ತಿದೆ. ಕೋಟ್ಯಾಂತರ ರೂಪಾಯಿ ದುರುಪಯೋಗವಾಗಿದೆ; ರೈತರಿಗೂ ಹಣವನ್ನು ಕೊಟ್ಟಿಲ್ಲ. ಬೀದರ್ ಮತ್ತು ಗುಲ್ಬರ್ಗಾದ ರೈತರ ಆತ್ಮಹತ್ಯೆಯ ಪ್ರಕರಣಗಳ ಕಾರಣಕ್ಕೆ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಬರಬೇಕಾದ ಹಣ ಬಂದಿಲ್ಲವೆಂದು ಗೊತ್ತಾಗಿದೆ. ಇಲ್ಲಾಗಿರುವ ಅವ್ಯವಹಾರಗಳ ಬಗ್ಗೆ ಇವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಬೆಂಗಳೂರುಗಳಂಥ ನಗರದಲ್ಲಿ ಹೌಸ್ ಬಿಲ್ಡಿಂಗ್ ಸೊಸೈಟಿಗಳೆಂದು ಇದೆ. ನೂರಾರು ಕೋಟಿ ರೂಪಾಯಿಗಳನ್ನು ಲೂಟಿ ಮಾಡುತ್ತಿದ್ದಾರೆ. ಇದರ ಬಗ್ಗೆ ಏನು ಕ್ರಮ

ತೆಗೆದುಕೊಂಡಿದ್ದೀರಿ ಎಂಬ ಬಗ್ಗೆ ಅವರಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇವೆ. ತಾವು ಅವುಗಳ ಬಗ್ಗೆ ಉತ್ತರ ಕೊಡಿ, ಅನಂತರ ನಾವು ಮಾತನಾಡುತ್ತೇವೆ.

ಶ್ರೀ ಸಿ.ಬೈರೇಗೌಡ: ಬೆಂಗಳೂರಿನಲ್ಲಿರುವ ಹೌಸ್ ಬಿಲ್ಡಿಂಗ್ ಸೊಸೈಟಿಗಳು ಒಂದು ರೀತಿ ಭೂಮಿಯ ಮೇಲಿರುವ ಸ್ವರ್ಗದಂತೆ. ಅಷ್ಟು ಹಣದ ಲೂಟಿಯಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಅದರ ಬಗ್ಗೆ ಉತ್ತರ ಮುಂದೆ ಕೊಡುತ್ತೇನೆ. ಮಾನ್ಯ ಪ್ರಮೀಳ ನೇಸರ್ಗಿಯವರೇನು ಎನ್.ಜಿ.ಇ.ಎಫ್. ಗೃಹನಿರ್ಮಾಣದ ಸಹಕಾರಿ ಸಂಘದ ಬಗ್ಗೆ ಏನು ಹೇಳಿದ್ದಾರೆ ಅದರ ಬಗ್ಗೆ ದೂರು ಬಂದ ತಕ್ಷಣ ಅಲ್ಲಿಗೆ ವಿಶೇಷ ಅಧಿಕಾರಿಯನ್ನು ಹಾಕಿ ಅದನ್ನು ಸೂಪರ್‌ಸೀಡ್ ಮಾಡಿದ್ದೇವೆ. ಕೆಲವು ಜಮೀನನ್ನು ವಾಪಸ್ ಕೊಟ್ಟು ಹಣವನ್ನು ಪಡೆದುಕೊಳ್ಳುವ ಕೆಲಸ ಮಾಡಿದ್ದೇವೆ. ತಾವೇನು ದಾಖಲೆ ಕೊಟ್ಟಿದ್ದೀರಿ ಅದರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಆ ಕೆಲಸ ನಡೆಯುತ್ತಿದೆ. ಅನಂತರ ಬಿನ್ನಿ ಮಿಲ್ ಗೃಹನಿರ್ಮಾಣ ಸಹಕಾರಿ ಸಂಘದ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಇದರ ಬಗ್ಗೆಯೂ ಕ್ರಮ ತೆಗೆದುಕೊಂಡಿದ್ದೇವೆ. ಎನ್.ಜಿ.ಇ.ಎಫ್ ಪ್ರಕರಣದಲ್ಲಿ ಸಿ.ಓ.ಡಿ ತನಿಖೆಯಾಗುತ್ತಿದೆ. ಆದ್ದರಿಂದ ನಾವು ಯಾವುದನ್ನೂ ಬಿಟ್ಟಿಲ್ಲ. ಆದರೆ ಸ್ವಲ್ಪ ಸಮಯವಾಗುತ್ತದೆ. ಇದು ತಮಗೂ ಗೊತ್ತಿದೆ. ಮಾನ್ಯ ಶ್ರೀರಾಮರೆಡ್ಡಿಯವರು ಹೌಸ್‌ಬಿಲ್ಡಿಂಗ್ ಸೊಸೈಟಿಯ ಬಗ್ಗೆ ಹೇಳಿದ್ದಾರೆ. ಎಲ್ಲೆಲ್ಲಿ ಹೆಚ್ಚು ಹಣ ಬರುತ್ತದೆ ಅಲ್ಲಿ ಅವ್ಯವಹಾರವಾಗಿದೆ. ರಾಜ್ಯದಲ್ಲಿ ಬೆಂಗಳೂರು ಒಂದರಲ್ಲೇ ಸುಮಾರು 10-20 ಇಂಥ ಸೊಸೈಟಿಗಳವರು ಅವ್ಯವಹಾರ ಮಾಡಿಬಿಟ್ಟಿದ್ದಾರೆ. ಕೆಲವರು ಒಳ್ಳೆಯ ರೀತಿಯಲ್ಲಿ ಮಾಡಿದ್ದಾರೆ. ಸರಿಯಾಗಿ ಹಂಚಿದ್ದಾರೆ. ಆ 20-30 ಅವ್ಯವಹಾರ ನಡೆದಿರುವ ಹೌಸಿಂಗ್ ಸೊಸೈಟಿಗಳ ಬಗ್ಗೆ ತಪಾಸಣೆ ನಡೆಯುತ್ತಿದೆ; ಎನ್.ಟಿ.ಐ. ಸೊಸೈಟಿಯ ಬಗ್ಗೆ ತಮಗೆ ಗೊತ್ತಿದೆ. ಏನಾದರೂ ಮಾಡಲು ಹೋದರೆ ಕೋರ್ಟ್‌ನಿಂದ ತಡೆಯಾಜ್ಞೆಯನ್ನು ತಂದುಬಿಡುತ್ತಾರೆ. ಇದರಿಂದ ಕ್ರಮ ತೆಗೆದುಕೊಳ್ಳುವಲ್ಲಿ ನಮಗೆ ಮತ್ತೆ ವಿಳಂಬವಾಗುತ್ತದೆ. ಈ 20-30 ಸೊಸೈಟಿಗಳಿಂದಾಗಿ ಇಡೀ ರಾಜ್ಯದ ಸೊಸೈಟಿಗಳೆಲ್ಲವೂ ಹೊಲಸಾಗಿದೆಯೆಂಬ ಕಲ್ಪನೆಯನ್ನು ಉಂಟುಮಾಡಿವೆ. ನಾವು ಅಂಥವುಗಳ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಅಧ್ಯಕ್ಷರೆ, ಕೋ-ಆಪರೇಟೀವ್ ಆ್ಯಕ್ಟ್ ಒಂದು ರೀತಿ ರಬ್ಬರ್ ಇದ್ದಂತೆ. ಹೇಗೆ ಬೇಕಾದರೂ ಎಳೆದುಕೊಂಡು ಹೋಗಬಹುದು. ನಾನೇ ತಮ್ಮೊಂದಿಗೆ ಎರಡು ಮೂರು ವಿಚಾರದಲ್ಲಿ ಪ್ರಸ್ತಾಪ ಮಾಡಲು ಬಂದಂಥ ಸಂದರ್ಭದಲ್ಲಿ, ಯಾವುದೇ ಸಹಕಾರಿ ಸಂಘದ ವಿರುದ್ಧ ಮಾಡಿರುವ ಅವ್ಯವಹಾರದ ಬಗ್ಗೆ ನೇರವಾಗಿ ಕ್ರಮ ತೆಗೆದುಕೊಳ್ಳಲು ತಮಗ ಕಾನೂನಿನಲ್ಲಿ ಅವಕಾಶವಿಲ್ಲದ ಪರಿಸ್ಥಿತಿ ಬಂದಿದೆ. ಕೋ ಆಪರೇಟಿವ್ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಕೊಡಬೇಕಾದ ಹಣ ಬಾಕಿ ಇದೆ. ಇದರ ಜೊತೆಗೆ ಕೋಟಿಗಟ್ಟಲೆ ಹಣವನ್ನು ದುರುಪಯೋಗ ಮಾಡಿದ್ದಾರೆ.

ರೈತರನ್ನೂ, ಸೊಸೈಟಿಗಳೆರಡನ್ನೂ ಮುಳುಗಿಸಿದರು. ಇದು ತಮಗೆ ಗೊತ್ತಿದೆ. ಇದು ತಮಗೂ ಗೊತ್ತಿದೆ. ಬೆಂಗಳೂರಿನಲ್ಲಿ ಹೌಸ್‌ಬಿಲ್ಡಿಂಗ್ ಸಹಕಾರಿ ಸಂಘದವರು ಎಷ್ಟು ಕೋಟಿ ರೂಪಾಯಿ ಅವ್ಯವಹಾರ ಮಾಡಿದ್ದಾರೆ, ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಇದರ ಬಗ್ಗೆ ಕೇವಲ ಪರಿಶೀಲನೆ ಮಾಡುತ್ತೇನೆಂದರೆ ಸರಿಹೋಗುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್: ಹೌಸಿಂಗ್ ಬೋರ್ಡ್ ಸೊಸೈಟಿಗಳಲ್ಲಿ ಡೆವಲಪರ್ಸ್‌ಗಳಿಂದಲೇ ಈ ಹೊಲಸು ಕೆಲಸವಾಗುತ್ತಿರುವುದು. ನಾವು ಈಗ ಆ ಡೆವಲಪರ್ಸ್‌ನ್ನು ತೆಗೆದುಹಾಕಿದ್ದೇವೆ. ಅವ್ಯವಹಾರವಾದ ಮೇಲೆ ಕ್ರಮ ತೆಗೆದುಕೊಳ್ಳುವುದು ಬೇರೆ ವಿಚಾರ, ಅವರು ಅವ್ಯವಹಾರ ಮಾಡಿದ ಮೇಲೆ ಏನು ಮಾಡಬಹುದು, ಏನು ಮಾಡಲು ಸಾಧ್ಯವಿಲ್ಲವೆಂಬುದು ನಮಗೆ ಗೊತ್ತಿದೆ. ಆದ್ದರಿಂದ ನಾವು ಈಗ ಆ ಡೆವಲಪರ್ಸ್‌ನ್ನು ತೆಗೆದುಹಾಕಿದ್ದೇವೆ. ಆ ಸೊಸೈಟಿಯವರೇ ರೈತರಿಂದ ನೇರವಾಗಿ ಭೂಮಿಯನ್ನು ಖರೀದಿ ಮಾಡಬೇಕೆಂದು ಮಾಡಿದ್ದೇವೆ. ಒಟ್ಟಾರೆ ಈ ಸೊಸೈಟಿಗಳಲ್ಲಿ ಪ್ರಾಮಾಣಿಕತೆ ಕಡಿಮೆಯಾಗಿದೆ. ಇಲ್ಲಿ ಸ್ವಲ್ಪ ಪ್ರಾಮಾಣಿಕತೆಯೂ ಬೇಕಾಗುತ್ತದೆ. ಎಲ್ಲವನ್ನೂ ಕಾನೂನಿನ ಮೂಲಕವೇ ಮಾಡಲು ಆಗುವುದಿಲ್ಲ. ಆದರೂ ಕಾಯಿದೆಯಲ್ಲಿ ಅದಕ್ಕೆ ಅವಕಾಶವಿದೆ. ಸಿ.ಒ.ಡಿ, ಸಿ.ಬಿ.ಐ ವಿಚಾರಣೆಗೆ ಹಾಕಿದ್ದೇವೆ. ರಾಜ್ಯದಲ್ಲಿ ಸುಮಾರು ಹತ್ತು ಸಾವಿರ ಜನರ ಮೇಲೆ ಕ್ರಿಮಿನಲ್ ಮೊಕದ್ದಮೆ ಹಾಕಿಸಿದ್ದೇವೆ. ಇನ್ನೂ ಉಳಿದಿವೆ. ಅವುಗಳ ಬಗ್ಗೆ ಸಹ ಹಂತ ಹಂತವಾಗಿ ಕ್ರಮ ತೆಗೆದುಕೊಳ್ಳುತ್ತೇನೆ. ಸೊಸೈಟಿಯ ಸಮಾಪನೆಯ ಬಗ್ಗೆ ಮಾನ್ಯ ಅರಗಜ್ಞಾನೇಂದ್ರರವರು ಹೇಳಿದ್ದಾರೆ. ಅವರು ಹಿರಿಯ ಸದಸ್ಯರು, ಅವರಿಗೆ ಈ ವಿಚಾರದಲ್ಲಿ ಬಹಳ ಅನುಭವವಿದೆ. ಅವರು ಬಹಳ ಚೆನ್ನಾಗಿ ಸೊಸೈಟಿಯ ಸಮಾಪನೆಯ ಬಗ್ಗೆ ಹೇಳಿದ್ದಾರೆ. ಕೆಲವು ಸೊಸೈಟಿಗಳು ಚುನಾವಣೆಯ ಸಮಯದಲ್ಲಿ ಬಯಲಿಗೆ ಬರುತ್ತವೆ. ನಾನು ಸಚಿವನಾದ ಮೇಲೆ ಇದರ ಬಗ್ಗೆ ಮೊದಲು ಕ್ರಮ ತೆಗೆದುಕೊಂಡು ಸುಮಾರು 26 ಸಾವಿರ ಸೊಸೈಟಿಗಳಲ್ಲಿ ಸುಮಾರು ಐದು ಸಾವಿರ ಸೊಸೈಟಿಗಳನ್ನು ಲಿಕ್ವಿಡೇಟ್ ಮಾಡಿದ್ದೇನೆ. ನಿಷ್ಕ್ರಿಯೆಗೊಂಡ ಸಹಕಾರಿ ಸಂಘಗಳು ರಾಜ್ಯದಲ್ಲಿ ಒಂದೂ ಇರಬಾರದೆಂದು ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ಆ ರೀತಿ ಕ್ರಮ ತೆಗೆದುಕೊಳ್ಳುವ ಮೊದಲು ಅವರಿಗೆ ನೋಟೀಸ್ ಕೊಡಬೇಕು, ಅವರು ಸ್ಟೇ ತರುತ್ತಾರೆ, ಈ ರೀತಿ ಸಮಯ ಬೇಕಾಗುತ್ತದೆ. ಒಟ್ಟಾರೆ ಇದರ ಬಗ್ಗೆ ಇನ್ನೂ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ನಮ್ಮ ರಾಜ್ಯದಲ್ಲಿರುವ 26 ಸಾವಿರ ಸೊಸೈಟಿಗಳಲ್ಲಿ ಹತ್ತು ಸಾವಿರ ಜನರ ಮೇಲೆ ಕ್ರಿಮಿನಲ್ ಕೇಸ್, ಐದು ಸಾವಿರ ಸೊಸೈಟಿಗಳ ಲಿಕ್ವಿಡೇಷನ್ ಮಾಡಿದರೆ ಉಳಿದಿರತಕ್ಕದ್ದು ಎಷ್ಟು? ಹೀಗಾದರೆ ಕೋ- ಆಪರೇಟೀವ್ ಸೆಕ್ಟಾರನ್ನು ಚೇತರಿಸಿಕೊಳ್ಳುವುದು ಹೇಗೆ?

ಶ್ರೀ ಎಸ್.ಎಸ್.ಪಾಟೀಲ್: ಇದು ಮೊದಲಿನಿಂದಲೂ ಇತ್ತು. ನನ್ನ ಕಾಲದಲ್ಲೇ ಆಗಿದೆಯೆಂದು ನಾನು ಹೇಳುವುದಿಲ್ಲ. ಇರತಕ್ಕ ಸ್ಥಿತಿಯನ್ನು ಹೇಳಿದ್ದೇನೆ. ಅಂಥ ಸೊಸೈಟಿಗಳ ವಿರುದ್ಧ ಕೇಸ್ ಹಾಕಿದ್ದೇವೆ. ಮೊದಲಿನಿಂದ ಬೆಳೆದುಕೊಂಡು ಬಂದಿದ್ದು ನಾನು ಬಯಲಿಗೆ ಹಾಕುತ್ತಿದ್ದೇನೆ. ಇದು ಇತ್ತು ಇಲ್ಲ ಎಂದು ಇಲ್ಲ. ನನ್ನ ಕಾಲದಲ್ಲಿ ಆಗಿಲ್ಲ ಎಂದು ನಾನು ಹೇಳುತ್ತಿಲ್ಲ. ಇರುವುದನ್ನು ಬಯಲಿಗೆ ಹಾಕಿದ್ದೇನೆ. 26 ಸೊಸೈಟಿಗಳು ಸುಮ್ಮನೆ ಇಟ್ಟುಕೊಂಡಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಬೆಂಗಳೂರಿನ ಡಿಸಿಸಿ ಬ್ಯಾಂಕ್ ಬಗ್ಗೆ ಉತ್ತರ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಬೆಂಗಳೂರಿನ ಜಿಲ್ಲಾ ಬ್ಯಾಂಕಿನ ಬಗ್ಗೆ ನಾನು ಉತ್ತರ ಹೇಳಿದೆ. ಶುಗರ್ ಫ್ಯಾಕ್ಟರಿ ಬಗ್ಗೆ ತಾವು ಹೇಳಿದ್ದೀರಿ, ಮಾನ್ಯ ಶ್ರೀರಾಮರೆಡ್ಡಿಯವರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಸರಿಯಾಗಿ ತಿಳಿಸಿಲ್ಲ, ಎಂದು ಅವರು ಹೇಳಿದ್ದನ್ನು ನಾನು ಅಲ್ಲಗಳೆಯುವುದಿಲ್ಲ. ನಮ್ಮ ಸಕ್ಕರೆ ಸಚಿವರು ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ನಾವು ರೈತರಿಗೆ ಕೊಡುವ ವ್ಯವಸ್ಥೆ ಮಾಡುತ್ತೇವೆ. ಅದರಲ್ಲಿ ಎಲ್ಲವನ್ನೂ ಮೂಲವಾಗಿ ಸರ್ಕಾರ ಮಾಡುವುದಕ್ಕಾಗುವುದಿಲ್ಲ. ಅಲ್ಲಿರತಕ್ಕಂತಹ ಮೆಂಬರ್ಸ್ ಪ್ರಾಮಾಣಿಕವಾಗಿರಬೇಕು. ಅಪ್ರಾಮಾಣಿಕತೆಯಿಂದ ನಡೆದದ್ದಕ್ಕೆ ನಾವು ಈ ಕ್ರಮವನ್ನು ತೆಗೆದುಕೊಂಡಿದ್ದೇವೆ. ಅದೂ ಕೂಡ ನಾವು ತೆಗೆದುಕೊಳ್ಳುತ್ತೇವೆ. ಶ್ರೀ ಅರಗ ಜ್ಞಾನೇಂದ್ರರವರು ಹಿರಿಯ ಸಹಕಾರಿಗಳನ್ನು ಹೊರಗೆ ಹಾಕುವ ವ್ಯವಸ್ಥೆ ಮಾಡಿದ್ದೀರಿ, ಎಂದು ಅವರು ಅಲಿಗೇಷನ್ ಮಾಡಿದ್ದಾರೆ. ರಾಜ್ಯ ರಾಷ್ಟ್ರ ಮಟ್ಟದ ಒಬ್ಬ ಹಿರಿಯ ಸಹಕಾರಿ ಅನ್ನುವ ಮಾತು ಹೇಳಿದಿರಿ. ನನಗೂ ಅವರ ಬಗ್ಗೆ ಗೌರವ ಇದೆ. ಬಹುಶಃ ಎಂಟು ವರ್ಷ ಒಂದು ಸಾರಿ ಇದ್ದರು, ತದನಂತರ 13 ವರ್ಷ. ಕಾಯಿದೆಯಲ್ಲಿ ಆರು ವರ್ಷಕ್ಕಿಂತ ಹೆಚ್ಚು ಯಾರೂ ಇರುವುದಕ್ಕೆ ಬರುವುದಿಲ್ಲ. 121 ತಿದ್ದುಪಡಿ ಮಾಡಿಕೊಳ್ಳುತ್ತೇವೆ, ಆದರೆ ಅವರೊಬ್ಬರಿಗೆ ಮಾತ್ರ 29ಡಿ ಎಕ್ಸಂಷನ್ ಮಾಡಿ, ನಿಯಮ 121 ತಿದ್ದುಪಡಿಯನ್ನು ದುರುಪಯೋಗ ಮಾಡಿಕೊಳ್ಳುತ್ತೇವೆಂದು ಎಲ್ಲರೂ ಹೇಳಿದರಲ್ಲಾ ಆ ದುರುಪಯೋಗದ ಮೂಲಕ ಆಗಿದ್ದರೆ ನಾನೂ ಕೂಡ ಕೊಟ್ಟಿದ್ದೆ. ಇಲ್ಲ ಎಂದು ಹೇಳುವುದಿಲ್ಲ. ಅದು ಕೇಸ್ ಕೋರ್ಟಿಗೆ ಹೋಯಿತು ಕೋರ್ಟಿನಲ್ಲಿ ನನ್ನ ವಿರುದ್ಧ ಆಯಿತು, ನನ್ನ ವಿರುದ್ಧ ಆದ ಮೇಲೆ ಅಪೀಲ್ ಹೋದರು, ಅಪೀಲ್‌ನಲ್ಲಿ ಸ್ಟೇ ವೆಕೇಟ್ ಆಯಿತು. ಅವರು ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ: ಬಿ.ಎಸ್.ವಿಶ್ವನಾಥರವರು ತೀರ್ಥಹಳ್ಳಿಯವರು ಈ ಸಹಕಾರಿ ರಂಗದಲ್ಲಿ ಬಹಳ ಒಳ್ಳೆಯ ಹೆಸರು ಮಾಡಿರುವವರು. ಅವರು ಬಹಳ ನೊಂದು ನಿಮ್ಮ ಬಗ್ಗೆ ಹೇಳಿದ್ದಾರೆ. ಅದರ ಬಗ್ಗೆ ಕ್ಲ್ಯಾರಿಫಿಕೇಷನ್ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ನಾನೂ ಅವರಿಗೆ ಮೂರು ವರ್ಷ ಮುಂದುವರೆಸಿದ್ದೇನೆ. ಅವತ್ತು ಎಕ್ಸಮ್ಷನ್ ಇತ್ತು. ಅವರು ಕೊಟ್ಟಿದ್ದು ತಪ್ಪು.

ಅದನ್ನು ವಿರೋಧ ಮಾಡುತ್ತಿದ್ದೇನೆ. ನಾವು ಹೇಳಿದ ಹಾಗೆ ಅವರು ದೊಡ್ಡ ಸಹಕಾರಿಗಳು ನೀವು ಹೇಳಿದ ಹಾಗೆ ಹಿರಿಯ ಸಹಕಾರಿಗಳು ಇರಲಿ ಎನ್ನುವ ದೃಷ್ಟಿಯಿಂದ ಕೊಟ್ಟಿದ್ದು ದುರ್ದೈವ. ಕೋರ್ಟಿಗೆ ಹೋದ ಮೇಲೆ ಕೋರ್ಟಿನಲ್ಲಿ ಇದು ಕೊಡುವುದು ತಪ್ಪು, ಕೊಡುವುದಕ್ಕೆ ಬರುವುದಿಲ್ಲ ಎಂದು ತೀರ್ಮಾನ ಆದ ಮೇಲೆ ಅವರು ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಮತ್ತು ಅವರು ಇದ್ದ ಅವಧಿಯಲ್ಲಿ ಸಾಮಾನ್ಯವಾಗಿ 200 ಕೋಟಿ ರೂ. ಹಾನಿ ಇದೆ. ಅದು ಒಂದು ಕ್ಷೇತ್ರ ನನಗೆ ಸುಧಾರಿಸುವುದಕ್ಕಾಗಲಿಲ್ಲ. ನಾನು ಎಷ್ಟು ಹೇಳಿದರೂ ಅದು ಒಂದು ಆಚರಣೆಗೆ ಬರಲಿಲ್ಲ. ಆದರೂ ಕೂಡ ಆಗಲಿ ಎಂದು ಬೆನ್ನು ಹತ್ತಿ ಅಲ್ಲಿಯೂ ಕೂಡ ಡೆಪಾಸಿಟ್ ಮಾಡಿಸುವ ವ್ಯವಸ್ಥೆ ಮಾಡಿದ್ದೇನೆ. ಇದು ರೈತರಿಗೆ ಅವಶ್ಯಕವಿದ್ದಂಥ ಒಂದು ವ್ಯವಸ್ಥೆ. ಆ ಕಾರಣದಿಂದ ಅದನ್ನೂ ಕೂಡ ಮಾಡಿದ್ದೇವೆ. ಅವರಿಗೆ ನೀವು ಹಾಕಿದ್ದೀರಿ. ನೀವು ಅವರ ಮೇಲೆ ಕ್ರೋಧ ಇತ್ತು ಎಂದು ಹೇಳುವ ಮಾತು ಸರಿಯಲ್ಲ. ಆದರೂ ಕೂಡ ಅವರ ಅವಧಿಯಲ್ಲಿ ಕೂಡ ಬ್ಯಾಂಕ್ ಹಾಳಾಗಿ ಹೋಯಿತು.

ಶ್ರೀ ಅರಗ ಜ್ಞಾನೇಂದ್ರ: ಅವರ ಮೇಲೆ ದುರುಪಯೋಗದ ಆಪಾದನೆ ಇದೆಯಾ?

ಶ್ರೀ ಎಸ್.ಎಸ್.ಪಾಟೀಲ್: ದುರುಪಯೋಗ ಮಾಡಿದ್ದು ಅಷ್ಟೇ ಅಲ್ಲ. ನಾನು ಮಂತ್ರಿಯಾಗಿ ಏನೂ ಮಾಡಲಿಲ್ಲ ಅಂದರೆ ನನ್ನ ತಪ್ಪು. ದುರುಪಯೋಗ ಮಾಡಿದರೆ ಅಷ್ಟೇ ಅಲ್ಲ, ನಾನು ಬರೀ ಲಂಚ ತಿನ್ನದಿರುವುದು ಅಷ್ಟೇ ಅಲ್ಲ, ನನ್ನ ಕೆಲಸ ವ್ಯವಸ್ಥೆ ಸುಧಾರಿಸಬೇಕಾಗುತ್ತದೆ. ಆ ವ್ಯವಸ್ಥೆ ಸುಧಾರಿಸಲಿಲ್ಲ, ವ್ಯವಸ್ಥೆ ಹೋಗಿ ನೋಡಲಿಲ್ಲ. ರೈತರಿಗೆ ಸರಿಯಾಗಿ ಅವರ ಮನೆ ಬಾಗಿಲಿಗೆ ಸಾಲ ಮುಟ್ಟಿಸುವುದಕ್ಕೆ ಆಗಲಿಲ್ಲ. ಕೆ.ಎಲ್.ಡಿ.ಬಿ. ಬ್ಯಾಂಕಿನಲ್ಲಿ ಸಾಲ ಮಂಜೂರು ಮಾಡುವುದಕ್ಕೆ ಆಗಲಿಲ್ಲ. ಆ ಕಾರಣದಿಂದ ರೈತರು ಬೇಜಾರಾಗಿದ್ದಾರೆ. ಆ ಕಾರಣದಿಂದ ನಾವು ಪ್ರೈಮರಿ ಸೊಸೈಟಿಯಲ್ಲಿ ಕೂಡ ಎಲ್ಲಾ ಸಾಲ ಕೊಡುವ ವ್ಯವಸ್ಥೆ ಹೆಚ್ಚಿಗೆ ಮಾಡಿದ್ದೇವೆ. ಟ್ರಾಕ್ಟರ್, ಲಾಂಗ್ ಟರ್ಮ್ ಲೋನ್, ಮಿಡ್ ಟರ್ಮ್ ಲೋನ್ ಶಾರ್ಟ್ ಟರ್ಮ್ ಲೋನ್, ಮೀಡಿಯಮ್ ಟರ್ಮ್ ಲೋನ್ ಎಲ್ಲಾ ಸಾಲ ಸಿಗುವ ವೇಳೆಗೆ ತಾಲ್ಲೂಕು ಮಟ್ಟದಲ್ಲಿ ನಮಗೆ ಸಾಲ ಸಿಗುವುದಿಲ್ಲ, ಬೆಂಗಳೂರಿಗೆ ಹೋಗಿಬರುವುದು, ಜಿಲ್ಲಾ ಮಟ್ಟಕ್ಕೆ ಹೋಗಬೇಕೆಂದರೆ ಯಾರು ಬರುತ್ತಾರೆ, ರೈತರು ಅಡ್ಡಾಡಿ ಸಾಕಾಗುತ್ತಿದ್ದಾರೆ. ಈ ವ್ಯವಸ್ಥೆ ಏನು ಹೇಳಿದರೂ ಕೂಡ ಅವರು ಮಾಡಲಿಲ್ಲ. ಆದರೂ ಕೂಡ ನಾನು ಅವರನ್ನು ತೆಗೆಯಲಿಲ್ಲ. ಕೋರ್ಟ್ ತೆಗೆದಿದೆ. ಈ ಕಾರಣದಿಂದ ತಾವು ಹೇಳಿದ ಮಾತನ್ನು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿ, ಅವರು ಏನೂ ಬಹಳ ಸಣ್ಣ ಪುಟ್ಟ ಮಾತನಾಡಿದ್ದಾರೆ, ಅಷ್ಟು ಸಣ್ಣ ಮನುಷ್ಯರು ಎಂದು ನಾನು ತಿಳಿದುಕೊಂಡಿರಲಿಲ್ಲ, ನನಗೆ ಟೀಕೆ ಮಾಡುವ ಸಣ್ಣ ಮನುಷ್ಯ ಎಂದು ನಾನು ತಿಳಿದುಕೊಂಡಿರಲಿಲ್ಲ. ದುರ್ದೈವದಿಂದ ಅವರು ಮಾಡಿದ್ದಾರೆ. ಅದು ಏನೇ ಮಾಡುವುದಾಗಲಿ, ನಾನು ಅವರ ಬಗ್ಗೆ ಕ್ರೋಧ ಇಲ್ಲ, ಸಿಟ್ಟು ಇಲ್ಲ, ನಾನು ಇದ್ದದ್ದು ಹೇಳುತ್ತೇನೆ. ಆ ಪರಿಸ್ಥಿತಿಯಲ್ಲಿ

ನಾನು ಏನು ಅವರಿಗೆ ಹೊರಗೆ ಹಾಕಲಿಲ್ಲ ಅಷ್ಟೆ. ಸಂಘದವರೂ ಕೂಡ ಅವರಿಗೆ ಸುಧಾರಿಸಿಲ್ಲ. ಅಂಕಿಸಂಖ್ಯೆ ಕೊಡಬಲ್ಲೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಡಿ.ಆರ್.ಪಾಟೀಲ್: ಆ ಸಂಸ್ಥೆಗೆ ಬಹುತೇಕ ಚೀಫ್ ಎಕ್ಸಿಕ್ಯೂಟೀವ್ ಯಾವಾಗಲೂ ಐಎಎಸ್ ಆಫೀಸರ್ಸ್ ಇರುತ್ತಾರೆಂದು ಕಾಣುತ್ತದೆ. ಎಸ್‌ಎಲ್‌ಡಿಬಿಗೆ ಅವರೇ ಚೀಫ್ ಎಕ್ಸಿಕ್ಯುಟೀವ್, ಬೇರೆ ಕಡೆ ಅಡ್ಮಿನಿಸ್ಟ್ರೇಷನ್ ಮಾಡುವವರು ಅವರು. ಅವರು ಹೆಚ್ಚು ಹೊಣೆಗಾರರಿರುತ್ತಾರೋ ಆ ಸಂಸ್ಥೆ ಛೇರ್ಮನ್ ಹೆಚ್ಚು ಹೊಣೆಗಾರರಿರುತ್ತಾರೋ.

ಶ್ರೀ ಎಸ್.ಎಸ್.ಪಾಟೀಲ್: ಸನ್ಮಾನ್ಯ ಉಪಾಧ್ಯಕ್ಷರೆ, ಡಿ.ಆರ್.ಪಾಟೀಲರು ಹೇಳಿದಂತೆ ಆಡಳಿತ ಮಂಡಳಿಯವರಿಗೆ ಏನೂ ಜವಾಬ್ದಾರಿ ಇಲ್ಲವೆಂದು ಅರ್ಥವಾಯಿತು. ನಾನು ಒಬ್ಬ ಮಂತ್ರಿಯಾಗಿ ಎಲ್ಲಾ ನಮ್ಮ ಕೋ ಆಪರೇಟೀವ್ ಸೆಕ್ರೆಟರಿ ಮಾಡಬೇಕೆಂದರೆ, ನಾನು ಏಕೆ ಇರಬೇಕು, ನಮ್ಮ ಕೋ-ಆಪರೇಟಿವ್ ಸೆಕ್ರೆಟರಿಗೆ ಅಧಿಕಾರ ಇದೆ, ಅವರು ಮಾಡಿಸುತ್ತಾರೆ. ನಾನು ಏಕೆ ಇರಬೇಕು? ಇದು ನೀವು ಒಬ್ಬ ರಾಷ್ಟ್ರ ಮಟ್ಟದ ಅಧ್ಯಕ್ಷರಾಗಿ ಈ ಮಾತನ್ನು ಹೇಳಬಾರದು. ಅವರಿಗೆ ಅನುಭವ ಇದೆ. ಸುಮ್ಮನೆ ಪ್ರಶ್ನೆ ಕೇಳುತ್ತಾರೆ. ನೀವು ಕೆಲವು ಸಂಸ್ಥೆಗಳನ್ನು ಸುಧಾರಿಸಿದ್ದೀರಿ. ನೀವು ಮಾಡಿಲ್ಲ? ಬರೀ ಮ್ಯಾನೇಜಿಂಗ್ ಡೈರೆಕ್ಟರ್ ಮಾಡಿದ್ದಾರಾ? ಆಡಳಿತ ಮಂಡಳಿಗೆ ಹೆಚ್ಚು ಜವಾಬ್ದಾರಿ ಇರಬೇಕಾಗುತ್ತದೆ. ಅಷ್ಟೇ ಜವಾಬ್ದಾರಿಯಿಂದ ಆಡಳಿತ ಮಂಡಳಿ ಇರಬೇಕಾಗುತ್ತದೆ. ಅವರೂ ಕೂಡ ಅದಕ್ಕೆ ಜವಾಬ್ದಾರರು ಮಾಡುತ್ತಾರೆ. ಹಾಗಾದರೆ ಆಡಳಿತ ಮಂಡಳಿ ಮೇಲೆ ಸರ್‌ಛಾರ್ಜ್ ಏಕೆ ಹಾಕುತ್ತೇವೆ, ಅದೂ ಕೂಡ ನಾನು ಯಾವುದೇ ಅನ್ಯಾಯವಾಗಿದೆ ಎಂದು ಹೇಳುತ್ತಾ, ಇವತ್ತಿನ ದಿವಸ ನಿಜವಾಗಿ ಬಹಳ ಉತ್ಕೃಷ್ಟವಾದ ಸಲಹೆಗಳನ್ನು ತಾವು ಕೊಟ್ಟಿದ್ದೀರಿ. ಮತ್ತು ಒಂದು ಕೊನೆಯ ಮಾತು ಹೇಳಿ ನಾನು ಬಸವಣ್ಣನವರ ಮಾತು ಬಿಡುವುದಿಲ್ಲ.

''ಬೈದವರನ್ನು ಹೊರೆದವರೆಂಬೆ, ಬೈದವರನ್ನು ಬಂಧುಗಳೆಂದೆ,
ಜರಿದವರನ್ನು ಆಜನ್ಮ ಬಂಧುಗಳೆಂದೆ,
ಹೊಗಳಿ ಹೊಗಳಿ ಹೊನ್ನ ಶೂಲಕ್ಕೇರಿಸಿದರಯ್ಯ
ಕೂಡಲ ಸಂಗಮದೇವ''

ನನ್ನನ್ನೂ ಯಾರೂ ಹೊಗಳಲಿಲ್ಲ. ನಾನು ಬಹಳ ಸಂತೋಷ ಪಡುತ್ತೇನೆ, ಖಾಯಂ ಆಗಿ ನೀವು ನನ್ನನ್ನು ಬೈಯ್ಯುವವರೇ ಆಗಿರಿ. ನಾನು ಬೈಯ್ಯಿಸಿಕೊಳ್ಳುವ ಜಾಗದಲ್ಲೇ ಇರುತ್ತೇನೆಂದು ಹೇಳಿ, ಅಧ್ಯಕ್ಷರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನನ್ನ ಬೇಡಿಕೆಗೆ ದಯವಿಟ್ಟು ತಾವೆಲ್ಲರೂ ಒಪ್ಪಿಗೆ ಕೊಡಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಎ.ಮಲ್ಲಿಕಾರ್ಜುನ ಖರ್ಗೆ (ವಿರೋಧಪಕ್ಷದ ನಾಯಕರು): ಒಂದೇ ಒಂದು ತಾವು ಇದರ ಬಗ್ಗೆ ಹೇಳಲಿಲ್ಲ. ಬೇರೆಯವರು ಮಾತನಾಡಿಲ್ಲವೆಂದು ಹೇಳಿ ಬಹುಶಃ ತಾವು ಇದರ ಬಗ್ಗೆ ಹೇಳಬಹುದು. ಹಿಂದೆ ನನಗೆ ನಾಲ್ಕೈದು ತಿಂಗಳ ಹಿಂದೆ ಎಸ್‌ಸಿಪಿ ಅಮೌಂಟ್ ಎಂದು ಇದಕ್ಕೆ ಒಂದು ಸ್ಪೆಷಲ್ ಫಂಡ್ ಕ್ರಿಯೇಟ್ ಮಾಡಿ ಎಲ್ಲಾ ಸಂಸ್ಥೆಗಳಲ್ಲಿ ಸರ್ಕಾರದವರೇ ಸೋಮೋಟೋ ಮೆಂಬರ್ಸ್ ಮಾಡಬೇಕೆಂದು ಮಾಡಿದ್ದೇವೆ. ಅದಕ್ಕೆ ಹಿಂದೆ ಒಂದು ಸಲಹೆ ಒಂದು ಕೋಟಿ ಇದ್ದುದನ್ನು ಪುನಃ ಎನ್‌ಹ್ಯಾನ್ಸ್ ಮಾಡಿ ಮತ್ತೆ ಮೂರು ಕೋಟಿ ರೂಪಾಯಿಗಳವರೆಗೆ ಹಣ ಒದಗಿಸಿದ್ದೀರಿ. ಇದನ್ನು ಈ ಸಾರಿ ನೀವು ಅಷ್ಟೊಂದು ಹಣ ಕೊಡತಕ್ಕಂತಹ ವ್ಯವಸ್ಥೆ ಮಾಡಲಿಲ್ಲ. ಎರಡು ವರ್ಷಗಳಿಂದ ತಾವು ಕಡಿಮೆ ಮಾಡಿದ್ದೀರಿ, ಮತ್ತು ಈ ಡ್ರೈವ್ ಏನಿತ್ತು, ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯುಟಿ ರಿಜಿಸ್ಟ್ರಾರ್ ಅವರೇ ಹೋಗಿ ಅವರೇ ಸ್ವತಃ ಎನ್‌ರೋಲ್ ಮಾಡಬೇಕೆಂದು ಆದೇಶ ಕೊಟ್ಟಿದ್ದೇವೆ. ಅದರ ಪ್ರಕಾರ ಸುಮಾರು ಐದಾರು ತಿಂಗಳಲ್ಲಿ ಸಾಕಷ್ಟು ಜನ ಸದಸ್ಯರಾದರು. ಈಗ ಅದನ್ನು ಏಕೆ ತಾವು ಸ್ಲೋ ಮಾಡಿದಿರಿ. ಅದು ಒಂದು. ಎರಡನೆಯದು 23 ಪರ್ಸೆಂಟ್ ರಿಸರ್ವೇಷನ್ ಪ್ರತಿ ಕೋ-ಆಪರೇಟಿವ್ ಬ್ಯಾಂಕಿನಲ್ಲಾಗಲಿ, ಫೆಡರೇಷನ್‌ನಲ್ಲಾಗಲಿ ಎಲ್ಲಾ ಕಡೆ ರಿಕ್ರೂಟ್‌ಮೆಂಟ್ ಮಾಡಬೇಕು. ಏಕೆಂದರೆ ಬಹಳಷ್ಟು ಜನ ಇದನ್ನು ಅಲ್ಲಗಳೆದು ತಮಗೆ ಬೇಕಾದವರಿಗೆ ಟೆಂಪರರಿಯಾಗಿ ಮೊದಲು ಅಪಾಯಿಂಟ್‌ಮೆಂಟ್ ಮಾಡಿಕೊಂಡು ಆ ಮೇಲೆ ರೆಗ್ಯುಲರೈಸ್ ಮಾಡುವುದು. ಅದಕ್ಕೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕಾಗಲಿ, ರೆಗ್ಯುಲರ್ ಡಿಸಿಸಿ ಬ್ಯಾಂಕ್‌ಗಳಲ್ಲಾಗಲಿ, ಪಿಎಲ್‌ಡಿಬಿ ಇವೆಲ್ಲದರಲ್ಲಿ ಕೂಡ ಮಾಡಬೇಕೆಂದು ಸರ್ಕಾರದ ಆದೇಶ ಇದೆ. ಹಾಗೆ ಆದೇಶ ಇದ್ದರೂ ಕೂಡ ಅನೇಕ ಜನ ಇದು ವಯಲೇಟ್ ಮಾಡಿ ತಮಗೆ ಬೇಕಾದ ಜನರನ್ನು ಅಪಾಯಿಂಟ್ ಮಾಡತಕ್ಕಂಥದ್ದು ಮಾಡುತ್ತಿದ್ದಾರೆ. ಯಾರಾದರೂ ನೀವು ಇದನ್ನು ರಿಕ್ರೂಟ್ ಮಾಡಿ ಎಂದು ಇಲ್ಲಿಂದ ಆದೇಶ ಕೊಟ್ಟರೆ ಅದನ್ನು ತಪ್ಪಿಸಿಕೊಂಡು ಅವರು ಕೆಲವು ದಿವಸ ಪೋಸ್ಟ್‌ಪೋನ್ ಮಾಡುವುದು, ಇಲ್ಲದಿದ್ದರೆ ತಪ್ಪು ಅಡ್ವರ್ಟೈಸ್‌ಮೆಂಟ್ ಕೊಟ್ಟು ತಮಗೆ ಬೇಕಾದ ಹಾಗೆ ಸರಿಪಡಿಸುವುದು ನಡೆಯುತ್ತಿದೆ. ಮಂಡ್ಯದ ಒಂದು ಉದಾಹರಣೆ ತಮಗೆ ಕೊಡುತ್ತೇನೆ. ಮಂಡ್ಯದಲ್ಲಿ ಇದೇ ರೀತಿಯಾಗಿ ಮಾಡಿದರು. ಒಂದು ಅಥವಾ ಎರಡು ವೇಕೆನ್ಸಿ ತೋರಿಸುವುದು, ತೆಗೆದುಕೊಳ್ಳುವಾಗ ಅವರಿಗೆ ಬೇಕಾದವರು ಇದ್ದರೆ ಜನರಲ್‌ನಲ್ಲಿ ಜಾಸ್ತಿ ತೆಗೆದುಕೊಳ್ಳುವುದು ಇಲ್ಲಿ ಮಾತ್ರ ಒಂದು, ಎರಡು ಮಾಡುವುದು. ಈ ರೀತಿ ಈ ಇಲಾಖೆಯಲ್ಲಿ ಅನ್ಯಾಯವಾಗುತ್ತಿದೆ. ಅದಕ್ಕೆ ದಯವಿಟ್ಟು ಆ ಎರಡು ಯೋಜನೆಗಳು ಸ್ಲೋ ಏಕೆ ಆಗಿವೆ, ಕೈ ತಪ್ಪಿ ಏಕೆ ಹೋಗಿವೆ ಎನ್ನತಕ್ಕಂಥದ್ದು ಹೇಳಬೇಕು.

ಅಧ್ಯಕ್ಷರು: ಮಂತ್ರಿಗಳೇ, ನಾನು ಈಗ ಕ್ಲಾರಿಫಿಕೇಷನ್ ಕೇಳುವ ಸಲುವಾಗಿ ಮೂರ್ನಾಲ್ಕು ಸದಸ್ಯರುಗಳಿಗೆ ಅವಕಾಶ ಕೊಡುತ್ತೇನೆ. ತಾವು ಅದನ್ನು ನೋಟ್

ಮಾಡಿಕೊಂಡು ತದನಂತರ ಉತ್ತರ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್: ಆಗಲಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ನಾನು ಕೇಳಿರುವ ವಿಚಾರ ಬಹಳ ಪ್ರಮುಖವಾಗಿದೆ. ಮೊದಲು ಅದಕ್ಕೆ ಮಂತ್ರಿಗಳು ಉತ್ತರ ಕೊಟ್ಟುಬಿಡಲಿ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಸನ್ಮಾನ್ಯ ಸಭಾಧ್ಯಕ್ಷರೇ, ನಮ್ಮ ಸರ್ಕಾರ ಬಂದಮೇಲೆ ಎಲ್ಲಾ ಇಲಾಖೆಯಲ್ಲಿದ್ದಂಥದ್ದನ್ನೆಲ್ಲದನ್ನೂ ಒಂದು ಕಡೆ ಪೂಲ್ ಮಾಡಿ ಹರಿಜನರಿಗಾಗಿಯೇ ಒಂದು ವಿಶೇಷವಾದ ಸ್ಕೀಮನ್ನು ಮಾಡಬೇಕೆಂದು ತಿಳಿದುಕೊಂಡೇ ಇದನ್ನೆಲ್ಲಾ ತೆಗೆದುಕೊಂಡೆವು. ಸಮಾಜ ಕಲ್ಯಾಣ ಇಲಾಖೆಯವರಿಗೆ ಕೊಟ್ಟು ಅವರು ಗಂಗಾ ಕಲ್ಯಾಣ ಮಾಡುವುದು ಹಾಗೆಯೇ ಹರಿಜನರಿಗಾಗಿಯೇ ವಿಶೇಷವಾದಂಥ ಕಾರ್ಯಕ್ರಮಗಳನ್ನು ಎಲ್ಲಾ ಇಲಾಖೆಯಲ್ಲಿಯೂ ಪೂಲ್ ಮಾಡಿ ಅಲ್ಲಿ ತೆಗೆದುಕೊಂಡಿದ್ದಾರೆ. ಇದು ಒಂದು. ನಾನು ಬರುವುದಕ್ಕಿಂತ ಪೂರ್ವದಲ್ಲಿ ಏನು ನಡೆದಿದೆ ಎಂದು ನೋಡಿದಾಗ ಯಾರು ಯಾರನ್ನು ಸದಸ್ಯರನ್ನಾಗಿ ಮಾಡಿಕೊಂಡಿರುತ್ತಾರೋ ಅಂಥವರಿಗೆ ಸಾಲವನ್ನು ಕೊಟ್ಟಿರಲಿಲ್ಲ. ನಾನು ಕೇಳಿದೆ ಇಂಥವರನ್ನು ಸದಸ್ಯರನ್ನಾಗಿ ಮಾಡಿಕೊಂಡಿದ್ದೀರಿ, ಇವರಿಗೇನಾದರೂ ಸಾಲ ಕೊಟ್ಟಿದ್ದೀರಾ ಎಂದು ಇಲ್ಲವೆನ್ನುವ ಉತ್ತರ ಬಂತು. ಅದಕ್ಕೆ ನಾನು ಏನು ಹೇಳಿದೆನೆಂದರೆ ನೀವು 1000 ಮಂದಿಯನ್ನು ಸದಸ್ಯರುಗಳನ್ನಾಗಿ ಮಾಡಿಕೊಳ್ಳುವ ಬದಲು ಯಾವ ರೈತನಿಗೆ ಕೃಷಿಗೆ ಬೇಕಾದ ಪದಾರ್ಥವಿರಬಹುದು ಅಥವಾ ಎಮ್ಮೆ ಬೇಕಾಗಬಹುದು, ಆ ರೀತಿ ಬೇಕಾದಾಗ ಅದಕ್ಕೆ ನೀವು ಶೇರು ತುಂಬಿ, ಎಂದೆ, ಮೊದಲು ತುಂಬುವುದಕ್ಕಾಗದೇ ಶೇರು ಮುರಿದುಕೊಳ್ಳುತ್ತಿದ್ದರು, ಕೇವಲ 10 ರೂ.ಗಳನ್ನು ಕೊಡುವುದು ಬೇಡವೆಂದು ಹೇಳಿ ನನ್ನ ಯೋಚನೆಯನ್ನು ಜಾರಿಗೆ ತರುವುದರೊಳಗೆ ಪೂಲ್ ಮಾಡಿ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಂಥ ಸದಸ್ಯರು ಆಡಳಿತದಲ್ಲಿ ಇದ್ದರೆ ಅವರಿಗೆ ಓಟಿಂಗ್ ಪವರ್ಸ್ ಇರುತ್ತದೆಯಾದ ಕಾರಣ ಅವರುಗಳೇ ಡೈರೆಕ್ಟರ್ ಆಗುತ್ತಿದ್ದರು ಅಥವಾ ನೀವು ಡೈರೆಕ್ಟರ್ ಆದರೆ ನೀವೂ ಹೋಗುತ್ತೀರಿ ಎನ್ನುವ ದೃಷ್ಟಿಕೋನವು ಇತ್ತು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ನಾನು ಇಲ್ಲವೆಂದು ಹೇಳಲಿಲ್ಲ. ನೀವು ಹೇಳುವ ವಿಷಯದ ಬಗ್ಗೆ ನನ್ನ ತಕರಾರೇನೂ ಇಲ್ಲ. ಆದರೆ ಈ ಉದ್ದೇಶಕ್ಕಾಗಿ ಅದನ್ನು ಪೂಲ್ ಮಾಡಿ ಅವರಿಗೆ ಬೆನಿಫಿಟ್ ಮಾಡಬೇಕೆನ್ನುವ ದೃಷ್ಟಿಯಿಂದ ಒಂದು ಕಡೆ ಪೂಲ್ ಮಾಡಿಕೊಂಡಿದ್ದು ತಮಗೂ ಗೊತ್ತಿದೆ. ಇದರ ಬಗ್ಗೆ ತಮಗೂ ಕೆಲವು ಸಂದರ್ಭಗಳಲ್ಲಿ ಈ ಸದನದಲ್ಲಿ ಉತ್ತರವನ್ನೂ ಕೊಟ್ಟಿದ್ದಾರೆ. ಮತ್ತೆ ನಾವು ಎಲ್ಲೆಲ್ಲಿ ಆ ರೀತಿ ಕೊಟ್ಟಿದ್ದೇವೆ ಅದನ್ನು ರೋಸ್ಟರ್ ಪ್ರಕಾರವೇ ಕೊಟ್ಟಿದ್ದೇವೆ. ಎಲ್ಲೆಲ್ಲಿ ತಪ್ಪಾಗಿ

ತಕರಾರು ಬಂದಿತ್ತು ಅದನ್ನು ನಾನು ಸರಿ ಮಾಡಿಸಿದ್ದೇನೆ. ತಮಗೂ ಗೊತ್ತಿದೆ, ತಾವು ಒಂದು ಕೇಸ್ ಬಗ್ಗೆ ಬರೆದ ಕೂಡಲೇ ಆತನನ್ನು ಸಸ್ಪೆಂಡ್ ಮಾಡಿಸಿ ಎನ್‌ಕ್ವೈರಿ ನಡೆಸುತ್ತಿದ್ದೇವೆ. ಅದು ಬಂದ ತಕ್ಷಣ ರೋಸ್ಟರ್ ಬರುತ್ತದೆಯಾದ ಕಾರಣ ಆಗ ರೋಸ್ಟರ್ ಪ್ರಕಾರ ತುಂಬುವಂಥ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ಅರ್ಬನ್ ಬ್ಯಾಂಕ್‌ಗೆ ಸಂಬಂಧಪಟ್ಟಂತೆ ಹೇಳಿದ್ದೀರಿ. ಅದರಲ್ಲಿ ಸರ್ಕಾರದ ಶೇರು ಇಲ್ಲದಿದ್ದಲ್ಲಿ 50 ಪರ್ಸೆಂಟ್ ಕಡಿಮೆ ಇದ್ದಲ್ಲಿ ಮೀಸಲಾತಿ ಮಾಡುವ ಅವಶ್ಯಕತೆ ಬಗ್ಗೆ ಹೇಳಿದ್ದೀರಿ. ಇದಕ್ಕೆ ಸಂಬಂಧಪಟ್ಟಂತೆ ಅರ್ಬನ್ ಬ್ಯಾಂಕ್ಸ್‌ಗೆ ಹೈಕೋರ್ಟ್ ರೂಲ್ ಇದ್ದು ಅದರ ಪ್ರಕಾರ ಸರ್ಕಾರದ ಅಸಿಸ್ಟೆನ್ಸ್ ಇಲ್ಲದಿದ್ದಲ್ಲಿ ರೋಸ್ಟರ್ ಬೇಕಾಗಿಲ್ಲ ಎನ್ನಲಾಗಿದೆ. ಈ ಹೈಕೋರ್ಟ್ ರೂಲ್ ಪ್ರಕಾರ ಅವರು ಮಾತ್ರ ಮಾಡಿಕೊಳ್ಳುತ್ತಿಲ್ಲ. ಉಳಿದೆಲ್ಲಾ ಸಂಸ್ಥೆಗಳಲ್ಲಿಯೂ ಕೂಡ ನಾವು ರೋಸ್ಟರನ್ನು ಫಾಲೋ ಮಾಡುತ್ತಿದ್ದೇವೆ.

ಶ್ರೀ ಮಂಜುನಾಥ್ ಸಿ. ಕುನ್ನೂರ್ (ಶಿಗ್ಗಾಂವ್): ಅಧ್ಯಕ್ಷರೇ, ಗ್ರಾಮಾಂತರ ಪ್ರದೇಶಗಳಲ್ಲಿ ಸೊಸೈಟಿಗಳಿಂದ ಸಾಲ ಕೊಡತಕ್ಕಂಥದ್ದರ ಬಗ್ಗೆ ವ್ಯಾಪಾರಾಭಿವೃದ್ಧಿ ಯೋಜನೆ ಪ್ರಾರಂಭ ಮಾಡಿದುದರ ಬಗ್ಗೆ ಮಾನ್ಯ ಸಹಕಾರ ಸಚಿವರು ಹೇಳಿದ್ದಾರೆ. ಇದು ನಡೆದರೂ ಕೂಡ ಇಂದು ಫೈನಾನ್ಸ್ ಸಂಸ್ಥೆಗಳು ನಾಯಿಕೊಡೆಗಳಂತೆ ಹೆಚ್ಚಾಗಿ ನಡೆಯುತ್ತಿವೆ. ಈಗ ಋಣವಿಮೋಚನಾ ಕಾಯಿದೆಯನ್ನು ನಾವು ಬಂದ್ ಮಾಡಿದರೆ ಮತ್ತೊಂದು ಕಡೆ ತಮ್ಮ ಇಲಾಖೆ ಈ ಫೈನಾನ್ಸ್ ಕಾರ್ಪೊರೇಷನ್‌ಗಳನ್ನು ತೆಗೆಯಲು ಲೈಸೆನ್ಸನ್ನು ಕೊಟ್ಟು ಸಾಕಷ್ಟು ಜನರಿಗೆ ಶೋಷಣೆಯನ್ನು ಉಂಟುಮಾಡಲಾಗುತ್ತಿದೆ. ಆ ಕಾರಣಕ್ಕೋಸ್ಕರ ಇದನ್ನು ತಡೆಯಲು ತಾವು ಏನು ಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬ ಬಗ್ಗೆ ಸದನದಲ್ಲಿ ತಿಳಿಸಬೇಕು.

ಶ್ರೀ ಬಿ.ಆರ್.ಪಾಟೀಲ್ ಯತ್ನಾಳ್ (ಬಿಜಾಪುರ): ಮಾನ್ಯ ಅಧ್ಯಕ್ಷರೇ, ಈಗ ಒಂದು ಆದೇಶ ಕಂದಾಯ ಇಲಾಖೆ ಮುಖಾಂತರ ಆಗಿದ್ದು ರಾಜ್ಯದಲ್ಲಿರುವಂಥ ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕೆಗಳಿಗೆ ಏನು ಸಾಲವನ್ನು ಕೊಡಲಾಗಿರುತ್ತದೆ ಅದರ ಮೇಲಿನ ಮುದ್ರಾಂಕ ಶುಲ್ಕಕ್ಕೆ ವಿನಾಯಿತಿಯನ್ನು ಕೊಟ್ಟಿದ್ದಾರೆ. ಆದರೆ ಆ ಆದೇಶದಲ್ಲಿ ರಾಜ್ಯದಲ್ಲಿರುವಂಥ ಸಹಕಾರಿ ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವಂಥ ಸಾಲದ ಮೇಲೆ ಕೂಡ ಈ ಮುದ್ರಾಂಕ ಶುಲ್ಕದ ವಿನಾಯಿತಿಯನ್ನು ಕೊಟ್ಟಿಲ್ಲ. ಇದನ್ನು ಕೊಡಬೇಕೆಂದು ಸನ್ಮಾನ್ಯ ಸಚಿವರಿಗೂ ಕೂಡ ನಾನು ಪತ್ರವನ್ನು ಬರೆದಿದ್ದೆ. ದಯಮಾಡಿ ತಾವು ಕಂದಾಯ ಇಲಾಖಾ ಮಂತ್ರಿಗಳ ಜೊತೆ ಸಂಪರ್ಕ ಮಾಡಿ ಸಹಕಾರಿ ಬ್ಯಾಂಕ್‌ಗಳಿಂದ ತೆಗೆದುಕೊಂಡಿರುವಂಥ ಸಾಲಕ್ಕೂ ಕೂಡ ಈ ಮುದ್ರಾಂಕ ಶುಲ್ಕದ ವಿನಾಯಿತಿಯನ್ನು ಕೊಡಿಸಬೇಕು. ಇದನ್ನು ಮಾಡುವುದರಿಂದ ಸಣ್ಣ ಹಾಗೂ ಅತಿ ಸಣ್ಣ ಕೈಗಾರಿಕೆಗಳ ಫಲಾನುಭವಿಗಳಿಗೆ ಅನುಕೂಲವಾಗಿ ಕೈಗಾರಿಕ ದೃಷ್ಟಿಯಿಂದ ಸಹಕಾರಿ ವ್ಯವಸ್ಥೆ ಕೂಡ ಇವರಿಗೆ ಅನುಕೂಲವನ್ನು ಮಾಡಿಕೊಟ್ಟ ಹಾಗೆ ಆಗುತ್ತದೆನ್ನುವ ದೃಷ್ಟಿಯಿಂದ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೇ, ಸಹಕಾರಿ ಸಂಘಗಳಲ್ಲಿ ಬಡ್ಡಿ ಜಾಸ್ತಿ ವಿಧಿಸುವ ವಿಷಯ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಡಿ.ಸಿ.ಸಿ. ಬ್ಯಾಂಕ್‌ಗಳಲ್ಲಿ ಪುನಃಶ್ಚೇತನ ಆಗಿದೆಯೆಂದರೆ ನೀವು ಅದಕ್ಕೆ ಬಡ್ಡಿ ಜಾಸ್ತಿ ಮಾಡಿಕೊಟ್ಟಿದ್ದೀರಿ. ಆ ಕಾರಣದಿಂದ ಇವುಗಳ ಶಕ್ತಿ ಜಾಸ್ತಿಯಾಗಿದೆಯೇ ಹೊರತು ರೈತರ ಶಕ್ತಿ ಜಾಸ್ತಿಯಾಗದೇ ಕಡಿಮೆಯಾಗುತ್ತಿದೆ. ಇಂದು ಸಹಕಾರಿ ಸಂಘಗಳಲ್ಲಿ ಕಮರ್ಷಿಯಲ್ ಬ್ಯಾಂಕ್‌ಗಳಿಗಿಂತ ಹೆಚ್ಚು ಬಡ್ಡಿಯಾಗಿದೆ. ಇದನ್ನು ಸರಿ ಮಾಡುವಂಥ ರೀತಿಯಲ್ಲಿ ನೀವು ಕ್ರಮ ತೆಗೆದುಕೊಳ್ಳಬೇಕು. ಇನ್ನು ಸಹಕಾರಿ ಯೂನಿಯನ್ನನ್ನು ಬಲಪಡಿಸುವುದಕ್ಕಾಗಿ ನಿಮ್ಮ ಕಾರ್ಯಕ್ರಮವೇನು ಎಂದು ಕೇಳಿದ್ದೆ. ಆದರೆ ಅದಕ್ಕೆ ಉತ್ತರವನ್ನು ಕೊಡಲಿಲ್ಲ. ಇನ್ನು ಫೆಡರೇಷನ್ ಏನಿದೆ ಅದಕ್ಕೆ ಕಳೆದ 13 ವರ್ಷಗಳಿಂದ ಚುನಾವಣೆಯೇ ಆಗಿಲ್ಲ. ಅದಕ್ಕೆ ಚುನಾವಣೆ ಮಾಡುವುದಕ್ಕೆ ನೀವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಕೇಳಿದ್ದೆ. ಅದಕ್ಕೂ ತಾವು ಉತ್ತರ ಕೊಡಲಿಲ್ಲ. ಇನ್ನು ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರ ಕೆಲಸವೇನು ಎಂದು ಕೇಳಿದ್ದೆ. ಏಕೆಂದರೆ ಯಾವುದೇ ಒಂದು ಸೊಸೈಟಿ ಇದ್ದಕ್ಕಿದ್ದ ಹಾಗೆ ಪಾಪರ್ ಆಗುವುದಿಲ್ಲ. ಲಕ್ಷಾಂತರ ರೂ.ಗಳು ತಕ್ಷಣ ಲಾಸ್ ಆಗುವುದಿಲ್ಲ, ಇದಕ್ಕೆ ಎಷ್ಟೋ ವರ್ಷಗಳು ಬೇಕಾಗುತ್ತವೆ. ಇದರ ಬಗ್ಗೆ ಈ ಅಧಿಕಾರಿಗಳು ಅಲ್ಲಿಗೆ ಹೋಗಿ ನೋಡುವುದೇ ಇಲ್ಲ. ಆದುದರಿಂದ ಈ ಅಧಿಕಾರಿಗಳಿಗೆ ಏನಾದರೂ ಹೊಣೆಗಾರಿಕೆಯನ್ನು ಫಿಕ್ಸ್ ಮಾಡುತ್ತೀರಾ? ಒಂದು ಸೊಸೈಟಿಯಲ್ಲಿ ದೊಡ್ಡ ಪ್ರಮಾಣದಲ್ಲಿ ಅವ್ಯವಹಾರ ನಡೆದಾಗ ಅಥವಾ ಅದು ಪಾಪರ್ ಆದರೆ ಈ ಅಧಿಕಾರಿಗಳಿಗೆ ನೀವೇನಾದರೂ ಹೊಣೆಗಾರಿಕೆಯನ್ನು ಫಿಕ್ಸ್ ಮಾಡುತ್ತೀರಾ? ನಿಮ್ಮ ಸಿ.ಎ.ಓ.ಗಳೇ ಅಲ್ಲಿ ಇರುತ್ತಾರೆ, ಅವರಿಗೆ ಹೊಣೆಗಾರಿಕೆಯನ್ನು ಫಿಕ್ಸ್ ಮಾಡಿದ್ದೇ ಆದರೆ ಆಗ ಮಾತ್ರ ಕೆಲಸವನ್ನು ಸರಿಯಾಗಿ ಮಾಡುವುದಕ್ಕೆ ಆಗುತ್ತದೆ ಎನ್ನುವಂಥ ಮಾತನ್ನು ಹೇಳಲು ಬಯಸುತ್ತೇನೆ. ಇನ್ನು ನಮ್ಮ ಮಂಜುನಾಥ್ ಸಿ. ಕುನ್ನೂರ್‌ರವರು ಹೇಳಿದ ಹಾಗೆ ಇಂದು ಡೆಪ್ಯುಟಿ ರಿಜಿಸ್ಟ್ರಾರ್ ಮತ್ತು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರುಗಳು ಈ ಫೈನಾನ್ಸ್ ಕಾರ್ಪೊರೇಷನ್‌ಗಳನ್ನು ತೆಗೆಯುವರಿಗೆ ಲೈಸೆನ್ಸನ್ನು ಕೊಡುವುದು ಮತ್ತು ಲೈಸೆನ್ಸನ್ನು ರೀನ್ಯೂವಲ್ ಮಾಡುವುದು, ಈ ಕೆಲಸವನ್ನೇ ಮಾತ್ರ ಅವರು ಮಾಡುತ್ತಿದ್ದಾರೆ. ಒಬ್ಬ ಡೆಪ್ಯೂಟಿ ರಿಜಿಸ್ಟ್ರಾರ್‌ರವರ ದುಡಿಮೆ ಎಷ್ಟು ಎಂಬುದು ನಿಮಗೂ ಕೂಡ ಗೊತ್ತಿದೆ. ಇವೊತ್ತು ಇವರಿಗೆ ನಮ್ಮ ಕೋ-ಆಪರೇಟಿವ್ ಸೊಸೈಟಿಗಳ ಅಗತ್ಯವೇ ಇಲ್ಲ. ಫೈನಾನ್ಸ್ ಕಾರ್ಪೊರೇಷನ್‌ಗಳನ್ನು ಹುಟ್ಟುಹಾಕುವುದು ಮತ್ತು ಅವುಗಳನ್ನು ಪೋಷಿಸುವ ಕಡೆಯೇ ಈ ಅಧಿಕಾರಿಗಳು ಹೆಚ್ಚು ಗಮನವನ್ನು ಕೊಡುತ್ತಿದ್ದಾರೆಯಾದ ಕಾರಣ ನೀವು ಇಂಥ ಫೈನಾನ್ಸ್ ಕಾರ್ಪೊರೇಷನ್‌ಗಳನ್ನು ರಿಜಿಸ್ಟ್ರೇಷನ್ ಮಾಡುವುದಕ್ಕೆ ಬೇರೆ ವಿಂಗನ್ನು ಮಾಡಿ ಇವರನ್ನು ಮಾತ್ರ ಸೊಸೈಟಿಗಳ ಗಮನಕ್ಕೆ ಕೆಲಸ ಮಾಡುವಂತೆ ಮಾಡಿಕೊಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಮಾನ್ಯ ಅಧ್ಯಕ್ಷರೇ, ನಮ್ಮ

ಭಾಗದಲ್ಲಿ ಮಳೆ ಕಡಿಮೆ ಆಗಿದ್ದ ಕಾರಣ ಸರ್ಕಾರ ರೆಮಿಶನ್ ಮಾಡಿ ಖುಷ್ಕಿ ಬೆಳೆಗಳಿಗೆ ಮಾತ್ರ ಕಂತನ್ನು ನಿಗಧಿಮಾಡಿ ಬಡ್ಡಿ ಕಟ್ಟಿ ಅಸಲನ್ನು ಮಾತ್ರ ಮೂರು ಕಂತುಗಳಲ್ಲಿ ಕಟ್ಟಿ ಎಂದು ಹೇಳಿದ್ದಾರೆ. ಇದರ ಬಗ್ಗೆ ನಾನು ಸನ್ಮಾನ್ಯ ಸಚಿವರಲ್ಲಿ ಕೇಳಿಕೊಂಡೆ, ಖುಷ್ಕಿ ಬೆಳೆಯಷ್ಟೇ ಪ್ರಾಮುಖ್ಯವಾದ ತೋಟಗಾರಿಕೆ ಬೆಳೆ ಮತ್ತು ನಮ್ಮಲ್ಲಿ ಸ್ಟ್ಯಾಂಡಿಂಗ್ ಕ್ರಾಪ್ ಏನಿತ್ತೋ ಅದಕ್ಕೆ ಮಳೆ ಇಲ್ಲದೇ ಬಹಳ ಹೊಡೆತ ಬಿದ್ದಿದೆ. ನಬಾರ್ಡನ್ನು ನೀವು ಇಂದು ತೋರಿಸಿಕೊಂಡು ಕಂತುಗಳನ್ನು ಟೈಮನ್ನು ಕೊಡುವುದಕ್ಕೆ ಆಗುವುದಿಲ್ಲ ಸಾಲವನ್ನು ಮರುಪಾವತಿ ಮಾಡಬೇಕು ಎಂದರೆ ನಮ್ಮ ಭಾಗದ ಜನಗಳಿಗೆ ಇದರಿಂದಾಗಿ ಹಣವನ್ನು ಕಟ್ಟುವುದಕ್ಕೆ ಬಹಳ ತೊಂದರೆಯಾಗಿದೆ. ಮತ್ತೆ ಇಲ್ಲಿ ಒಂದು ತೊಂದರೆಯಾಗಿದೆ. ಸ್ಕೇಲ್ ಆಫ್ ಫೈನಾನ್ಸ್ ನೋಡಿಬಿಟ್ಟು ರಾಗಿ ಬೆಳೆಯುವವನೂ ಕೂಡ ತೋಟ ಇದೆ, ಬಾಳೆ ಇದೆ ಎಂದು ಬರೆಸಿಬಿಟ್ಟು ಜಾಸ್ತಿ ಸಾಲವನ್ನು ತೆಗೆದುಕೊಂಡುಬಿಟ್ಟಿದ್ದೇವೆ. ಇವೊತ್ತು ನೀವೇನು ರೆಮಿಶನ್ ಮಾಡಿ ರೈತರಿಗೆ ಅನುಕೂಲವಾಗಿದೆ ಬರಗಾಲದ ಕಾರಣ ನಾವು ಕಂತಿನ ವ್ಯವಸ್ಥೆಯನ್ನು ಮಾಡಿಕೊಟ್ಟಿದ್ದೇವೆ ಎಂದರೆ ಇದರಿಂದಾಗಿ ನಮಗೆ ಶೇಕಡ 10ರಿಂದ 20ರಷ್ಟಾದರೂ ಅನುಕೂಲ ನಮ್ಮ ಭಾಗದವರಿಗಾಗಿಲ್ಲ. ಆದುದರಿಂದ ತಾವು ಇದರ ಬಗ್ಗೆ ವಿಚಾರ ಮಾಡಿ ಈ ಮಳೆಗಾಲದಲ್ಲಿ ಮಳೆ ಬರದೇ ಯಾವುದೇ ಬೆಳೆ ನಷ್ಟವಾಗಿದ್ದರೂ ಕೂಡ ಅದು ತೋಟಗಾರಿಕೆ ಬೆಳೆಯಾಗಿರಲಿ ಅಥವಾ ಇನ್ಯಾವುದೇ ಬೆಳೆಯಾಗಿದ್ದರೂ ಕೂಡ ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಸಂಬಂಧಪಟ್ಟಂತೆ ಅಧಿಕ ಕಂತುಗಳ ವ್ಯವಸ್ಥೆಯನ್ನು ಮಾಡಿಕೊಡಬೇಕು ಮತ್ತು ಕಂತು ಮತ್ತು ಬಡ್ಡಿ ಕಟ್ಟಬೇಕಾದ ಅವಧಿ ಈಗಾಗಲೇ ಮಾರ್ಚ್ 31ಕ್ಕೆ ಮುಗಿದುಹೋಗಿದೆ. ಈ ಅವಧಿಯನ್ನು ಕಡೇ ಪಕ್ಷ ಜೂನ್ ತಿಂಗಳ ಕೊನೆಯವರೆಗೂ ಎಕ್ಸ್‌ಟೆಂಡ್ ಮಾಡಬೇಕು. ಇದಲ್ಲದೇ ಆ ಭಾಗದಲ್ಲಿ ಯಾವುದೇ ಬೆಳೆ ನಷ್ಟವಾಗಿದ್ದರೂ ಕೂಡ ಅದರ ಮೇಲೆ ತೆಗೆದುಕೊಂಡ ಸಾಲವನ್ನು ಕಟ್ಟುವುದಕ್ಕೆ ಅಧಿಕ ಕಂತುಗಳನ್ನು ಕೊಡುವುದಕ್ಕೆ ಪುನರ್‌ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ (ಚಾಮರಾಜಪೇಟೆ): ಮಾನ್ಯ ಅಧ್ಯಕ್ಷರೇ, ಈ ಟೆಲಿಗ್ರಾಫ್ ಸೊಸೈಟಿಯಲ್ಲಿರತಕ್ಕಂಥ 400ಕ್ಕಿಂತ ಹೆಚ್ಚು ನಿವೃತ್ತ ನೌಕರರು ಫಿಕ್ಸೆಡ್ ಡಿಪಾಸಿಟನ್ನು ಇಟ್ಟಿದ್ದರು. ಯಾರು ಆ ಕಂಪ್ಲೆಂಟ್ ಕೊಟ್ಟಿದ್ದರೋ ಅವರನ್ನೇ ಸ್ಪೆಷಲ್ ಆಫೀಸರನ್ನಾಗಿ ಮಾಡಿ ಈ ಫಿಕ್ಸೆಡ್ ಡಿಫಾಸಿಟನ್ನು ಏನು ಇಟ್ಟಿದ್ದಾರೆ ಆ 400ಕ್ಕಿಂತ ನಿವೃತ್ತ ನೌಕರರಿಗೆ ಒಂದು ವರ್ಷದಿಂದ ಆ ದುಡ್ಡು ಬಂದಿಲ್ಲ ಅಥವಾ ಬಡ್ಡಿಯೂ ಕೂಡ ಬರದೇ ಅವರಿಗೆ ಜೀವನಕ್ಕೆ ಕಷ್ಟವಾಗಿದೆಯೆಂದು ಪ್ರಸ್ತಾಪ ಮಾಡಿದ್ದೆ. ರಿಜಿಸ್ಟ್ರಾರ್ ಈಗಾಗಲೇ ಆ ಹಣವನ್ನು ರಿಟರ್ನ್ ಮಾಡಬೇಕೆಂದು ಆರ್ಡರ್ ಮಾಡಿದ್ದಾರೆ. ಒಂದು ವರ್ಷದಿಂದ ಈ ನಿವೃತ್ತ ನೌಕರರಿಗೆ ಊಟಕ್ಕೂ ಕೂಡ ಬಹಳ ಕಷ್ಟವಾಗಿದೆ. ಅದರ ಬಗ್ಗೆ ದಯವಿಟ್ಟು ಉತ್ತರ ಕೊಡಬೇಕು.

ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮಂತ್ರಿಗಳಿಗೆ

ಎರಡು ಸೂಚನೆಗಳನ್ನು ಕೊಟ್ಟಿದ್ದೆ. ರೂಲ್ 17ನ್ನು ಅಮೆಂಡ್‌ಮೆಂಟ್ ಮಾಡಿ ಈ ಕೇಡರ್ ಸ್ಟ್ರೆಂಗ್ತ್ ಮತ್ತು ಪೇಸ್ಕೇಲ್ ಅಪ್ರೂವ್ ಮಾಡುವಂಥ ಅಧಿಕಾರ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗೆ, ಡೆಪ್ಯುಟಿ ರಿಜಿಸ್ಟ್ರಾರ್‌ಗೆ, ಜಾಯಿಂಟ್ ರಿಜಿಸ್ಟ್ರಾರ್‌ಗೆ ಮತ್ತು ರಿಜಿಸ್ಟ್ರಾರ್‌ಗೆ ಹಂತಹಂತವಾಗಿ ಏನಿತ್ತು ಅದೆಲ್ಲವನ್ನೂ ಕಿತ್ತುಕೊಂಡು ಈಗ ಅದನ್ನು ಸರ್ಕಾರಕ್ಕೆ ತೆಗೆದುಕೊಂಡಿದ್ದಾರೆ. ಇದರಿಂದಾಗಿ 26 ಸಾವಿರ ಸೊಸೈಟಿಗಳು ನೇರವಾಗಿ ಸರ್ಕಾರಕ್ಕೆ ತಮ್ಮ ಪ್ರಪೋಸಲನ್ನು ಕಳುಹಿಸಬೇಕಾಗುತ್ತದೆ. ಇದು ಸೆಂಟ್ರಲೈಸ್ ಆಗುತ್ತದೆ. ಆಡಳಿತ ದೃಷ್ಟಿಯಿಂದ ಇದನ್ನು ವಿಕೇಂದ್ರೀಕರಣ ಮಾಡುವ ಸಲುವಾಗಿ ನೀವೇನು ಈಗ ಸೆಂಟ್ರಲೈಸ್ ಮಾಡಿಕೊಂಡಿದ್ದೀರಿ ಅದನ್ನು ತೆಗೆಯುವ ಸಲುವಾಗಿ ಪುನರ್‌ಪರಿಶೀಲನೆಯನ್ನು ಮಾಡಬೇಕೆಂದು ವಿನಂತಿ ಮಾಡಿದ್ದೆ. ಈ ಸೂಚನೆಗೆ ಅವರು ಒಪ್ಪದೇ ಇದನ್ನು ಹಾಗೆಯೇ ಇಟ್ಟುಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದಾರೆ. ಆದರೆ ಇದರ ಬಗ್ಗೆ ಮತ್ತೊಮ್ಮೆ ಪರಿಶೀಲನೆ ಮಾಡಿ ಅದನ್ನು ಕೈಬಿಡಬೇಕು. ಇನ್ನು ಬೋರ್ಡ್ ಆಫ್ ಡೈರಕ್ಟರ್ಸ್ ಬಗ್ಗೆ ಈಗಾಗಲೇ ರಿಜಿಸ್ಟ್ರಾರ್‌ರವರಿಂದ ಒಂದು ಆರ್ಡರ್ ಹೊರಡಿಸಿ ಫಿಕ್ಸ್ ಮಾಡಿದ್ದೀರಲ್ಲಾ ಅದರ ಬಗ್ಗೆ ಹೇಳುವುದೆಂದರೆ ಒಂದು ಗ್ರಾಮೀಣ ಪ್ರದೇಶದಲ್ಲಿರುವಂಥ ಸಹಕಾರಿ ಸಂಘಕ್ಕೆ 9 ಮಂದಿ ಡೈರಕ್ಟರ್ ಆಗಬಹುದು. ಆದರೆ ಜಿಲ್ಲಾ ವ್ಯಾಪ್ತಿಯ ಸಹಕಾರಿ ಸಂಘಕ್ಕೆ ತಾವು 11 ಮಂದಿ ಡೈರಕ್ಟರ್‌ಗಳಿಗೆ ರಿಸ್ಟ್ರಿಕ್ಟ್ ಮಾಡಿದ್ದೀರಿ. ನೀವು ದಯವಿಟ್ಟು ಜಿಲ್ಲಾವ್ಯಾಪ್ತಿಯಲ್ಲಿ ಸಹಕಾರಿ ಸಂಘದ ಕಾರ್ಯವ್ಯಾಪ್ತಿಯನ್ನು ನೋಡಬೇಕು. ಜಿಲ್ಲೆಯಲ್ಲಿದ್ದರೆ ಸ್ವಲ್ಪ ಹೆಚ್ಚು ರೆಪ್ರೆಸೆಂಟೇಷನ್ ಕೊಡಬೇಕಾಗುತ್ತದೆ. ನೀವು 11ಕ್ಕೇ ರಿಸ್ಟ್ರಿಕ್ಟ್ ಮಾಡಿದರೆ ಅದು ಸರಿಯಾಗುವುದಿಲ್ಲ. ಅದನ್ನು 18 ಅಥವಾ 20 ಮಾಡಿದರೆ ಪ್ರಯೋಜನವಾಗುತ್ತದೆ. ಇವೆರಡನ್ನೂ ತಾವು ಪುನರ್‌ಪರಿಶೀಲನೆಯನ್ನು ಮಾಡಬೇಕು. ಒಂದು ವೇಳೆ ಈ ಸೂಚನೆಯನ್ನು ಡಿ.ಆರ್.ಪಾಟೀಲ್‌ರವರು ಕೊಟ್ಟಿರುವುದರಿಂದ ಇದನ್ನು ಒಪ್ಪಬಾರದು ಎಂಬ ಮನಸ್ಸು ತಮ್ಮದಾಗಿದ್ದರೆ ನೀವು ಬೇಕಾದರೆ ಸಿ.ಎಂ.ಉದಾಸಿಯವರನ್ನೋ, ಶಿವಪ್ಪನವರನ್ನೋ ಅಥವಾ ಉಮೇಶ್ ಕತ್ತಿಯವರನ್ನೋ, ರೇವಣ್ಣನವರನ್ನೋ ಅಥವಾ ನಿಮ್ಮ ಕ್ಯಾಬಿನೆಟ್‌ನಲ್ಲಿರುವಂಥ ಸಹಕಾರಿ ರಂಗದಲ್ಲಿ ಕೆಲಸ ಮಾಡುವಂಥ ಸಚಿವರನ್ನು ಕೇಳಿಯೇ ಇದು ಯೋಗ್ಯವೋ ಅಥವಾ ಅಯೋಗ್ಯವೋ ಎಂಬುದನ್ನು ತಾವು ಪುನರ್‌ವಿಮರ್ಶೆ ಮಾಡಿ ನಿರ್ಧಾರ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ಬಸವರಾಜ್ (ವಿರಾಜಪೇಟೆ): ಮಾನ್ಯ ಅಧ್ಯಕ್ಷರೇ, ಚರ್ಚೆಯ ಸಂದರ್ಭದಲ್ಲಿ ಮಾನ್ಯಶ್ರೀ ಡಿ.ಆರ್.ಪಾಟೀಲರವರು ಮಾತನಾಡಿ ಪರಿಶಿಷ್ಟ ಜಾತಿಯವರಿಗೆಯೇ ಇದ್ದಂಥ ಸಹಕಾರಿ ಇಲಾಖೆ ಮೂಲಕ ಧನ ಸಹಾಯವನ್ನು ಮಾಡುತ್ತಿದ್ದಂಥ ಕೆಲವು ಇಲಾಖೆಗಳು ಇಲ್ಲಿ ಪ್ರಸ್ತಾವನೆ ಮಾಡಿದರು. ಆ ಇಲಾಖೆಗಳಿಗೆ ಪ್ರಸಕ್ತ ಸಾಲಿನಲ್ಲಿ ಮುಂಗಡ ಪತ್ರದಲ್ಲಿ ತಾವು ಹಣವನ್ನು ಮಂಜೂರು ಮಾಡುತ್ತೀರಾ?

1.30 ಪಿ.ಎಂ.

ಆದರೆ ಮಂಜೂರು ಆಗಿದ್ದಂತಹ ಹಂತದಲ್ಲಿ ಯಾವುದೇ ಒಂದು ನಯಾ ಪೈಸೆಯನ್ನು ಆ ಒಂದು ಲ್ಯಾಂಪ್ ಸೊಸೈಟಿಗಳಿಗಾಗಲಿ, ಅಥವಾ ಇನ್ನಿತರ ಪರಿಶಿಷ್ಟ ಪಂಗಡದವರು ನಡೆಸುವಂತಹ ಸಹಕಾರ ಸಂಘಗಳಿಗೆ ಆಗಲಿ ವಿನಿಯೋಗ ಆಗದೇ ಇರುವಂತಹ ರೀತಿಯ ವ್ಯವಸ್ಥೆಯನ್ನು ಸರಿಪಡಿಸುವುದರ ಬಗ್ಗೆ ತಾವು ಯಾವರೀತಿ ಮಾಡುತ್ತೀರಿ ಎನ್ನುವುದನ್ನು ಇಲ್ಲಿ ಉಲ್ಲೇಖ ಮಾಡಿಲ್ಲ. ಏಕೆಂದರೆ 1997-98ರಲ್ಲಿ ಎಷ್ಟೆಷ್ಟು ಹಣವನ್ನು ಈ ಒಂದು ಪರಿಶಿಷ್ಟ ಪಂಗಡದವರು ನಡೆಸುತ್ತಿರುವಂತಹ ಲ್ಯಾಂಪ್ ಸೊಸೈಟಿಗೆ ನೀವು ಮಂಜೂರು ಮಾಡಿ ಅಥವಾ ಮುಂಗಡ ಪತ್ರದಲ್ಲಿ ನೀವು ಇಟ್ಟಿದ್ದಿರೋ ಅದರಲ್ಲಿ ಒಂದೇ ಒಂದು ನಯಾಪೈಸೆ ಕೂಡ ಖರ್ಚಾಗಲಿಲ್ಲ. ಈ ವರ್ಷದಲ್ಲಿ ಕೂಡ ತಾವು ಅದರ ಬಗ್ಗೆ ಏನಾದರೂ ಖರ್ಚು ಮಾಡುವಂತಹ ವ್ಯವಸ್ಥೆ ಮಾಡುತ್ತೀರಾ ಎನ್ನುವ ಬಗ್ಗೆ ಈ ಸಂದರ್ಭದಲ್ಲಿ ಉತ್ತರವನ್ನು ಕೊಡಬೇಕೆಂದು ಕೇಳುತ್ತಿದ್ದೇನೆ.

ಶ್ರೀ ಹೆಚ್.ಕೆ.ಕುಮಾರಸ್ವಾಮಿ (ಬೇಲೂರು): ಮಾನ್ಯ ಅಧ್ಯಕ್ಷರೇ, ಸಹಕಾರಿ ಬ್ಯಾಂಕುಗಳು, ಸಂಘಗಳಿಂದ ಅನೇಕ ಮೊದಲನೇ ದರ್ಜೆಯಿಂದ ಹಿಡಿದು ಕೊನೇ ದರ್ಜೆಯವರೆಗೂ ಕೂಡ ಸಾಲವನ್ನು ವಿತರಣೆ ಮಾಡತಕ್ಕಂಥ ಕಾರ್ಯಕ್ರಮವನ್ನು ಮಾನ್ಯ ಸಚಿವರು ರಾಜ್ಯದಲ್ಲಿ ಹಮ್ಮಿಕೊಂಡಿದ್ದಾರೆ. ಆದರೆ ನಮಗೆ ಬಂದಿರುವ ಸಮೀಕ್ಷೆ ಪ್ರಕಾರ ಕೇವಲ 2-3 ಪರ್ಸೆಂಟ್ ಮಾತ್ರ ಪರಿಶಿಷ್ಟ ಜಾತಿ ವರ್ಗದವರಿಗೆ ಸಾಲವನ್ನು ಕೊಟ್ಟಿರತಕ್ಕಂಥಾದ್ದು ಇಲ್ಲಿಯವರೆಗೆ ಕಂಡುಬಂದಿದೆ. ಸರ್ಕಾರದ ನಿರ್ದೇಶನ ಮತ್ತು ಆದೇಶ ಇರತಕ್ಕಂಥಾದ್ದು ಶೇಕಡ 10ರಷ್ಟು ಹಣವನ್ನು ಸಾಲವನ್ನಾಗಿ ಕೊಡಬೇಕೆಂದು. ಈಗ 2ರಿಂದ 3 ಪರ್ಸೆಂಟ್ ಕೊಟ್ಟಿದ್ದೀರಿ. ಅದರ ಬಗ್ಗೆ ತಾವು ಏನು ಕಾರ್ಯಕ್ರಮ ಹಮ್ಮಿಕೊಳ್ಳುತ್ತೀರಿ? ಇನ್ನು ಎರಡನೆಯದಾಗಿ ಸಹಕಾರ ಸಂಘಗಳಲ್ಲಿ ಬರೀ 4ನೇ ದರ್ಜೆ ಸಹಕಾರ ಸಂಘಗಳಾದ ಟಿ.ಎ.ಪಿ.ಸಿ.ಎಂ.ಸಿ ಮತ್ತು ಪಿ.ಎಲ್.ಡಿ. ಬ್ಯಾಂಕ್ ಇವುಗಳಿಗೆ ಮಾತ್ರ ನೀವು ನಿರ್ದೇಶಕರ ಸ್ಥಾನಕ್ಕೆ ರಿಸರ್ವೇಷನ್ ಇಟ್ಟಿದ್ದೀರಿ. ಆದರೆ ಮೊದಲನೇ ದರ್ಜೆಯಲ್ಲಿ ನಿರ್ದೇಶಕರ ಸ್ಥಾನದಲ್ಲಿ ರಿಸರ್ವೇಷನ್ ಇಟ್ಟಿಲ್ಲ. ಮ್ಯಾಂಡೇಟರಿ ಇಲ್ಲ. ಅದರ ಬಗ್ಗೆ ಸರ್ಕಾರದ ಕಾರ್ಯಕ್ರಮ ಏನು? ನೇಮಕಾತಿಯಲ್ಲಿ ಕೂಡ ಯಾವುದೇ ತರಹದ ಮೀಸಲಾತಿ ನಡೆಯುತ್ತಿಲ್ಲ, ಅದರ ಬಗ್ಗೆ ಕೂಡ ಕ್ರಮವನ್ನು ಕೈಗೊಳ್ಳಬೇಕು. ಹಾಗೂ ಸದಸ್ಯತ್ವ ನೋಂದಣಿಯಲ್ಲಿ ತಾವೇನು ಹೇಳಿದ್ದೀರಿ ಹಣವನ್ನು ನಾವು ಪೂಲ್ ಮಾಡಿ ಅವರ ಇವರ ಇಲಾಖೆಗೆ ಕೊಟ್ಟಿದ್ದೇವೆ ಎಂದು. ಈ ಇಲಾಖೆಯಿಂದ ಆ ಅಮೌಂಟ್ ಪೂಲ್ ಆಗಿಲ್ಲ. ನಂತರ ಕೆಳಗಡೆ ಪುಡಾರಿಗಳು ಏನು ಮಾಡುತ್ತಾರೆಂದರೆ ಯಾವನಾದರೂ ಗೆಲ್ಲುವುದಕ್ಕೆ ಅವನಿಗೆ ಬೇಕಾದಂತೆ ಊರಿಗೆ ನೂರು ಜನಕ್ಕೆ ಮಾಡಿಕೊಂಡುಬಿಡುವುದು. ಇದು ತಾಲ್ಲೂಕಿನಾದ್ಯಂತ ವ್ಯಾಪ್ತಿಯಲ್ಲಿ ನಡೆಯುತ್ತಿಲ್ಲ. ಆದರೆ ತಾವು ಆದೇಶವನ್ನು ಕೊಟ್ಟು ಪ್ರತಿ ಹಳ್ಳಿಯಲ್ಲಿ ಇಷ್ಟಿಷ್ಟು ಜನ ಎಂದು ಕಡ್ಡಾಯವಾಗಿ ನೋಂದಣಿ ಆಗಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಎರಡು ಪ್ರಶ್ನೆಗಳನ್ನು ಕೇಳಿದ್ದೆ. ನಾಮಕರಣ ರದ್ಧತಿ ಬಗ್ಗೆ ನಿರ್ದಿಷ್ಟವಾಗಿ ಏನೂ ಅವರು ಹೇಳಿಲ್ಲ. ಬರೀ ಬಿಲ್ ತರುತ್ತೇವೆಂದು ಹೇಳುವುದು ಬಿಟ್ಟರೆ. ಆದರೆ ನಾಮಕರಣ ಪದ್ಧತಿ ಬಗ್ಗೆ ಅವರು ನಿರ್ದಿಷ್ಟವಾಗಿ ಅದನ್ನು ರದ್ದು ಮಾಡುತ್ತೀರಾ ಇಲ್ಲವೋ ಎಂದು ಹೇಳಬೇಕು. ಮತ್ತು ರೈತರಿಗೆ ಪ್ರೊಡಕ್ಷನ್ ಇನ್‌ಸೆಂಟೀವ್ ಎಂದು ಕೊಡುತ್ತಿದ್ದರು. ಎಂದರೆ ಸಾಲವನ್ನು ಮಾರ್ಚ್ 31ರೊಳಗೆ ಯಾರ್‍ಯಾರು ಕೊಡುತ್ತಾರೆ ಅವರಿಗೆ ಬಡ್ಡಿಯಲ್ಲಿ ಐದು ಪರ್ಸೆಂಟ್ ಪ್ರೊಡಕ್ಷನ್ ಇನ್‌ಸೆಂಟೀವ್ ಎಂದು. ಅದರ ಬಗ್ಗೆ ಏನೂ ಹೇಳಲಿಲ್ಲ. ಮತ್ತು ಹೌಸಿಂಗ್ ಕೋ-ಆಪರೇಟೀವ್ ಸೊಸೈಟಿ ಮತ್ತು ಶುಗರ್ ಫ್ಯಾಕ್ಟರಿ ಅದರ ಬಗ್ಗೆ ಸ್ಪಷ್ಟವಾದಂತಹ ಅಭಿಪ್ರಾಯ ಏನು ಎಂದು ಸರ್ಕಾರ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೇ, ಗೃಹ ನಿರ್ಮಾಣ ಸಂಘಗಳ ಅಕ್ರಮದ ಬಗ್ಗೆ ಜಿ.ವಿ.ಕೆ. ರಾವ್ ಅವರು ಒಂದು ವರದಿ ಕೊಟ್ಟಿದ್ದರು. ಆ ವರದಿ ಮೂಲೆಗುಂಪು ಆಯಿತಾ? ಆ ವರದಿಯಲ್ಲಿ ಅತ್ಯಂತ ಜಾಗರೂಕತೆಯಿಂದ ಬಹಳ ಚೆನ್ನಾಗಿ ಇಡೀ ರಾಜ್ಯದಲ್ಲಿ ಸುತ್ತಾಡಿ ಅವರು ಮಾಡತಕ್ಕಂಥ ಹಗಲು ದರೋಡೆ ಬಗ್ಗೆ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆ ವರದಿ ಏನಾಗಿದೆ? ಆ ವರದಿಯನ್ನು ತಾವು ಒಪ್ಪಿದ್ದೀರಾ? ಆ ವರದಿಯನ್ನು ತಾವು ನೋಡಿದರೆ ಅದರಲ್ಲಿ ಸತ್ಯದ ಬಗ್ಗೆ ಎಷ್ಟು ಚೆನ್ನಾಗಿ ಬೆಳಕು ಚೆಲ್ಲಿದ್ದಾರೆ ಎಂಬುದು ಗೊತ್ತಾಗುತ್ತದೆ. ಮತ್ತು ನಾಮಕರಣ ಪದ್ಧತಿ ಬಗ್ಗೆ ನಾನು ಒಂದು ಮಾತನ್ನು ಹೇಳುತ್ತಿದ್ದೇನೆ. ನೀವು ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಲೇಬೇಕು. ಉಂಟು ಅಥವಾ ಇಲ್ಲ ಎಂದು ತಿಳಿಸಬೇಕು. ನಾವು, ನಾಮಕರಣ ಮಾಡೇ ಮಾಡುತ್ತೇವೆ, ನಾಮಕರಣ ಮಾಡುವುದಾದರೆ ಯಾರನ್ನು ನಾಮಕರಣ ಮಾಡುತ್ತೀರಿ? ನಿಮ್ಮ ಪಕ್ಷದವರನ್ನು ನಾಮಕರಣ ಮಾಡುತ್ತೀರಾ? ಏನಾದರೂ ಹೇಳಬೇಕಲ್ಲಾ. ಅಧನ್ನು ಸ್ಪಷ್ಟಪಡಿಸಬೇಕಲ್ಲ.

ಶ್ರೀ ವೈಜನಾಥ್ ಪಾಟೀಲ್ (ಚಿಂಚೋಳಿ): ಮಾನ್ಯ ಅಧ್ಯಕ್ಷರೇ, ಮೆಡಿಕಲ್ ಎಜ್ಯುಕೇಷನ್ ಬಗ್ಗೆ ಒಂದೆರಡು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಇಲ್ಲ, ಡಿಬೆಟ್ ಕ್ಲೋಸ್ ಆಗಿದೆ.

ಶ್ರೀ ವೈಜನಾಥ ಪಾಟೀಲ್: ಇಲ್ಲ, ರಿಪ್ಲೈ ಆದರೂ ಸಹ ಓಟಿಂಗ್ ಆಗಿಲ್ಲ. ನಾನು ಎರಡು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು: ಏನು ಸ್ವಾಮಿ? ಮೆಡಿಕಲ್ ಎಜ್ಯುಕೇಷನ್ ಮೇಲೆ ಡಿಬೇಟ್ ಕ್ಲೋಸ್ ಆಗಿದೆ. ಅವರು ರಿಪ್ಲೈ ಕೊಟ್ಟು ಈಗ ನಾವು ಬೇರೆ ಡಿಮ್ಯಾಂಡ್ ತೆಗೆದುಕೊಂಡಿದ್ದೇವೆ. ಇದರ ಮೇಲೆ ಈಗ ಮಾತನಾಡುತ್ತೇನೆ ಎಂದರೆ. ಏನಪ್ಪ, ಯಾರಾದರೂ ಅವರಿಗೆ ಹೇಳಿ. ನಾವು ಹೇಗೆ ಹೇಳಬೇಕು. ಅವರು ಮಂತ್ರಿಗಳೂ ಕೂಡ ಆಗಿದ್ದವರು.

ವೈಜನಾಥ್‌ರವರೇ, ಡಿಬೇಟ್ ಕ್ಲೋಸ್ ಆಗಿದೆ. ರಿಪ್ಲೈ ಕೊಟ್ಟಾಗಿದೆ. ಬೇರೆ ಡಿಮ್ಯಾಂಡ್ ತೆಗೆದುಕೊಂಡಿದ್ದೇವೆ. ಬೇರೆ ಡಿಮ್ಯಾಂಡ್ ಮೇಲೆ ಕೂಡ ರಿಪ್ಲೈ ಕನ್‌ಕ್ಲೂಡ್ ಆಗುತ್ತಿದೆ. ಈಗ ಆಗಿಹೋದ ಡಿಮ್ಯಾಂಡ್ ಮೇಲೆ ಮಾತನಾಡುತ್ತೇನೆ ಎಂದರೆ ಏನು ಹೇಳಬೇಕು?

ಶ್ರೀ ವೈಜನಾಥ ಪಾಟೀಲ್: ಅದು ಇನ್ನು ಓಟಿಂಗ್ ಆಗುವುದಿದೆ. ಅದಕ್ಕಿಂತ ಮೊದಲು ಎರಡು ಕ್ಲಾರಿಫಿಕೇಷನ್.

ಅಧ್ಯಕ್ಷರು: ಇಲ್ಲ, ದಯಮಾಡಿ ಸಹಕರಿಸಿ, ಈಗ ಎಸ್.ಎಸ್.ಪಾಟೀಲರೇ, ತಾವು ಉತ್ತರ ಕೊಡಿ. ಕ್ಲೋಸ್ ಮಾಡೋಣ ಪುಟ್ಟಣ್ಣಯ್ಯನವರೇ. ಈ ಹೊತ್ತಿನಲ್ಲೇ ನಮಗೆ ತಾಳ್ಮೆ ಕಳೆದುಹೋಗುತ್ತದೆ. ಸಾಕಾಗಿ ಬಿಡುತ್ತದೆ. ಎಲ್ಲರೂ ಒಬ್ಬೊಬ್ಬರೇ ಅವರವರ ಇಷ್ಟಕ್ಕೆ ಎದ್ದು ನಿಲ್ಲುತ್ತಾರೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಪರಿಸ್ಥಿತಿಯಲ್ಲಿ ರೈತರು ಬೆಳೆ ನಷ್ಟವನ್ನು ಅನುಭವಿಸಿ, ಈಗಾಗಲೇ ನೀವು ನಬಾರ್ಡ್‌ಗೆ ಸಹಿ ಹಾಕಿ, ಯಾವುದೇ ಕಾರಣಕ್ಕೂ ಯಾವುದೇ ಕಾಲದಲ್ಲಿ ರೈತರ ಸಾಲ ಮನ್ನಾ, ಬಡ್ಡಿ ಮನ್ನಾ ಮಾಡುವ ವಿಷಯ ನಾವು ಮಾಡುವುದಿಲ್ಲವೆಂದು ಸಹಿ ಹಾಕಿದ್ದೀರಿ. ಆದರೆ ನಾವು ಹೇಳುವುದು ವಿಶೇಷ ಪರಿಸ್ಥಿತಿಯಲ್ಲಿ ರೈತರು ಬಹಳ ಕಷ್ಟದಲ್ಲಿ ಇರತಕ್ಕಂಥ ಸಂದರ್ಭದಲ್ಲಿ ದಿನೇದಿನೇ ಪ್ರಕೃತಿ ವಿಕೋಪ ಆಗುತ್ತಿದ್ದು, ನಾಳೆ ಇದಕ್ಕೋಸ್ಕರ ವಿಶೇಷವಾದ ನಿಧಿಯನ್ನು ಸೃಷ್ಟಿ ಮಾಡಿ ಇಂತಹ ಅಪಾಯ ಬಂದಾಗ ತಕ್ಷಣದಲ್ಲಿ ಸಾಲದ ನೀತಿ, ಅದರ ಮೇಲೆ ಬಡ್ಡಿ ಮನ್ನಾವಾಗಲಿ ಏನು ಮಾಡಬೇಕೆನ್ನುವುದರ ಬಗ್ಗೆ ತಾವು ಯೋಚನೆ ಮಾಡಬೇಕು. ಇನ್ನು ಎರಡನೆಯದಾಗಿ ಗುಲ್ಬರ್ಗ ಸಹಕಾರಿ ಬ್ಯಾಂಕ್ ಪೂರ್ಣವಾಗಿ ನಾಶವಾಗತಕ್ಕಂಥ ಪರಿಸ್ಥಿತಿಗೆ ಬಂದಿದೆ. ಈಗ ಸಾಲ ಕೊಡುವಂತಹ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದೆ. ಅದರ ಬಗ್ಗೆ ತಾವು ಏನು ಯೋಚನೆ ಮಾಡಿದ್ದೀರೆಂದು ಹೇಳಬೇಕು. ಇನ್ನು ಮೂರನೆಯದಾಗಿ ಈಗ ರಿಸರ್ವ್ ಬ್ಯಾಂಕ್‌ನಿಂದ ಏಳೂವರೆ ಪರ್ಸೆಂಟ್ ಸಾಲ ಕೊಟ್ಟು, ಅಪೆಕ್ಸ್ ಕೋ-ಆಪರೇಟೀವ್ ಬ್ಯಾಂಕ್‌ನಿಂದ 12- 14 ಪರ್ಸೆಂಟಿನವರೆಗೂ ಕೊಡುತ್ತಾರೆ. ಆದುದರಿಂದ ಆ ಸೊಸೈಟಿಗಳನ್ನು ಸ್ಟ್ರೆಂಗ್ತನ್ ಮಾಡುವುದಕ್ಕೆ ಪೂರ್ಣ ಬಂಡವಾಳವನ್ನು ಸೃಷ್ಟಿ ಮಾಡುವ ಮೂಲಕ ಬಡ್ಡಿಯನ್ನು ಅಲ್ಲಿ ಉಳಿತಾಯ ಮಾಡಿಕೊಂಡು ಹೋದರೆ ಪೂರ್ಣ ಸಹಕಾರಿ ಕ್ಷೇತ್ರ ಉತ್ತಮವಾಗಿ ಬೆಳೆಯುವುದಕ್ಕೆ ಸಾಧ್ಯ. ತಾವು ಇನ್ನೊಂದು ಪ್ರಶ್ನೆಯನ್ನು ಹೇಳಿದಿರಿ. ರೈತಸಂಘದವರು ಸಾಲ ಮನ್ನಾ ಮಾಡುವ ವಿಷಯದಲ್ಲಿ ಹೇಳಿದ್ದರಿಂದ ಜನರಿಗೆ ನಾನು ಕನ್‌ವಿನ್ಸ್ ಮಾಡಿದೆ. ತಮ್ಮ ಸರ್ಕಾರ ಬಂದಾಗ 136 ಕೋಟಿ ರೂಪಾಯಿ ಸಾಲ ಮನ್ನಾ ಮಾಡಿದಿರಿ. ಅದನ್ನು ಏಕೆ ಮನ್ನಾ ಮಾಡಿದಿರೆಂದು ಹೇಳಿ? ಏಕೆಂದರೆ ಬರೀ ನಮ್ಮ ಮೇಲೆ ಅಲ್ಲ ಆಪಾದನೆ ಮಾಡುವುದು. ಅದನ್ನು ತಾವು ಹೇಳಬೇಕು.

ಶ್ರೀ ಎಸ್.ಎಸ್.ಪಾಟೀಲ್: ಆಪಾದನೆ ಮಾಡಲಿಲ್ಲ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಈಗ ಹೇಳಿದರಲ್ಲಾ, ರೈತ ಸಂಘದವರು ಸಾಲ ಮನ್ನಾ ಮಾಡಿದರು ಎಂದು. ನಂತರ ಸಹಕಾರಿ ಸಕ್ಕರೆ ಕಾರ್ಖಾನೆ ಕೆ.ಸಿ.ಡಿ.ಸಿ, ಎನ್.ಸಿ.ಡಿ.ಸಿ.ಯಲ್ಲಿ ನಾವು ಸಿಕ್ಕಾಪಟ್ಟೆ ದುಬಾರಿ ಬಡ್ಡಿ ಕೊಡುತ್ತೇವೆ ಎನ್ನುವ ವಿಚಾರ ಹೇಳಿದ್ದಾರೆ. ಆದರೆ ನಿಧಿಯನ್ನು ಓಪನ್ ಮಾಡುವಂತಹ ಕೆಲಸವನ್ನು ತಾವು ಮಾಡಬೇಕು. ನಾಮಕರಣ ಪದ್ಧತಿ ಬಗ್ಗೆ ನೀವು ನಿಮ್ಮ ನಿಲುವು ಹೇಳಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು: ಮಾನ್ಯ ಪಾಟೀಲ್‌ರವರೆ, ಐದು ನಿಮಿಷದಲ್ಲಿ ಎಲ್ಲಾದಕ್ಕೂ ಉತ್ತರ ಕೊಡಬೇಕು. ಏಕೆಂದರೆ ಮುಂದೆ ಮಾನ್ಯ ನಾಗಪ್ಪನವರು ರಿಪ್ಲೈ ಕೊಡಬೇಕು.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೇ, ಫೈನಾನ್ಸ್ ಕಾರ್ಪೊರೇಷನ್‌ಗೆ ಹಳ್ಳಿಯೊಳಗೆ ಲೈಸೆನ್ಸ್ ಕೊಟ್ಟುಬಿಟ್ಟು, ರೈತರು ಹಣ ತೆಗೆದುಕೊಂಡು ತೊಂದರೆಯಾಗುತ್ತದೆ ಎಂದು ಹೇಳಿದರು. ನಿಜವಾಗಿ ಅವರಿಗೆ ಕಾಯಿದೆಯೊಳಗೆ ಅವಕಾಶ ಇದ್ದು, ಲೈಸೆನ್ಸ್ ಕೊಡುತ್ತೇವೆ. ಆದರೆ ನಾವು ಎಲ್ಲಿ ಬಿ.ಡಿ.ಪಿ ತೆಗೆದುಕೊಂಡಿದ್ದೇವೆ ಅಲ್ಲಿ ಬಂಗಾರದ ಸಾಲ ಇನ್ನೊಂದು ಸಾಲ ಕೊಡುವುದಕ್ಕೆ ಪ್ರಾರಂಭ ಮಾಡಿರುವುದರಿಂದ ಅಂತಹ ಸೊಸೈಟಿ ಎಲ್ಲೆಲ್ಲಿ ಇದೆ ಅಲ್ಲಿ ಫೈನಾನ್ಸ್‌ನವರು ಹಿಂದೆ ಹೋಗಿದ್ದಾರೆ. ಎಲ್ಲೆಲ್ಲಿ ಇದೆ ಅಲ್ಲಿ ಕಡಿಮೆ ಮಾಡುವಂತಹ ಪ್ರಯತ್ನ ಆಗುತ್ತದೆನ್ನುವ ಮಾತನ್ನು ಹೇಳುತ್ತೇನೆ. ಮತ್ತು ಸಹಕಾರಿ ಯೂನಿಯನ್ ಬಗ್ಗೆ ಮಾನ್ಯ ಸದಸ್ಯರೊಬ್ಬರು ಮಾತನಾಡಿದರು. ಆ ಮಾತು ಸತ್ಯ. ಸಹಕಾರಿ ಯೂನಿಯನ್ ಟ್ರೇನಿಂಗ್ ಇದೆಲ್ಲಾ ವ್ಯವಸ್ಥೆ ಮಾಡಬೇಕು. ಅದನ್ನು ಮಾಡುತ್ತಿದ್ದೇವೆ. ಇನ್ನು ಅದಕ್ಕೆ ಏನು ಮಾಡಬೇಕೆನ್ನುವುದರ ದೃಷ್ಟಿಯಿಂದ ಕೂಡ ವಿಚಾರ ಮಾಡುತ್ತಿದ್ದೇವೆ. ಅದನ್ನೂ ಕೂಡ ಇವತ್ತು ಆ ಕ್ರಮ ಪ್ರಾರಂಭ ಮಾಡಿದ್ದೇವೆಂದು ಹೇಳುತ್ತೇನೆ. ಇನ್ನು ಸ್ಟೇಟ್ ಮಾರ್ಕೆಟಿಂಗ್ ಫೆಡರೇಷನ್ ಚುನಾವಣೆ ಮಾಡಿಲ್ಲವೆಂದು, ನೀವು ಹಾಗೆ ಇಟ್ಟುಕೊಂಡು ಕುಳಿತಿದ್ದೀರಿ ಎನ್ನುವ ಮಾತನ್ನು ಹೇಳಿದರು. ಅದು ಏನಾಗಿತ್ತೆಂದರೆ ನಾನು ಬರುವುದಕ್ಕಿಂತ ಪೂರ್ವದಲ್ಲಿ ಸುಮಾರು 10 ವರ್ಷಗಳಾಗಿವೆ. 121 ಮೇಲೆ ಡಿಫಾಲ್ಟರ್ಸ್ ಸೊಸೈಟಿಗೆ ಓಟಿಂಗ್ ರೈಟ್ಸ್ ಕೊಟ್ಟು ಅದರ ಮೇಲೆ ಕೋರ್ಟಿಗೆ ಹೋಗಿ ಅದು ಒಂದೊಂದೇ ಆಗಿ 10ರಿಂದ 15 ರಿಟ್ ಇದ್ದವು. ನಾನು ಬಂದಮೇಲೆ ಅದನ್ನು ವಕೀಲರಿಗೆ ಹಾಕಿ ಎಲ್ಲಾ ಖುಲ್ಲಾ ಮಾಡಿದ್ದೇವೆ. ಇವತ್ತು ಏನಾಗಿದೆ ಎಂದರೆ ಸ್ವಲ್ಪ ಸ್ಟ್ರಕ್ಚರ್ ಚೇಂಜ್ ಮಾಡುತ್ತೇವೆ. ಈಗ 27 ಜಿಲ್ಲೆಗಳಾಗುತ್ತವೆ. ಆನಂತರ ನಾವು ಅದನ್ನು ವ್ಯವಸ್ಥೆ ಮಾಡಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯಿಂದ ಜಿಲ್ಲಾ ಫೆಡರೇಷನ್‌ಗೆ ಆರಿಸಿ ಬರಬೇಕು. ಜಿಲ್ಲಾ ಫೆಡರೇಷನ್‌ನಿಂದ ಮಾರ್ಕೆಟಿಂಗ್‌ಗೆ ಫೆಡರೇಷನ್‌ಗೆ ಆರಿಸಿಬರಬೇಕು ಎನ್ನುವ ದೃಷ್ಟಿಯಿಂದ ಆ ವ್ಯವಸ್ಥೆ ಮಾಡುತ್ತೇವೆ. ಮಾಡಿ ತಕ್ಷಣದಲ್ಲಿ ಅದನ್ನೂ ಕೂಡ ಚುನಾವಣೆ ಮಾಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆನ್ನುವ ಮಾತನ್ನು ಕೂಡ ನಾನು ಹೇಳುತ್ತೇನೆ. ತಾವು ತೋಟಗಾರರ ಬೆಳೆಗಳಿಗೆ ಕನ್‌ವರ್ಷನ್

ಕೊಡುವುದಿಲ್ಲ, ಕೇವಲ ಕುಷ್ಕಿ ಬೆಳೆಗೆ ಮಾತ್ರ ಕೊಡುತ್ತೀರೆಂದು ಶ್ರೀ ಮಾಧುಸ್ವಾಮಿಯವರು ಕೇಳಿದರು. ಇದನ್ನು ತೋಟಗಾರರ ಬೆಳೆಗಳಿಗೂ ಕನ್‌ವರ್ಷನ್ ಮಾಡಿ ಕೊಡುತ್ತೇವೆನ್ನುವಂತಹ ಮಾತನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಹೇಳಬಯಸುತ್ತೇನೆ. ಈಗಾಗಲೇ ಮಾರ್ಚ್ 31ಕ್ಕೆ ಮುಗಿದುಹೋಯಿತು ಎಂದು ಹೇಳಿದರು. ಅದನ್ನು ಈಗ ಜೂನ್ 30ರವರೆಗೆ ಮುಂದುವರೆಸಿ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ. ಇನ್ನು ರೂಲ್ 17ರ ಬಗ್ಗೆ ಆಗಲೇ ಹೇಳಿದೆ, ಅದು ತಾವು ಕೇಳಿಸಿಕೊಳ್ಳಲಿಲ್ಲವೆಂದು ಕಾಣುತ್ತದೆ. ರೂಲ್ 17 ಅಮೆಂಡ್‌ಮೆಂಟ್ ಮಾಡಿದ್ದೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ರೋಸ್ಟರ್ ಏನೂ ನೋಡುತ್ತಿಲ್ಲ, ಹಾಗೆ ಕೊಡುತ್ತಿದ್ದಾರೆಂದು ಹೇಳಿದರು. ಆದರೆ ಇದನ್ನು ನಾವು ಸರ್ಕಾರದ ಅಧಿಕಾರದಲ್ಲಿಟ್ಟುಕೊಂಡಿದ್ದೇವೆ. ಈ ಅಧಿಕಾರವನ್ನು ಡೆಲಿಗೇಷನ್ ಮಾಡಿ ಕೊಡುತ್ತೇವೆನ್ನುವಂತಹ ಮಾತನ್ನು ಹೇಳಿದರು. ನಾವು ಜಿಲ್ಲಾ ಮಟ್ಟದ ಮತ್ತು ರಾಜ್ಯಮಟ್ಟದ್ದು ಮಾತ್ರ ಇಟ್ಟುಕೊಂಡು ಉಳಿದಂಥಾದ್ದು ಆಯಾ ಅಧಿಕಾರಿಗಳು ಮಾಡಬಹುದೆಂದು ಮಾಡಿದ್ದರು. ಸರ್ಕಾರ ಇದಕ್ಕೆ ಏನೂ ಸಂಬಂಧವೆಂದು ಹೈಕೋರ್ಟ್‌ಗೆ ರೂಲಿಂಗ್‌ಗೆ ಹಾಕಿತ್ತು. ಆ ಕಾರಣದಿಂದ ಈ ಅಧಿಕಾರವನ್ನು ನಾವು ತೆಗೆದುಕೊಂಡಿದ್ದು. ಇವತ್ತು ನಾವು ಅದನ್ನು ರಿಜಿಸ್ಟ್ರಾರ್‌ಗೆ ಬಿಟ್ಟು ಕೊಡುತ್ತಿದ್ದೇವೆನ್ನುವಂತಹ ಮಾತನ್ನು ಹೇಳುತ್ತಿದ್ದೇನೆ. ಇನ್ನು ಬೋರ್ಡ್ ಆಫ್ ಡೈರಕ್ಟರ್‌ಗಳು 9-11 ಎಂದು ಇದು ಕಡಿಮೆಯಾಗುತ್ತಿದೆ ಎನ್ನುವಂತಹ ಮಾತನ್ನು ಹೇಳಿದರು. ನನ್ನ ಪ್ರಕಾರ ಹೆಚ್ಚು ಜನರು ಇರುವುದು ಸರಿಯಾಗುವುದಿಲ್ಲ. ಆದರೂ ಈಗಾಗಲೇ ಇದಕ್ಕೆ ಆ್ಯಕ್ಟ್ ಮುಖಾಂತರ ಜಾರಿಗೆ ತಂದಿದ್ದೇವೆ. ತಾವು ಹೇಳಿದ ಹಾಗೆ ಮಾನ್ಯ ಡಿ.ಆರ್.ಪಾಟೀಲ್‌ರವರು ಹೇಳಿದರೆಂದು ಎಲ್ಲಾ ಸದಸ್ಯರಗಳು ಇದನ್ನು ಪ್ರಸ್ತಾಪ ಮಾಡಿದ್ದಾರೆ. ನನಗೆ ಏನೆಂದರೆ ಮಾನ್ಯ ಡಿ.ಆರ್.ಪಾಟೀಲ್‌ರವರು ಸಹಕಾರಿ ಕ್ಷೇತ್ರದಲ್ಲಿ ಹಿರಿಯ ಅನುಭವಸ್ಥರು, ನನಗೆ ಅವರ ಮೇಲೆ ಗೌರವವಿದೆ. ಅವರೂ ಸಹ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಆ ಬಗ್ಗೆ ನಾವು ಏನು ತಿಳಿದುಕೊಳ್ಳುವುದು ಬೇಡ. ನಮ್ಮ ಕಾನೂನು ಸಚಿವರು ಸಹ ಸಹಕಾರಿ ಕ್ಷೇತ್ರದಲ್ಲಿ ಅನುಭವವಿರುವವರು, ಅವರ ಹತ್ತಿರ ಇದರ ಬಗ್ಗೆ ಮಾತನಾಡಿ ಜಾರಿಗೆ ತಂದಿದ್ದೇವೆನ್ನುವಂತಹ ಮಾತನ್ನು ಹೇಳಿದ್ದೇವೆ. ಇನ್ನು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪರಿಶಿಷ್ಟ ಪಂಗಡದವರ ಮೀಸಲಾತಿಯ ಬಗ್ಗೆ ಹೇಳಿದರು. ಅದಕ್ಕೆ ನಾನು ಉತ್ತರವನ್ನು ಕೊಟ್ಟಿದ್ದೇನೆ. ಇನ್ನು ಸಾಲ ಹಂಚುವಂತಹ ವಿಚಾರದಲ್ಲಿ ನಾವು ಪರಿಶಿಷ್ಟ ಪಂಗಡದವರಿಗೆ ಎಷ್ಟು ಜನರು ಮೆಂಬರ್‌ಗಳಾಗಿದ್ದಾರೆ. ಅವರೆಲ್ಲರಿಗೂ ಸಾಲವನ್ನು ಕೊಟ್ಟಿದ್ದೇವೆ. ಇನ್ನು ಮೆಂಬರ್‌ಗಳನ್ನು ಮಾಡಿಕೊಂಡು ಸಾಲವನ್ನು ಕೊಡುತ್ತಿದ್ದೇವೆ, ಇದು ಶೇ.2-3ರಷ್ಟು ಹೆಚ್ಚಾಗಿದೆ. ಈಗ ಇದರ ಬಗ್ಗೆ ನಿಖರವಾದಂಥ ಅಂಕಿಅಂಶಗಳಿಲ್ಲ. ಇನ್ನು ಕೊನೆಯದಾಗಿ ನಾಮಕರಣ ಮಾಡುವಂಥಾದ್ದು ಇದಕ್ಕೆ ನಾವು ಕಾಯಿದೆಯಲ್ಲಿ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ನಾನು ನಮ್ಮ ನೀತಿ ಏನೆಂಬುದನ್ನು ಹೇಳುತ್ತೇನೆ. ಆದರೆ ಚುನಾಯಿತ ಪ್ರತಿನಿಧಿಗಳು

ಮತ್ತು ಅಧ್ಯಕ್ಷರು, ಉಪಾಧ್ಯಕ್ಷರು ಆಗಬೇಕೆಂದು ನಮ್ಮ ನೀತಿಯಾಗಿದೆ.

ಶ್ರೀ ವಾಟಾಳ್ ನಾಗರಾಜ್: ತಾವು ನಾಮಕರಣ ಮಾಡುತ್ತೀರೋ ಇಲ್ಲವೋ ಅಷ್ಟನ್ನು ಮಾತ್ರ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೇ, ನಾನು ಇನ್ನು ನನ್ನ ಮಾತನ್ನು ಮುಗಿಸಿಲ್ಲ. ಇವರು ಹೀಗೆ ಕೇಳಿದರೆ ಏನು ಹೇಳುವುದು. ನಾನು ನನ್ನ ಭಾಷಣವನ್ನು ಮುಗಿಸಿದ ಮೇಲೆ ಅವರು ಹೇಳಲಿ, ಇನ್ನು ನನ್ನ ಉತ್ತರ ಮುಗಿದಿಲ್ಲ. ಅವರಿಗೆ ಆಗಲೇ ಸಂಶಯ ಬಂದಿದೆ. ನಾಮಕರಣ ಸದಸ್ಯರಿಗೆ ಓಟಿಂಗ್ ರೈಟ್ಸ್ ತೆಗೆದಿದ್ದೇನೆ. ಮೂರು ಜನರು ಎಲ್ಲಿ ಸರ್ಕಾರದ ಅಸಿಸ್ಟೆಂಟ್ಸ್ ಇದೆ, ಅಲ್ಲಿ ಇರುತ್ತಾರೆ. ಅಲ್ಲಿ 10 ಲಕ್ಷ ರೂಪಾಯಿಗಳು ಸೇರಿದ್ದಲ್ಲಿ ಮಾತ್ರ. ಇದು ಎಲ್ಲಿ ಬರುತ್ತದೆಂದರೆ ಜಿಲ್ಲಾ ಬ್ಯಾಂಕ್‌ಗಳಲ್ಲಿ ಮಾತ್ರ ಬರುತ್ತದೆ. ಅದು ಜಿಲ್ಲಾ ಬ್ಯಾಂಕ್‌ಗಳಲ್ಲೂ 10 ಲಕ್ಷ ರೂಪಾಯಿಗಳು ಸೇರಿಲ್ಲ. ತಾಲ್ಲೂಕು ಬ್ಯಾಂಕ್ ಲವಲ್‌ಗಳಲ್ಲಿ ಯಾವ ನಾಮಕರಣಗಳು ಉಳಿಯುವುದಿಲ್ಲ. ಅಲ್ಲಿ ಮೂರು ಜನರ ನಾಮಕರಣ ಮಾಡುತ್ತಾರೆ, ಅವರಿಗೆ ಓಟಿಂಗ್ ರೈಟ್ಸ್ ಇರುವುದಿಲ್ಲ. ಅವರಿಗೆ ಚುನಾವಣೆಗೆ ನಿಲ್ಲುವುದಕ್ಕೂ ಅಧಿಕಾರವಿರುವುದಿಲ್ಲ. ಅವರು ಚುನಾವಣೆಯಲ್ಲಿ ಓಟಿಂಗ್ ಹಾಕುವುದಕ್ಕೂ ಆಗುವುದಿಲ್ಲ. ಇನ್ನು ಇನ್ಸೆಂಟೀವ್ ಶೇ.5ರಷ್ಟು ಕೊಡುವ ವಿಚಾರವಾಗಿ ಹೇಳಿದರು. ಇದಕ್ಕೆ ನಬಾರ್ಡ್‌ನವರು ಅಡ್ಡವಿದ್ದಾರೆ. ಹಿಂದೆ ಸದನದಲ್ಲಿ ಉತ್ತರ ಕೊಟ್ಟಿದ್ದೇವೆ. ಇದಕ್ಕೆ ನಬಾರ್ಡ್‌ನವರು ಅಡ್ಡವಿರುವುದರಿಂದ ಇದನ್ನು ಕೊಟ್ಟಿಲ್ಲ. ಶೇ.5ರಷ್ಟು ಕೇಂದ್ರಸರ್ಕಾರದವರೇ ಇದನ್ನು ಮಾಡಿದರೆ, ಈ ಪ್ರಶ್ನೆ ಬರುವುದಿಲ್ಲ.

ಅಧ್ಯಕ್ಷರು: ಮಾನ್ಯ ಕುಮಾರ್ ಸ್ವಾಮಿಯರು ರಾಜ್ಯ ಮಟ್ಟದ ಸಂಸ್ಥೆಗಳಲ್ಲಿ ಆಡಳಿತ ಮಂಡಳಿಗಳಲ್ಲಿ ಮೀಸಲಾತಿಯನ್ನು ಇಟ್ಟಿಲ್ಲವೆನ್ನುವಂತಹ ಮಾತನ್ನು ಹೇಳಿದರು, ಮತ್ತು ಮಾನ್ಯ ಬಸವನಗೌಡ ಪಾಟೀಲ್ ಯತ್ನಾಳ್‌ರವರು ಕೇಳಿದಂತಹ ವಿಚಾರದ ಬಗ್ಗೆ ಹೇಳಿ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅರ್ಬನ್ ಬ್ಯಾಂಕ್‌ಗಳನ್ನು ತೆಗೆದುಕೊಂಡರೆ ಮತ್ತೆ ಬೇರೆ ಬ್ಯಾಂಕ್‌ಗಳಲ್ಲೂ ಸ್ಟಾಂಪ್ ಡ್ಯೂಟಿ ಎಗ್ಸಂಪ್ಷನ್ ಇದೆ. ನಮ್ಮ ಕೋಆಪರೇಟಿವ್ ಬ್ಯಾಂಕ್‌ನಿಂದ ತೆಗೆದುಕೊಂಡರೂ ಕೂಡ ಎಗ್ಸಂಪ್ಷನ್ ಬಗ್ಗೆ ಇದನ್ನು ಮಾನ್ಯ ಅರ್ಥ ಸಚಿವರೊಡನೆ ಮಾತನಾಡಿ ವ್ಯವಸ್ಥೆ ಮಾಡಿಕೊಡುತ್ತೇವೆಂದು ಹೇಳುತ್ತೇನೆ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಶೇ.5ರಷ್ಟು ಇನ್‌ಸೆಂಟೀವ್ ಕೊಡುತ್ತೇವೆಂದು ಹೇಳಿದ್ದರು. ಈಗ ನೀವು ನಿಮ್ಮ ಕೈಯಿಂದ ಕೊಡಿ.

ಶ್ರೀ ಎಸ್.ಎಸ್.ಪಾಟೀಲ್: ನಬಾರ್ಡ್‌ನವರು ಇದಕ್ಕೆ ಒಪ್ಪಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ನೀವು ರೈತರಿಗೆ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಇದನ್ನು ಸರ್ಕಾರ ಕೊಡಬೇಕು, ನಬಾರ್ಡ್‌ನವರಲ್ಲ.

ಶ್ರೀ ಬಿ.ವಿ.ಶ್ರೀರಾಮರೆಡ್ಡಿ: ನೀವು ಕೊಡದಿದ್ದರೆ ನಾವು ಸಭಾತ್ಯಾಗ ಮಾಡಬೇಕಾಗುತ್ತದೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಬಾರ್ಡ್‌ನವರು ಕೊಡಲಿಲ್ಲವೆಂದರೆ ನೀವು ಕೊಡಿ, ನೀವು ಇಲ್ಲವೆನ್ನುವುದಾದರೆ ಹೇಳಿಕೆಯನ್ನು ಏಕೆ ಕೊಡುತ್ತೀರಿ? ನೀವು ಇದನ್ನು ಪ್ರಚಾರಕ್ಕೆಂದು ಕೊಟ್ಟಿದ್ದೀರಾ?

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಪ್ರಶ್ನೆ ಹಾಕಿದ್ದರು. ಅದಕ್ಕೆ ನಾವು ಉತ್ತರವನ್ನು ಕೊಟ್ಟಿದ್ದೇವೆ, ಇವರು ಅದಕ್ಕೆ ಸಭಾತ್ಯಾಗವನ್ನು ಮಾಡಿದ್ದಾರೆ. ಇದಕ್ಕೆ ಈಗಾಗಲೇ ನಾವು ಉತ್ತರವನ್ನು ಕೊಟ್ಟಿದ್ದೇವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಹಾಗಾದರೆ ನಾವು ಈಗ ಸಭಾತ್ಯಾಗ ಮಾಡಬೇಕೆಂದು ಅರ್ಥವೇ? ಶೇ.5ರಷ್ಟು ಇನ್‌ಸೆಂಟೀವ್ ಕೊಡಬೇಕೆಂಬ ನಮ್ಮ ಪ್ರಶ್ನೆಗೆ ಉತ್ತರ ಕೊಡುತ್ತಿಲ್ಲ. ಅದಕ್ಕಾಗಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ನಾವು ಕೇಳಿದಂಥಾದ್ದಕ್ಕೆ ವಿರೋಧ ಮಾಡಿದ್ದೀರೆಂದು ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

ಅಧ್ಯಕ್ಷರು: ಎಲ್ಲಾ ಊಟಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದೀರಿ, ನಿಮ್ಮ ಬುದ್ಧಿವಂತಿಕೆ ನಮಗೆ ಗೊತ್ತಿದೆ. ಶ್ರೀಮತಿ ಪ್ರಮೀಳಾ ನೇಸರ್ಗಿಯವರ ಪ್ರಶ್ನೆಗೆ ಉತ್ತರ ಹೇಳಿ.

(ಈ ಹಂತದಲ್ಲಿ ಶ್ರೀ ಬಿ.ವಿ.ಶ್ರೀರಾಮರೆಡ್ಡಿ, ಶ್ರೀ ವಾಟಾಳ್ ನಾಗರಾಜ್ ಹಾಗೂ ಶ್ರೀ ಕೆ.ಎಸ್.ಪುಟ್ಟಣ್ಣಯ್ಯನವರು ಸಭಾತ್ಯಾಗ ಮಾಡಿದರು.)

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ಅವರು ಟೆಲಿಗ್ರಾಫ್ ಸೊಸೈಟಿ ಬಗ್ಗೆ ಕೇಳಿದ್ದಾರೆ. ಅಲ್ಲಿ 364 ಲಕ್ಷ ರೂಪಾಯಿಗಳ ಠೇವಣಿ ಇದೆ. ಅಲ್ಲಿ ವಿಶೇಷ ಅಧಿಕಾರಿಗಳನ್ನು ನೇಮಕ ಮಾಡಿದ ಮೇಲೆ ಅದರ ಲೆಕ್ಕ ಪತ್ರಗಳು ಇನ್ನು ನಮಗೆ ಸಿಕ್ಕಿಲ್ಲ. ಈ ಎಲ್ಲಾ ಲೆಕ್ಕ ಪತ್ರಗಳನ್ನು ನಾವು ಹುಡುಕುತ್ತಿದ್ದೇವೆ. ಇದರಲ್ಲಿ ಕೆಲವರು ಕೋರ್ಟಿಗೆ ಹೋಗಿದ್ದಾರೆ, ಅದು ಕೋರ್ಟಿನಲ್ಲಿ ತೀರ್ಮಾನ ಆದಮೇಲೆ ಅವರಿಗೆ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಮಾನ್ಯ ಅಧ್ಯಕ್ಷರೆ, ಅದನ್ನು ರಿಟರ್ನ್ ಮಾಡಬೇಕೆಂದು ಆರ್ಡರ್ ಮಾಡಿದ್ದಾರೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ಅಧ್ಯಕ್ಷರೆ, ನಾವು ಅವರಿಗೆ ನ್ಯಾಯ ಒದಗಿಸುತ್ತೇವೆ.

ಅಧ್ಯಕ್ಷರು: ಈಗ ಸಹಕಾರಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಚರ್ಚೆ ಮತ್ತು ಉತ್ತರ ಮುಕ್ತಾಯಗೊಂಡಿತು. ಇನ್ನು ಮಾರುಕಟ್ಟೆ ಇಲಾಖೆಗೆ ಸಂಬಂಧಪಟ್ಟ ಮಂತ್ರಿಯವರು ಉತ್ತರವನ್ನು ಕೊಡಲು ಪ್ರಾರಂಭ ಮಾಡಬಹುದು.

+ ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು): ಮಾನ್ಯ ಅಧ್ಯಕ್ಷರೆ, ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಯ ಮೇಲೆ ಶ್ರೀ ಡಿ.ಆರ್.ಪಾಟೀಲ್, ಶ್ರೀಮತಿ ಪ್ರಮೀಳಾ ನೇಸರ್ಗಿ, ಶ್ರೀ ಅರಗ ಜ್ಞಾನೇಂದ್ರ, ಶ್ರೀ ಕೆ.ಎಸ್.ಪುಟ್ಟಣ್ಣಯ್ಯ, ಇವರುಗಳು ಮಾತನಾಡಿ ಅನೇಕ ಉತ್ತಮವಾದಂತಹ ಸಲಹೆಗಳನ್ನು ಕೊಟ್ಟಿದ್ದಾರೆ.

(ಈ ಹಂತದಲ್ಲಿ ಉಪಾಧ್ಯಕ್ಷರು(ಶ್ರೀ ಚಂದ್ರಶೇಖರ ಎಂ.ಮಾಮನಿ)ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ರಾಜ್ಯದಲ್ಲಿ ಸುಮಾರು 137 ಮುಖ್ಯ ಮಾರುಕಟ್ಟೆಗಳು, 332 ಉಪ ಮಾರುಕಟ್ಟೆಗಳು, 714 ಗ್ರಾಮಾಂತರ ಮಾರುಕಟ್ಟೆಗಳು ಇವೆ. 1997-98ರಲ್ಲಿ ಸುಮಾರು 5,900 ಕೋಟಿ ರೂಪಾಯಿಗಳ ವ್ಯವಹಾರವಾಗಿದ್ದು ನಮಗೆ ಸುಮಾರು 59 ಕೋಟಿ ರೂಪಾಯಿಗಳ ಆದಾಯ ಬಂದಿರುತ್ತದೆ. ನಮ್ಮ ಮುಖ್ಯ ಉದ್ದೇಶವೇನೆಂದರೆ ರೈತರು ಬೆಳೆದಂತಹ ಪದಾರ್ಥಗಳಿಗೆ ಒಳ್ಳೆಯ ತೂಕ, ಬೆಲೆ ಮತ್ತು ತಕ್ಷಣ ಹಣವನ್ನು ಕೊಡುವಂಥಾದ್ದು ಈ ಮಾರುಕಟ್ಟೆ ಸಮಿತಿಯ ಉದ್ದೇಶವಾಗಿದೆ. ನಮ್ಮ ಈ 137 ಮುಖ್ಯ ಮಾರುಕಟ್ಟೆಗಳ ಪೈಕಿ 60 ಮಾರುಕಟ್ಟೆಗಳು ಪ್ರತಿ ದಿವಸ ವ್ಯವಹಾರವನ್ನು ಮಾಡಿಕೊಂಡು ಬರುತ್ತಿವೆ. ಇನ್ನು ಕೆಲವು ಸಾಮಾನ್ಯವಾಗಿ ನಡೆಯುತ್ತಿವೆ. ರೈತರಿಗೆ ಸರಿಯಾಗಿ ತೂಕವನ್ನು ಒದಗಿಸುವ ಸಲುವಾಗಿ ಈಗಾಗಲೇ 24 ಸಮಿತಿಗಳಲ್ಲಿ ಎಲೆಕ್ಟ್ರಾನಿಕ್ ಯಂತ್ರಗಳನ್ನು ಅಳವಡಿಸಲಾಗಿದೆ. ಮಿಕ್ಕ 60 ಮಾರುಕಟ್ಟೆಗಳಿಗೂ ಕೂಡ ಈ ವರ್ಷವೇ ಎಲೆಕ್ಟ್ರಾನಿಕ್ ತೂಕದ ಯಂತ್ರಗಳನ್ನು ಅಳವಡಿಸುವಂತಹ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದನ್ನು ಈ ವರ್ಷದಲ್ಲೇ ತುರ್ತಾಗಿ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಅನೇಕ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಉತ್ತರವನ್ನು ಕೊಡುತ್ತಿದ್ದೇವೆ. ಇನ್ನು ಎಲೆಕ್ಟ್ರಾನಿಕ್ ಬ್ರಿಡ್ಜ್ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ಇನ್ನು ಒಂದು ವರ್ಷದಲ್ಲಿ ಎಲೆಕ್ಟ್ರಾನಿಕ್ ವೇಯಿಂಗ್ ಬಿಡ್ಜಸ್ ಅನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ರೈತರಿಗೆ ಅವರು ಬೆಳೆದಂತಹ ಪದಾರ್ಥಗಳಿಗೆ ಒಳ್ಳೆಯ ಬೆಲೆ ಸಿಗದಿದ್ದಾಗ ನಮ್ಮ ಸಮಿತಿಯಿಂದ ಅವರಿಗೆ ಅಡಮಾನ ಸಾಲವನ್ನು ಕೊಡುವಂಥಾದ್ದು ಈಗ ವ್ಯವಸ್ಥೆ ಮಾಡಿದೆ. ಅದು ಇಂಟ್ರೆಸ್ಟ್ ಲೋನ್ ಎಂದು ಒಂದು ತಿಂಗಳವರೆಗೆ ಕೊಡುತ್ತೇವೆ, 2-3 ತಿಂಗಳುಗಳಿಗೆ ಕೇವಲ ಶೇ.8ರಷ್ಟು ಬಡ್ಡಿಯನ್ನು ಹಾಕಿ ಸಾಲವನ್ನು ಕೊಡುವಂತಹ ವ್ಯವಸ್ಥೆ ಇದೆ. ಈ ವರ್ಷದ ಬಜೆಟ್‌ನಲ್ಲಿ ಆವರ್ತನ ನಿಧಿ

ಎಂದು ನಾವು ಸ್ಥಾಪನೆ ಮಾಡಿದ್ದೇವೆ. Price Stabilisation Revolving Fund ಸರ್ಕಾರದಿಂದ ಸುಮಾರು 10 ಕೋಟಿ ರೂಪಾಯಿಗಳನ್ನು ಈ ರೈತರು ಬೆಳೆದಂತಹ ಪದಾರ್ಥಗಳಿಗೆ ಅಕಸ್ಮಾತ್ತಾಗಿ ಕಡಿಮೆ ಬೆಲೆ ಬಂದಂತಹ ಸಂದರ್ಭದಲ್ಲಿ ಅದನ್ನು ಸರ್ಕಾರವೇ ತೆಗೆದುಕೊಳ್ಳಬೇಕೆನ್ನುವ ಉದ್ದೇಶದಿಂದ ಇಟ್ಟಿದೆ. ಮತ್ತೆ ಎಪಿಎಂಸಿಯಿಂದ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಒಟ್ಟು 25 ಕೋಟಿ ರೂಪಾಯಿಗಳನ್ನು ಇಟ್ಟು ಈ ಕಾರ್ಯಕ್ರಮವನ್ನು ಪ್ರಾರಂಭ ಮಾಡಿದ್ದೇವೆ. ಇದನ್ನು ಅದೇ ರೀತಿಯಲ್ಲಿ ಮುಂದುವರೆಸಿ ಒಂದು ಸಾವಿರ ಕೋಟಿ ರೂಪಾಯಿಗಳ ಅಕೌಂಟ್ ಅನ್ನು ಇದಕ್ಕಾಗಿ ಮೀಸಲಾಗಿ ಇಡಬೇಕೆಂಬ ಉದ್ದೇಶ ಕೂಡ ನಮಗೆ ಇದೆ. ಇನ್ನು ಕೃಷಿ ಉತ್ಪನ್ನ ಮಾರುಕಟ್ಟೆಗೆ ಇರುವಂತಹ ಕಾಯಿದೆಯನ್ನೂ ಕೂಡ ಸಮಗ್ರವಾಗಿ ತಿದ್ದುಪಡಿ ಮಾಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ. ಅದರಲ್ಲಿ ಅನೇಕ ಸದಸ್ಯರು ಚುನಾವಣೆಯ ಬಗ್ಗೆ ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ದಳ್ಳಾಳಿಗಳಿಗೆ ಆಡಳಿತ ಮಂಡಳಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿದ್ದಾರೆ. ಮತ್ತೆ ಅಧಿಕಾರ ವಿಕೇಂದ್ರೀಕರಣದ ಎಸ್ಟಿಮೇಟ್ ಎಲ್ಲವೂ ಇಲ್ಲಿಗೆ ಬಂದು ಹೋಗಿದೆ, ಅನೇಕ ಆರ್ಡರ್‌ಗಳು ಸಹ ಇಲ್ಲಿಗೆ ಬಂದು ಹೋಗಿವೆ. ಇಂತಹ ಸಂದರ್ಭದಲ್ಲಿ ಇದನ್ನು ಅಧಿಕಾರ ವಿಕೇಂದ್ರೀಕರಣ ಮಾಡಿ ಅವರಿಗೆ ಹೆಚ್ಚಿನ ಅಧಿಕಾರವನ್ನು ಕೊಡುವಂತಹ ಯೋಜನೆಯನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಮತ್ತೆ ತಕ್ಷಣ ರೈತರಿಗೆ ಹಣಕೊಡಬೇಕೆನ್ನುವ ಯೋಜನೆಯೂ ಕೂಡ ಇದೆ. ಆದರೆ ಈಗ ನಮ್ಮಲ್ಲಿ ಸಾಕಷ್ಟು ನೌಕರರು ಇಲ್ಲದಿರುವುದರಿಂದ ನಾವು ಸ್ವಲ್ಪ ಆ ನೌಕರರನ್ನು ಸರಿಪಡಿಸಿಕೊಂಡು ತಕ್ಷಣ ಹಣ ಕೊಡತಕ್ಕಂಥದ್ದು ಮತ್ತು ಎಪಿಎಂಸಿ ಮುಖಾಂತರವೇ ಹಣ ಕೊಡುವ ಒಂದು ವ್ಯವಸ್ಥೆಯನ್ನು ಜಾರಿಗೆ ತರುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇವೆ. ನಾವು ಕೆಲವು ಕಲ್ಯಾಣ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ. ಸಂಜೀವಿನಿ ಕಾರ್ಯಕ್ರಮದಡಿಯಲ್ಲಿ ರೈತ ಸತ್ತಂಥ ಕಾಲದಲ್ಲಿ 25 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥದ್ದು, ಕೂಡುವ ರಸ್ತೆಗಳಿಗಾಗಿ ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ 15 ಲಕ್ಷ ರೂ.ಗಳನ್ನು ಈಗಾಗಲೇ ಕೊಡುತ್ತಾ ಬಂದಿದ್ದೇವೆ. ಈಗ ಎರಡು ಕಂತುಗಳಲ್ಲಿ ಮೂವತ್ತು ಮೂವತ್ತು ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು ಏಳೆಂಟು ವಿಧಾನಸಭಾ ಕ್ಷೇತ್ರಗಳಿಗೆ ಕೊಡಬೇಕಾಗಿದೆ, ಅದಕ್ಕೂ ಕೂಡ ವ್ಯವಸ್ಥೆ ಮಾಡಿದ್ದು, ಇನ್ನೊಂದು ವಾರದಲ್ಲಿ ತಲುಪುತ್ತದೆ. ಹಮಾಲಿಗಳಿಗೆ ಮನೆ ಕಟ್ಟಿಸಿಕೊಡುವ ಒಂದು ಯೋಜನೆಯನ್ನು ನಾವು ಈಗಾಗಲೇ ಮಾಡಿ ಎರಡು ಸಾವಿರ ಮನೆಗಳನ್ನು ಕಟ್ಟುವ ಕೆಲಸ ಪ್ರಾರಂಭವಾಗಿ ಅದು ವಿವಿಧ ಹಂತದಲ್ಲಿದೆ, ಅದನ್ನೂ ಕೂಡ ಜಾಗ್ರತೆಯಾಗಿ ಮುಗಿಸಿಕೊಡುತ್ತೇವೆ. ಮಿಕ್ಕವರಿಗೂ ಕೂಡ ವರ್ಷೇ ವರ್ಷೇ ಎರಡು ಸಾವಿರ ಮನೆಗಳಂತೆ ಮನೆಗಳನ್ನು ಕಟ್ಟಿಸುವ ಕೆಲಸ ತೆಗೆದುಕೊಂಡು ಎಲ್ಲಾ ಹಮಾಲಿಗಳಿಗೆ ಕೂಡ ಮನೆಗಳನ್ನು ಕಟ್ಟಿಸಿಕೊಡುವಂಥ ಒಂದು ವ್ಯವಸ್ಥೆಯನ್ನು ಕೂಡ ಮಾಡುತ್ತಿದ್ದೇವೆ. ಅದರ ಜೊತೆಗೆ ಬೆಂಗಳೂರು ಸುತ್ತ ಏಳು ಉಪ ಮಾರುಕಟ್ಟೆಗಳನ್ನು ಮಾಡಬೇಕೆನ್ನುವ ಒಂದು ಯೋಜನೆ ಕೂಡ ಇದೆ.

ನೆಲಮಂಗಲದ ಹತ್ತಿರ ಒಂದು ಮೆಗಾ ಮಾರುಕಟ್ಟೆ ಮಾಡಬೇಕೆಂದಿದ್ದೇವೆ, ಬ್ಯಾಟರಾಯನಪುರದ ಹತ್ತಿರ ಒಂದು ಮಾಡಬೇಕೆಂದಿದ್ದೇವೆ, ಸಿಂಗೇನ ಅಗ್ರಹಾರದಲ್ಲಿ ಒಂದು ಮಾಡಬೇಕೆಂದಿದ್ದೇವೆ. ಹೀಗೆ ಬಿಡದಿ ಹತ್ತಿರ ಒಂದು, ಹೊಸಕೋಟೆ ಹತ್ತಿರ ಒಂದು, ಮಾಗಡಿ ರೋಡ್‌ನಲ್ಲಿ ಬರುವ ಶ್ರೀಗಂಧಕಾವಲಿನಲ್ಲಿ ಒಂದು ಮಾಡಬೇಕೆಂದಿದ್ದೇವೆ ಮತ್ತು ಮೈಸೂರು ರಸ್ತೆ ಹತ್ತಿರವಿರುವ ಹಾರೋಹಳ್ಳಿಯಲ್ಲೂ ಕೂಡ ಒಂದು ಮಾಡಬೇಕೆಂದು ಇದ್ದೇವೆ. ರೈತರಿಗೆ ಬಹಳ ಅನುಕೂಲವಾಗಲೆನ್ನುವ ದೃಷ್ಟಿಯಿಂದ ಸುಮಾರು 23 ಮಾರುಕಟ್ಟೆಗಳಲ್ಲಿ ರೈತ ತಂದಂಥ ಸಾಮಾನುಗಳನ್ನು, ಅದು ಬಸ್ ನಿಲ್ದಾಣವಿರಬಹುದು ಅಥವಾ ಬೇರೆಕಡೆ ಇರಬಹುದು, ಅಲ್ಲಿಂದ ಮಾರುಕಟ್ಟೆಗೆ ಸಾಗಿಸುವುದಕ್ಕೆ ಸಾರಿಗೆ ವ್ಯವಸ್ಥೆಯನ್ನು ನಾವು ಈಗಾಗಲೇ ಏರ್ಪಾಡು ಮಾಡಿದ್ದೇವೆ. ಮಾರ್ಕ್‌ನೆಟ್ ಎಂದು ಒಂದು ಹೊಸ ಯೋಜನೆಯನ್ನು ಮಾಡಬೇಕೆಂದಿದ್ದೇವೆ. ಅಂದರೆ, ರೈತನಿಗೆ ಪ್ರತಿದಿವಸ ತಾವು ಬೆಳೆದಂಥ ಪದಾರ್ಥಗಳ ಬೆಲೆ ಗೊತ್ತಾಗಬೇಕೆನ್ನುವ ದೃಷ್ಟಿಯಿಂದ ಎಲ್ಲಾ ಕಡೆ ಪ್ರತಿದಿವಸ ಸಂಜೆ ಐದು ಗಂಟೆಗೆ ಪ್ರಕಟಿಸುವ ಒಂದು ವ್ಯವಸ್ಥೆಯನ್ನು ಕೂಡ ಮಾಡಬೇಕೆಂದು ಆ ರೀತಿಯ ಯೋಜನೆಯನ್ನು ಕೂಡ ನಾವು ಹಾಕಿಕೊಂಡಿದ್ದೇವೆ. ಸುಮಾರು ವರ್ಷಗಳಿಂದ ಈ ಆಡಳಿತ ಇಲ್ಲದೆ, ಎಂಟು, ಹತ್ತು ವರ್ಷಗಳಿಂದ ಚುನಾವಣೆಯಾಗಿರಲಿಲ್ಲ. ಈಗ ಚುನಾವಣೆಯನ್ನು ಮಾಡಿದ್ದೇವೆ. ಅಧ್ಯಕ್ಷರು, ಉಪಾಧ್ಯಕ್ಷರ ಚುನಾವಣೆಯನ್ನು ಕೂಡ ಈ ತಿಂಗಳ 30ನೇ ತಾರೀಖಿನಂದು ಮುಗಿಯುತ್ತದೆ. ಅದಾದ ಮೇಲೆ ಅಧ್ಯಕ್ಷರ ಹಾಗೂ ಉಪಾಧ್ಯಕ್ಷರ ಒಂದು ಸಮ್ಮೇಳನವನ್ನು ಕೂಡ ಮೇ ತಿಂಗಳಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಕರೆಯಬೇಕೆಂದು ಈಗಾಗಲೇ ತೀರ್ಮಾನ ಮಾಡಿದ್ದೇವೆ. ಆ ಸಮ್ಮೇಳನವನ್ನು ಮೇ ತಿಂಗಳ ಮೊದಲ ಅಥವಾ ಎರಡನೇ ವಾರದಲ್ಲಿ ರಜೆಯ ದಿವಸಗಳನ್ನು ನೋಡಿಕೊಂಡು ಮಾಡಲಿದ್ದೇವೆ. ಮತ್ತು ವಿವಿಧ ರಾಜ್ಯಗಳ ಸಚಿವರ ಹಾಗೂ ನಿರ್ದೇಶಕರುಗಳ ಒಂದು ಸಭೆಯನ್ನೂ ಕೂಡ ಕರೆದು ಅವರ ರಾಜ್ಯಗಳಲ್ಲಿ ಯಾವರೀತಿಯ ಸಿಸ್ಟಂ ಇದೆ ಎನ್ನುವುದನ್ನು ತಿಳಿದುಕೊಂಡು ಅದನ್ನು ನಮ್ಮ ರಾಜ್ಯಕ್ಕೆ ಹೋಲಿಸಿ, ನಮ್ಮ ರಾಜ್ಯದಲ್ಲಿ ಏನಾದರೂ ಒಂದು ಒಳ್ಳೆಯ ಕಾಯಿದೆಯನ್ನು ತರುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಅನೇಕ ಮಿತ್ರರು ಮಾತನಾಡುವ ಸಂದರ್ಭದಲ್ಲಿ, ಶ್ರೀಮತಿ ಪ್ರಮೀಳಾರವರು, ನಾನು ಮತ್ತು ನಮ್ಮ ನಿರ್ದೇಶಕರು ಈ ಕಲಾಸಿಪಾಳ್ಯಂ ಮಾರುಕಟ್ಟೆಗೆ ಹೋಗಿದ್ದೆವು. ಅದನ್ನು ನೋಡಿದಂಥ ಸಂದರ್ಭದಲ್ಲಿ ಅನೇಕ ನ್ಯೂನತೆಗಳು ಕಂಡುಬಂದಿವೆ. ನಾವು ಹಿಂದೆ ಒಂದು ಎಕರೆ ಜಮೀನಿನಲ್ಲಿ ಮಾತ್ರ ಮಾಡಿದ್ದೆವು. ದಿನ ದಿನೆ ಅಲ್ಲಿಗೆ ಹೆಚ್ಚಿನ ಸಂಖ್ಯೆಯಲ್ಲಿ ವ್ಯಾಪಾರಸ್ಥರು ಬಂದು ಇವತ್ತಿನದಿವಸ ಅಲ್ಲಿ ಜಾಗ ಸಾಲದೆ ಬಹಳ ತೊಂದರೆಯಾಗಿದೆ. ನಿಜವಾಗಿಯೂ ಕೂಡ ಹೇಳುವುದಾದರೆ, ತರಕಾರಿ ಮಾರುಕಟ್ಟೆಯ ಆ ರಸ್ತೆಗಳು ಮತ್ತು ಚರಂಡಿಗಳು ತುಂಬಾ ಹದಗೆಟ್ಟಿರುವುದು ಕಂಡು ಬಂದಿದೆ. ಇದರಿಂದಾಗಿ, ಸುಮಾರು 53 ಲಕ್ಷ ರೂ.ಗಳನ್ನು ರಸ್ತೆ ರಿಪೇರಿ ಸೇರಿದಂತೆ ವಿವಿಧ ಕಾಮಗಾರಿಗಳಿಗಾಗಿ ಈಗಾಗಲೇ

ಖರ್ಚು ಮಾಡಿದ್ದೇವೆ. ಆದರೂ ಕೂಡ ಅದು ತುಂಬಾ ಇಕ್ಕಟ್ಟಾದ ಪ್ರದೇಶವಾದ್ದರಿಂದ ಮಾರುಕಟ್ಟೆಗಳಿಗೆ ಬರುವ ತರಕಾರಿಗಳನ್ನು ಅಂಗಡಿಗಳ ಪಕ್ಕದ ರಸ್ತೆಗಳಲ್ಲಿ ಇಟ್ಟುಕೊಂಡು ಮಾರಾಟ ಮಾಡುವ ಪರಿಸ್ಥಿತಿ ಅನಿವಾರ್ಯವಾಗಿದೆ. ಅದಕ್ಕೋಸ್ಕರ ಆ ಒಂದು ಮಾರುಕಟ್ಟೆಯನ್ನು ಹೊಸೂರು ರಸ್ತೆಯ ಹತ್ತಿರವಿರುವ ಸಿಂಗೇನ ಅಗ್ರಹಾರ ಎನ್ನುವ ಗ್ರಾಮದ ಪಕ್ಕದಲ್ಲಿ ಸುಮಾರು 20 ಎಕರೆ ಜಮೀನನ್ನು ತೆಗೆದುಕೊಂಡು ಕಟ್ಟಿ ಈ ಮಾರುಕಟ್ಟೆಯನ್ನು ಅಲ್ಲಿಗೆ ಸ್ಥಳಾಂತರ ಮಾಡುವುದಕ್ಕೆ ಒಂದು ವ್ಯವಸ್ಥೆಯನ್ನು ಮಾಡಿದ್ದೇವೆ. ನಿನ್ನೆಯೂ ಕೂಡ ಶ್ರೀಮತಿ ಪ್ರಮೀಳಾ ನೇಸರ್ಗಿ ಹಾಗೂ ಕೇಂದ್ರ ವಿಮಾನಯಾನ ಸಚಿವರಾದ ಶ್ರೀ ಅನಂತಕುಮಾರ್‌ರವರು ಹೋಗಿದ್ದರೆನ್ನುವ ಸಮಾಚಾರ ಕೂಡ ನನಗೆ ಬಂತು. ಆದಷ್ಟು ಜಾಗ್ರತೆ ಈ ಒಂದು ಮಾರುಕಟ್ಟೆ ಯನ್ನು ಸುಧಾರಿಸುತ್ತೇವೆ, ಇಲ್ಲದಿದ್ದರೆ ಅದನ್ನು ಸಿಂಗೇನಅಗ್ರಹಾರಕ್ಕೆ ಸ್ಥಳಾಂತರಿಸುತ್ತೇವೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಅರಗ ಜ್ಞಾನೇಂದ್ರರವರು ಕೂಡ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಶಿವಮೊಗ್ಗ ಎಪಿಎಂಸಿಯಲ್ಲಿ ಬರುವ ಹಣವನ್ನು ಅಲ್ಲಿಗೇ ಖರ್ಚು ಮಾಡಬೇಕು ಎನ್ನುವ ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಈಗಾಗಲೇ ನಾವು ಅಲ್ಲಿಗೆ ಖರ್ಚು ಮಾಡುತ್ತಿದ್ದೇವೆ. ಒಂದು ವರ್ಷಕ್ಕೆ ಸುಮಾರು 3 ಕೋಟಿ 16 ಲಕ್ಷ ರೂ. ಉತ್ಪತ್ತಿ ಬರುತ್ತಿದೆ, ಈ ವರ್ಷ ಆ ಒಂದು ಸಮಿತಿಯ ಅಭಿವೃದ್ಧಿಗಾಗಿ ಸುಮಾರು 2 ಕೋಟಿ 78 ಲಕ್ಷ ರೂ.ಗಳನ್ನು ಖರ್ಚು ಮಾಡುತ್ತಿದ್ದೇವೆ. ಅದರಲ್ಲು ಶಿವಮೊಗ್ಗ ಪ್ರಾಂಗಣಕ್ಕೆ 25 ಕಾಮಗಾರಿಗಳನ್ನು ತೆಗೆದುಕೊಂಡು 1 ಕೋಟಿ 45 ಲಕ್ಷ ರೂ. ಖರ್ಚು ಮಾಡುತ್ತಿದ್ದೇವೆ. ಕೊಣಂದೂರು ಸಂತೆ ಮೈದಾನಕ್ಕೆ ಒಂದು ಕಾಮಗಾರಿ ತೆಗೆದುಕೊಂಡು 5 ಲಕ್ಷ ರೂ. ಖರ್ಚು ಮಾಡುತ್ತಿದ್ದೇವೆ, ತೀರ್ಥಹಳ್ಳಿಯಲ್ಲಿ 7 ಕಾಮಗಾರಿಗಳನ್ನು ತೆಗೆದುಕೊಂಡು 77 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ, ಕೊಳಲು ಉಪ ಮಾರುಕಟ್ಟೆಯಲ್ಲಿ 2 ಕಾಮಗಾರಿಗಳನ್ನು ತೆಗೆದುಕೊಂಡು 13 ಲಕ್ಷ ರೂ. ಖರ್ಚು ಮಾಡುತ್ತಿದ್ದೇವೆ, ಜಾನುವಾರು ಮಾರುಕಟ್ಟೆಗೆ 3 ಕಾಮಗಾರಿಗಳನ್ನು ತೆಗೆದುಕೊಂಡು 72 ಸಾವಿರ ರೂ. ಖರ್ಚು ಮಾಡುತ್ತಿದ್ದೇವೆ, ಆಯನೂರು ಜಾನುವಾರು ಮಾರುಕಟ್ಟೆಗೆ 3 ಕಾಮಗಾರಿಗಳನ್ನು ತೆಗೆದುಕೊಂಡು 30 ಲಕ್ಷ ರೂ. ಖರ್ಚು ಮಾಡುತ್ತಿದ್ದೇವೆ, ಆಯನೂರು ಸಂತೆ ಮೈದಾನಕ್ಕೆ 5 ಕಾಮಗಾರಿಗಳನ್ನು ತೆಗೆದುಕೊಂಡು 6 ಲಕ್ಷ ರೂ. ಹೀಗೆ ಒಟ್ಟು 2 ಕೋಟಿ 78 ಲಕ್ಷ ರೂ.ಗಳನ್ನು ನಾವು ಈಗ ಆ ಒಂದು ಅಭಿವೃದ್ಧಿಗೆ ಖರ್ಚು ಮಾಡುತ್ತಿದ್ದೇವೆ. ಮತ್ತೆ ನಮ್ಮ ಸದಸ್ಯರಾದ ಪುಟ್ಟಣ್ಣಯ್ಯನವರು ಮಾತನಾಡುತ್ತಾ, ರೈತರಿಗೆ ಸೌಕರ್ಯ ಬಹಳ ಕಡಿಮೆಯಾಗಿದೆ ಅದನ್ನು ಹೆಚ್ಚಿಗೆ ಮಾಡಿಕೊಡಬೇಕು, ರೈತರಿಗೆ ಬಹಳ ಮೋಸವಾಗುತ್ತಿದೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ಆದಷ್ಟು ಸರಿಪಡಿಸುತ್ತೇವೆಂದು ' ಈ ಸಂದರ್ಭದಲ್ಲಿ ಹೇಳುತ್ತೇನೆ. ನಮ್ಮ ಡಿ.ಆರ್.ಪಾಟೀಲ್‌ರವರು ಹೇಳಿದಂತೆ ತೂಕ ಮಾಡುವುದಕ್ಕಾಗಿ 24 ಎಲೆಕ್ಟ್ರಾನಿಕ್ ಮೆಷಿನ್‌ಗಳನ್ನು ಈಗಾಗಲೇ ಅಳವಡಿಸಿದ್ದೇವೆ, ಉಳಿದದ್ದನ್ನು ಈ ವರ್ಷದಲ್ಲಿ

ಅಳವಡಿಸುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಾ, ನಮ್ಮ ಇಲಾಖೆಯ ಬೇಡಿಕೆಗೆ ತಾವೆಲ್ಲರು ಮಂಜೂರಾತಿ ಕೊಡಬೇಕೆಂದು ಕೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಕಾರ್ಕಳ): ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಗೇರು ಬೀಜ ಸಂಸ್ಕರಣ ಕಾರ್ಖಾನೆಗಳಿದ್ದಾವೆ. ಅದೇನಾಗಿದೆ ಎಂದರೆ, ಆರ್ಥಿಕ ಇಲಾಖೆಯಿಂದಲೂ ಕೆಲವು ತೆರಿಗೆಯನ್ನು ವಿಧಿಸುತ್ತೀರಿ, ಇತ್ತೀಚೆಗೆ ಅಗ್ರಿಕಲ್ಚರ್ ಮಾರ್ಕೆಟಿಂಗ್ ಸೆಸ್‌ಗೂ ಕೂಡ ಅಲ್ಲಿ ನೋಟೀಸ್ ಕೊಡುತ್ತಿದ್ದೀರೆಂದು ನಮಗೆ ಅಲ್ಲೆಲ್ಲಾ ಒಂದು ರೀತಿಯ ಗೊಂದಲ ಬಂದಿದೆ. ಪ್ರಾಯೋಗಿಕವಾಗಿ ನಮ್ಮಲ್ಲಿ ಗೇರುಬೀಜ ಬೆಳೆ ಕಡಿಮೆಯಾಗುತ್ತಿದೆ. ಹಿಂದೆ ಗೋವಾದಲ್ಲಿ ಇರಲೇ ಇಲ್ಲ, ಈಗ ತೆರಿಗೆ ಇಲ್ಲವೆಂದು ಎಲ್ಲಾ ಗೇರುಬೀಜ ಕಾರ್ಖಾನೆಗಳನ್ನು ಗೋವಾದಲ್ಲಿ ಮಾಡುತ್ತಿದ್ದಾರೆ; ಕೇರಳದಲ್ಲೂ ಕೂಡ ಮಾಡುತ್ತಿದ್ದಾರೆ. ಗೇರುಬೀಜ ಬೆಳೆ ಅದರಲ್ಲೂ ಕೂಡ ಬಹಳ ಫ್ಲೆಕ್ಚುಯೇಟಿಂಗ್. ಈ ಸಾರಿ ಸುಮಾರು ಶೇಕಡ 75ರಷ್ಟು ಕಾರ್ಖಾನೆಗಳು ಮುಚ್ಚಿಹೋಗುತ್ತವೆ. ನೇರವಾಗಿ 50 ಸಾವಿರ ಜನರು ಉದ್ಯೋಗ, 1 ಲಕ್ಷ ಮಂದಿಗೆ ಪರೋಕ್ಷ ಉದ್ಯೋಗ ಸಿಗುತ್ತದೆ ಅದರಲ್ಲೂ ದಕ್ಷಿಣಕನ್ನಡದಲ್ಲಿ ಪರಂಪರಾಗತವಾಗಿರುವ ಹೆಂಚಿನ ಕೈಗಾರಿಕೆ ಹೋಗುತ್ತಿದೆ. ಈಗ ತಾವು ವಕ್ರದೃಷ್ಟಿಯನ್ನು ಗೇರುಬೀಜ ಕಾರ್ಖಾನೆಗಳ ಮೇಲೆ ಹಾಕಿದರೆ, ಪರಂಪರಾಗತವಾಗಿ ಬಂದಿರುವ ಈ ಕಾರ್ಖಾನೆಗಳು ಹೊರಟುಹೋಗುತ್ತವೆ. ಆದುದರಿಂದ ಇದು ಬಹಳ ಗಂಭೀರವಾದ ಪ್ರಶ್ನೆ, ನೀವು ಈ ರೀತಿ ಬಲಾತ್ಕಾರವಾಗಿ ತೆರಿಗೆ ವಸೂಲ್ಮಾಡಲು ಹೊರಟರೆ ಶೇಕಡ 25ರಷ್ಟು ನಡೆಸುವ ಕಾರ್ಖಾನೆಗಳೂ ಕೂಡ ಹೊರಟುಹೋಗುತ್ತವೆ. ದಯಮಾಡಿ ಈ ಬಗ್ಗೆ ಗಂಭೀರವಾಗಿ ಆಲೋಚನೆ ಮಾಡಿ, ತಾವೇನು ಆದೇಶ, ಸೂಚನೆ ಕೊಟ್ಟಿದ್ದೀರಿ ತಕ್ಷಣ ಅದನ್ನು ಅಮಾನತ್ತಿನಲ್ಲಿಟ್ಟು, ಇದಕ್ಕೆ ಸಂಬಂಧಿಸಿದ ದಕ್ಷಿಣಕನ್ನಡ ಜಿಲ್ಲೆಯ ಶಾಸಕರು ಸೇರಿದಂತೆ ಎಲ್ಲರೂ ತಮ್ಮ ಜೊತೆ ಚರ್ಚೆ ಮಾಡುತ್ತೇವೆ, ಆಮೇಲೆ ಪುನಃ ಇದನ್ನು ವಿಚಾರ ಮಾಡಿ ಪುನರ್ವಿಮರ್ಶೆ ಮಾಡಬೇಕೆಂದು ಹೇಳುತ್ತೇನೆ. ಏಕೆಂದರೆ ಇದು ಬಹಳ ಗಂಭೀರವಾದ ಸಮಸ್ಯೆ ಇಲ್ಲದಿದ್ದರೆ ಕಾರ್ಖಾನೆಗಳು ಮುಚ್ಚಿಹೋಗುತ್ತವೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು ಒಂದೂವರೆ ಲಕ್ಷ ಮಂದಿಗೆ ಉದ್ಯೋಗ ಹೊರಟುಹೋಗುತ್ತದೆ.

2.00 ಪಿ.ಎಂ.

ಶ್ರೀ ಹೆಚ್.ನಾಗಪ್ಪ: ಇದರ ಬಗ್ಗೆ ಹೈಕೋರ್ಟಿಗೂ ಹೋಗಿ, ಹೈಕೋರ್ಟಿನಲ್ಲಿ ನಮ್ಮ ಪರವಾಗಿ ತೀರ್ಮಾನವಾಗಿದೆ. ನಾವು ಕುಳಿತು ಮಾತನಾಡಿ ಏನಾದರೊಂದು ತೀರ್ಮಾನವನ್ನು ಮಾಡೋಣ.

ಶ್ರೀ ಎಂ.ವೀರಪ್ಪ ಮೊಯ್ಲಿ: ಅಲ್ಲಿಯವರೆಗೆ ದಯಮಾಡಿ ವಸೂಲಿ ಮಾಡುವುದನ್ನು

ನಿಲ್ಲಿಸಿ. ಇಲ್ಲದಿದ್ದರೆ ಒಂದೂವರೆ ಲಕ್ಷ ಜನ ಬೀದಿಗೆ ಬೀಳುತ್ತಾರೆ.

ಶ್ರೀ ಹೆಚ್.ನಾಗಪ್ಪ: ಇದರ ಬಗ್ಗೆ ಈಗಾಗಲೇ ಬಹಳ ಚರ್ಚೆಗಳಾಗಿವೆ.

ಶ್ರೀ ಎಂ.ವೀರಪ್ಪಮೊಯ್ಲಿ: ನಾವು ಚರ್ಚೆಗೆ ಬರುತ್ತೇವೆ. ಅಲ್ಲಿಯವರೆಗೆ ಅಮಾನತ್ತಿನಲ್ಲಿಡಿ.

ಶ್ರೀ ಅರಗ ಜ್ಞಾನೇಂದ್ರ: ಎಪಿಎಂಸಿ ಸೆಸ್ ಎರಡು ಸಲವಾಗಿದೆ. ಕ್ಯಾಷ್ಯೂ ಕರ್ನಲ್ಸ್‌ಗೆ ಬೇರೆ, ಕ್ಯಾಷ್ಯೂ ನಟ್ಸ್‌ಗೆ ಬೇರೆ ಆಗಿದೆ. ಇದರಿಂದ ತುಂಬಾ ತೊಂದರೆಯಾಗಿದೆ. ದಯಮಾಡಿ ಅದನ್ನು ಸದ್ಯಕ್ಕೆ ಸ್ಟೇ ಮಾಡಿ.

ಶ್ರೀ ಹೆಚ್.ನಾಗಪ್ಪ: ಇದರ ಬಗ್ಗೆ ಬಹಳ ಸಾರಿ ನಾವೂ ನೀವು ಎಲ್ಲರೂ ಮಾತನಾಡಿದ್ದೇವೆ. ಈಗ ಕೋರ್ಟಿನಲ್ಲಿ ತೀರ್ಮಾನವಾಗಿರುವುದರಿಂದ ಅದರ ಬಗ್ಗೆ ನಾವು ಏನು ತೀರ್ಮಾನ ತೆಗೆದುಕೊಂಡರೂ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಇನ್ನೊಂದು ಸಲ ಕುಳಿತು ಮಾತನಾಡೋಣ.

ಉಪಾಧ್ಯಕ್ಷರು: ನಾಗಪ್ಪನವರೇ, ನೀವು ಎಲ್ಲರೂ ಹೇಳುವ ವಿಷಯಗಳನ್ನು ಬರೆದುಕೊಳ್ಳಿ. ನಂತರ ಒಟ್ಟಿಗೆ ಉತ್ತರ ಕೊಡಿ. ಈಗ ಈಶ್ವರಪ್ಪನವರು.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಉಪಾಧ್ಯಕ್ಷರೇ, ಇಡೀ ರಾಜ್ಯದಲ್ಲಿ ಎಪಿಎಂಸಿ ರಸ್ತೆಗಳಿಗೆ ಜೆಲ್ಲಿ ಹಾಕಿದ್ದಾರೆ, ಡಾಂಬರೀಕರಣಕ್ಕೆ ಹಣವನ್ನು ನಿಗದಿ ಮಾಡಿದ್ದಾರೆ. ಆದರೆ ಕಳೆದ ವರ್ಷ ನನ್ನ ಕ್ಷೇತ್ರದಲ್ಲಿ ಕೆಲಸ ಪ್ರಾರಂಭ ಮಾಡಿಲ್ಲ. ಇಡೀ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ಇದೇ ಸ್ಥಿತಿ ಇದೆ. ಕಳೆದ ವರ್ಷ ರಾಜ್ಯದಲ್ಲಿ ತುರ್ತಾಗಿ ಏನೇನು ಕೆಲಸಗಳನ್ನು ತೆಗೆದುಕೊಳ್ಳುತ್ತೇವೆ ಎಂದು ಘೋಷಣೆ ಮಾಡಿದ್ದರು, ಆ ಕೆಲಸಗಳನ್ನು ಯಾವಾಗ ತೆಗೆದುಕೊಳ್ಳುತ್ತೀರಿ, ಯಾವಾಗ ಮುಗಿಸುತ್ತೀರಿ ಮತ್ತು ಈ ಯೋಜನೆಯನ್ನು ಮುಂದುವರಿಸುತ್ತೀರೋ ಇಲ್ಲವೋ ಎನ್ನುವುದನ್ನು ಕೇಳಲು ಇಷ್ಟಪಡುತ್ತೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ನಾನು ಅವರಲ್ಲಿ ಒಂದು ಕ್ಲಾರಿಫಿಕೇಷನ್ ಕೇಳುತ್ತೇನೆ. ಕಳೆದ ಸಲದ ಅಧಿವೇಶನದಲ್ಲಿ ಎಪಿಎಂಸಿಯು ನೇರವಾಗಿ ರೈತರಿಗೆ ಚೆಕ್ ಕೊಡಬೇಕು ಎನ್ನುವ ಬಗ್ಗೆ ಬಿಲ್ ಬಂದಿತ್ತು. ಆ ಬಿಲ್ ಇನ್ನೂ ಪೆಂಡಿಂಗ್‌ನಲ್ಲಿದೆ. ಅದನ್ನು ಈ ಅಧಿವೇಶನದಲ್ಲಿ ತರುತ್ತೀರಾ, ಪಾಸ್ ಮಾಡುತ್ತೀರೋ, ಇಲ್ಲವೋ ಎನ್ನುವುದನ್ನು ಹೇಳಬೇಕು. ಎರಡನೆಯದಾಗಿ, ನಾಮಿನೇಷನ್ ಬಗ್ಗೆ ಹೇಳುವುದಾದರೆ, ತಾವು ಮೊದಲು ಇಷ್ಯೂ ಮಾಡಿದ್ದ ಎಪಿಎಂಸಿ ಆರ್ಡಿನೆನ್ಸ್ ಮೇಲೆ ಕೋರ್ಟಿಗೆ ಹೋಗಿ ಅದು ಸ್ಟೇ ಆಯಿತು. ಪುನಃ ಫುಲ್ ಬೆಂಚ್‌ಗೆ ಹೋದ ಮೇಲೆ ಅದು ಅಪ್‌ಹೆಲ್ಡ್ ಆಯಿತು. ಅಂದರೆ ಈ ಸದನಕ್ಕೆ ಕಾನೂನು ಮಾಡತಕ್ಕಂಥ ಅಧಿಕಾರ

ಇದೆ ಎನ್ನುವುದು ಅಪ್‌ಹೆಲ್ಡ್ ಆಯಿತು. ಆದರೆ ನೀವು ಯಾವ ಮೋಟೀವ್‌ನಿಂದ ನಾಮಿನೇಷನ್ ಮಾಡುತ್ತಿದ್ದೀರಿ? ಅದರ ಬಗ್ಗೆ ನೀವು ಏನನ್ನೂ ಅದರಲ್ಲಿ ಹೇಳಲಿಲ್ಲ. ತಾವು ಈ ಬಗ್ಗೆ ಕಾನೂನನ್ನು ತಂದು ಇಲ್ಲಿ ಪಾಸ್ ಮಾಡಿಕೊಳ್ಳಬಹುದಾಗಿತ್ತು. ಕಳೆದ ಸಲ ಹಣಕಾಸಿನ ಸಚಿವರು ಮಂಡಿಸಿದಂಥ ಬಜೆಟ್ ಮಂಡನೆ ಅಧಿವೇಶನದಲ್ಲಿ ಸುಮಾರು 5-6 ದಿವಸ ಇದರ ಮೇಲೆ ಚರ್ಚೆ ಮಾಡಿದ್ದೇವೆ. ಆಗಲೂ ತಾವು ಇದನ್ನು ತಂದು ಪಾಸ್ ಮಾಡಿಕೊಳ್ಳಲಿಲ್ಲ. ತುರ್ತು ಇದೆ ಎಂದು ಈಗಲಾದರೂ ತರಬಹುದಾಗಿತ್ತು. ಆದರೆ ಈಗಲೂ ಕೂಡ ತಾವು ತರಲಿಲ್ಲ. ಈ ಮಧ್ಯೆ ತಾವು ಇನ್ನೊಂದು ಆರ್ಡಿನೆನ್ಸ್ ಅನ್ನು ರೀಪ್ಲೇಸ್ ಮಾಡಿ ನಾಮಿನೇಷನ್ ಮಾಡತಕ್ಕಂಥಾದ್ದನ್ನು ಮಾಡಿದ್ದೀರಿ. ಇದು ಸರಿಯೇ? ಏಕೆಂದರೆ ಇಲ್ಲಿ ಚರ್ಚೆ ಮಾಡಿ ಕಾನೂನನ್ನು ಪಾಸ್ ಮಾಡಿಕೊಳ್ಳಲು ತಮಗೆ ಅವಕಾಶವಿತ್ತು. ಆ ರೀತಿ ಕಾನೂನನ್ನು ಪಾಸ್ ಮಾಡಿಕೊಂಡು ನಾಮಿನೇಷನ್ ಮಾಡಿದ್ದರೆ ನಾವೂ ಒಪ್ಪಿಕೊಳ್ಳುತ್ತಿದ್ದೆವು. ಆದರೆ ಎಪಿಎಂಸಿ ಅಧ್ಯಕ್ಷರನ್ನಾಗಿ ನಾಮಿನೇಟೆಡ್ ಸದಸ್ಯರನ್ನೇ ಮಾಡಬೇಕೆಂದು ಮಾಡಿದ್ದೀರಿ. ಇದು ಪ್ರಜಾಪ್ರಭುತ್ವಕ್ಕೆ ತಾವು ಬಗೆದಂಥ ದ್ರೋಹವಲ್ಲವೇ? ಇದನ್ನು ನೀವು ಹೇಳಬೇಕು. ಏಕೆಂದರೆ, ಇಲ್ಲಿ ಚರ್ಚೆ ಮಾಡಿ ಕಾನೂನನ್ನು ಪಾಸ್ ಮಾಡಿಕೊಂಡು ಮಾಡಿದ್ದರೆ, ಮೆಜಾರಿಟಿ ಒಪ್ಪಿಕೊಂಡಿದ್ದಾರೆ ಅದಕ್ಕಾಗಿ ಮಾಡಿದ್ದಾರೆ ಎಂದು ನಾವು ತಿಳಿದುಕೊಳ್ಳಬಹುದಾಗಿತ್ತು. ಆದರೆ ದುರುದ್ದೇಶದಿಂದ, ಆ ಬಿಲ್ ಲ್ಯಾಪ್ಸ್ ಆದ ಮೇಲೂ ಕೂಡ ಪುನಃ ರೀಇಂಟ್ರೊಡ್ಯೂಸ್ ಮಾಡಿ, ಕಳೆದ ಅಧಿವೇಶನ ಮತ್ತು ಈ ಅಧಿವೇಶನದ ಮಧ್ಯದಲ್ಲಿ ನಾಮಿನೇಷನ್ ಮಾಡತಕ್ಕಂಥಾದ್ದನ್ನು ಮಾಡಿದ್ದು ಎಷ್ಟರ ಮಟ್ಟಿಗೆ ಉಚಿತ. ದಯವಿಟ್ಟು ಆ ನಾಮಿನೇಟೆಡ್ ಸದಸ್ಯರಿಗೆ ಓಟಿನ ಅಧಿಕಾರ ಕೊಡಬೇಡಿ. ಎಪಿಎಂಸಿಯನ್ನು ರಕ್ಷಣೆ ಮಾಡುವುದಕ್ಕೋಸ್ಕರ, ಸಲಹೆ ಕೊಡುವುದಕ್ಕೋಸ್ಕರ ಎಕ್ಸ್‌ಪರ್ಟ್ ಆಗಿರುವವರನ್ನು ಸದಸ್ಯರನ್ನಾಗಿ ಮಾಡಿಕೊಂಡು ಮಾರುಕಟ್ಟೆಯನ್ನು ಸುಧಾರಣೆ ಮಾಡಿಕೊಳ್ಳುತ್ತೇವೆ ಎಂದರೆ ಅದನ್ನು ಮಾಡಿಕೊಳ್ಳಿ. ಆದರೆ ಕೊನೆಯ ಪಕ್ಷ ಅವರು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಭಾಗಿಗಳಾಗದೇ ಇರುವ ರೀತಿಯಲ್ಲಿ ನೋಡಿಕೊಳ್ಳುತ್ತೀರಾ ಎನ್ನುವ ಮಾತನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಬಸವರಾಜ ಪಾಟೀಲ್ ಯತ್ನಾಳ್ (ಬಿಜಾಪುರ): ಮಾನ್ಯ ಉಪಾಧ್ಯಕ್ಷರೇ, ಈಗಾಗಲೇ ಮಾನ್ಯ ಸಚಿವರು ಉತ್ತರದಲ್ಲಿ ಹಮಾಲರಿಗೆ ಮನೆಗಳ ಸೌಕರ್ಯವನ್ನು ಒದಗಿಸುವಂಥ ಮಾತನ್ನು ಹೇಳಿದ್ದಾರೆ. ಬಹಶಃ ಬಿಜಾಪುರದ ಎಪಿಎಂಸಿಯಲ್ಲಿ ಅದು ಇದುವರೆಗೂ ಯಾವುದೇ ರೀತಿಯಿಂದ ಜಾರಿಗೆ ಬಂದಿಲ್ಲ. ಅದರ ಬಗ್ಗೆ ಉತ್ತರ ಹೇಳಬೇಕು. ಅದರ ಜೊತೆಗೆ ನಾವು ಇನ್ನೊಂದು ಮನವಿಯನ್ನು ಮಾಡಿದ್ದೆವು, ತಳ ಮಾಡುವವರು ಮತ್ತು ಗುಂಪು ಹಾಕುವವರು ಎನ್ನುವ ಒಂದು ಕಾರ್ಮಿಕ ವರ್ಗವಿದ್ದು, ಅವರನ್ನೂ ಸಹ ಇದರಲ್ಲಿ ಅಳವಡಿಸಬೇಕು. ಅದರ ಜೊತೆಗೆ ದಲ್ಲಾಳಿಗಳ ಅಂಗಡಿಯಲ್ಲಿ ಇರುವಂಥ ಗುಮಾಸ್ತರನ್ನೂ ಸಹ, ಅವರೂ ಕಾರ್ಮಿಕ ವ್ಯವಸ್ಥೆಯಲ್ಲಿ

ಬರುವುದರಿಂದ ಅವರನ್ನೂ ಸಹ ಈ ಸೌಲಭ್ಯಕ್ಕೆ ಒಳಪಡಿಸಿದರೆ ಅವರಿಗೂ ಅನುಕೂಲವಾಗುತ್ತದೆ ಎನ್ನುವ ವಿನಂತಿಯನ್ನು ಮಾಡುತ್ತೇನೆ. ಬಸವನ ಬಾಗೇವಾಡಿಯಲ್ಲಿರುವಂಥ ಕೃಷಿ ಉತ್ಪನ್ನ ಮಾರುಕಟ್ಟೆಗೆ ಅಧಿಕೃತವಾಗಿ ಮಹಾತ್ಮ ಬಸವೇಶ್ವರರ ಹೆಸರನ್ನು ಇಡಬೇಕು ಎನ್ನುವ ಮನವಿಯನ್ನು ಈ ಸಂದರ್ಭದಲ್ಲಿ ಮಾಡಿಕೊಳ್ಳುತ್ತಿದ್ದೇನೆ.

ಉಪಾಧ್ಯಕ್ಷರು: ಎಲ್ಲರೂ ಒಂದೆರಡು ಪ್ರಶ್ನೆಗಳನ್ನು ಮಾತ್ರ ಕೇಳಬೇಕು. 7-8 ಪ್ರಶ್ನೆಗಳನ್ನು ಕೇಳಿದರೆ ಉತ್ತರ ಕೊಡುವುದು ಯಾವಾಗ? ಮಹತ್ವದ ಒಂದೆರಡು ಪ್ರಶ್ನೆಗಳನ್ನು ಕೇಳಿ. ಈಗ ಡಿ.ಆರ್.ಪಾಟೀಲರು.

ಶ್ರೀ ಡಿ.ಆರ್.ಪಾಟೀಲ್ (ಗದಗ): ಮಾನ್ಯ ಉಪಾಧ್ಯಕ್ಷರೇ, ಹೌಸಿಂಗ ಸ್ಕೀಂನಲ್ಲಿ ಹಮಾಲರಿಗೆ ಮನೆ ಕಟ್ಟಿಸಿಕೊಡುವಂಥ ಯೋಜನೆ ಇದೆ. ಹಮಾಲರು ಎಂದರೆ ಕಾಳುಕಡ್ಡಿ ತುಂಬಿ ಇಡುವವರು ಮಾತ್ರವಷ್ಟೇ; ಚಕ್ಕಡಿಯವರು ಹಮಾಲರಲ್ಲ ಎನ್ನುವ ಒಂದು ಅಭಿಪ್ರಾಯವಿದೆ. ಚಕ್ಕಡಿಯವರೂ ಸಹಾ ಹಮಾಲರು. ನಮ್ಮ ಕಡೆ ಅವರನ್ನು ಚಕ್ಕಡಿ ಹಮಾಲರು ಎಂದು ಹೇಳುತ್ತಾರೆ. ಮಾರಾಟವಾದ ಮೇಲೆ ಅದನ್ನು ಡೆಲಿವರಿ ಮಾಡುವವರು ಚಕ್ಕಡಿ ಹಮಾಲರು. ಅವರು ಅದನ್ನು ಹೊತ್ತು, ತಮ್ಮದೇ ಆದಂಥ ಚಕ್ಕಡಿಯಲ್ಲಿ ಇಟ್ಟು ಆಮೇಲೆ ತೆಗೆದುಕೊಂಡು ಹೋಗುತ್ತಾರೆ. ಹೌಸಿಂಗ್ ಸ್ಕೀಂನಲ್ಲಿ ಅವರನ್ನೂ ಅಳವಡಿಸಬೇಕು. ಚಕ್ಕಡಿಯವರು ಹಮಾಲರಲ್ಲ ಎನ್ನುವ ಕಲ್ಪನೆ ಬಂದಿರುವುದರಿಂದ ಅವರನ್ನು ಈ ಯೋಜನೆಯಿಂದ ಹೊರಗಿಟ್ಟಿದ್ದಾರೆ. ಆದ್ದರಿಂದ ದಯವಿಟ್ಟು ಅವರನ್ನೂ ಅದರಲ್ಲಿ ಸೇರಿಸುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಸನ್ಮಾನ್ಯ ಉಪಾಧ್ಯಕ್ಷರೇ, ಇಲಾಖೆಯ ವತಿಯಿಂದ ರೈತ ಸಂಜೀವಿನಿ ಎನ್ನುವಂಥ ಒಂದು ಕಾರ್ಯಕ್ರಮ ಜಾರಿಯಲ್ಲಿದೆ. ಆದರೆ ಆ ಹಣವನ್ನು ಪಡೆಯುವುದಕ್ಕೆ ಆಗದ ರೀತಿಯಲ್ಲಿ ಕಠಿಣವಾಗಿರತಕ್ಕಂಥ ಅನೇಕ ದಾಖಲಾತಿಗಳನ್ನು ಕೇಳುತ್ತಿದ್ದಾರೆ. ಹೊಲದಲ್ಲಿ ಬೆಳೆ ಹೊತ್ತುಕೊಂಡು ಬರುವಾಗ ಹಾವು ಕಚ್ಚಿದ್ದು, ಆತ ಆಸ್ಪತ್ರೆಯಲ್ಲಿ ಸತ್ತಿದ್ದಾನೆ. ಹಾವು ಕಚ್ಚಿದ್ದರಿಂದ ಸತ್ತಿದ್ದಾನೆ ಎಂದು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ಆದರೆ ನಿಮ್ಮವರು ಅದಕ್ಕೆ ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಆದ್ದರಿಂದ ಆ ನಿಯಮಗಳನ್ನು ಸಡಿಲಗೊಳಿಸಬೇಕು ಮತ್ತು ರೈತರಿಗೆ ಪ್ರಾಮಾಣಿಕವಾಗಿ ತಲುಪುವ ಹಾಗೆ ಮಾಡಬೇಕು. ಎರಡನೆಯದಾಗಿ, ಈ ರೈತ ಸಂಜೀವಿನಿ ವ್ಯಾಪ್ತಿಯೊಳಗಡೆ ಕೃಷಿ ಕಾರ್ಮಿಕರನ್ನೂ ತರಬೇಕು. ಇಲ್ಲದಿದ್ದರೆ ಅವರಿಗೆ ಅನ್ಯಾಯವಾಗುತ್ತದೆ. ಇನ್ನು 15 ಲಕ್ಷ ರೂಪಾಯಿಗಳನ್ನು ಎಪಿಎಂಸಿ ರಸ್ತೆಗಳಿಗೆ ಮಂಜೂರು ಮಾಡುವಂಥ ತಮ್ಮ ಕಾರ್ಯಕ್ರಮದಲ್ಲಿ ಇದುವರೆಗೂ ನನ್ನ ಕ್ಷೇತ್ರಕ್ಕೆ ನಿಮ್ಮ ಇಲಾಖೆಯಿಂದ ಅಪ್ರೂವಲ್ ಸಿಗಲಿಲ್ಲ. 15 ಲಕ್ಷ ರೂಪಾಯಿಯ ರಸ್ತೆಯನ್ನು ಇನ್ನೂ ಪ್ರಾರಂಭ ಮಾಡಿಲ್ಲ. ನಮ್ಮದು ಮಲೆನಾಡು ಪ್ರದೇಶವಾಗಿರುವುದರಿಂದ ಅಲ್ಲಿ

ಮಳೆಗಾಲ ಪ್ರಾರಂಭವಾಗುವ ಮೊದಲೇ ಈ ಕಾರ್ಯಕ್ರಮವನ್ನು ತೆಗೆದುಕೊಳ್ಳಲು ವ್ಯವಸ್ಥೆ ಮಾಡಬೇಕು. ಏಕೆಂದರೆ ಮೇ ತಿಂಗಳ ಅಂತ್ಯದ ಹೊತ್ತಿಗೆ ಅಲ್ಲಿ ಟಾರ್ ಹಾಕಲು ಆಗುವುದಿಲ್ಲ. ಇದು 1997-98ನೇ ಇಸವಿಯದು. ಇದನ್ನು ಇಲಾಖೆಯವರು ತೆಗೆದುಕೊಂಡು ಕೆಲಸವನ್ನು ಪೂರೈಸಲು ತಾವು ಇಲ್ಲಿಂದ ಅನುಮತಿಯನ್ನು ಕಳುಹಿಸಿಕೊಡಬೇಕು.

ಶ್ರೀ ಸಿ.ಆರ್.ಸಗೀರ್ ಅಹಮದ್ (ಚಿಕ್ಕಮಗಳೂರು): ಮಾನ್ಯ ಉಪಾಧ್ಯಕ್ಷರೇ, ಸರ್ಕಾರದ ಆದೇಶದ ಪ್ರಕಾರ ಎಪಿಎಂಸಿಯಿಂದ ರಸ್ತೆಗಳನ್ನು ಅಭಿವೃದ್ಧಿ ಪಡಿಸುವ ಬಗ್ಗೆ ನಾನು ಪ್ರಶ್ನೆಗಳನ್ನು ವರ್ಗಾಯಿಸಿದ್ದೇನೆ. ಜೆಲ್ಲಿ ಹಾಕುವಂಥ ಕೆಲಸ ಪೂರ್ಣವಾಗಿದೆ. ಅದೇ ರಸ್ತೆಗಳಿಗೆ ಡಾಂಬರೀಕರಣ ಮಾಡುವಂತೆ ನಾವು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದನ್ನು ಮಾಡಲು ಏಕೆ ಸಾಧ್ಯವಾಗುತ್ತಿಲ್ಲ ಎನ್ನುವ ಬಗ್ಗೆ ಉತ್ತರ ನೀಡಬೇಕೆಂದು ಕೇಳುತ್ತೇನೆ. ಇನ್ನು, ರೈತ ಸಂಜೀವಿನಿ ಕಾರ್ಯಕ್ರಮದಡಿ ಬಹಳ ನಿಬಂಧನೆಗಳಿವೆ. 'ರೈತ' ಎನ್ನುವ ಪದದ ಬಗ್ಗೆ ವ್ಯಾಖ್ಯಾನ (ಡೆಫನಿಷನ್) ಏನು ಎನ್ನುವ ಬಗ್ಗೆ ಸರ್ಕಾರ ಹೇಳಬೇಕು. ಏಕೆಂದರೆ, ವಿದ್ಯುತ್ ತಂತಿ ತಾಗಿ ಇಬ್ಬರು ಹುಡುಗರು ಸತ್ತಿದ್ದಾರೆ. ಆದರೆ ಸರ್ಕಾರ, ಇವರು ಕಬ್ಬು ಕದಿಯಲು ಹೋಗಿದ್ದರು, ಆದ್ದರಿಂದ ಪರಿಹಾರ ಕೊಡಲು ಬರುವುದಿಲ್ಲ ಎಂದು ಹೇಳುತ್ತಾರೆ. ಹಾಗಾದರೆ ರೈತರು ಎಂದರೆ ಯಾರು ಎನ್ನುವ ಬಗ್ಗೆ ಡೆಫನಿಷನ್ ಅನ್ನು ಹೇಳಬೇಕು. ಇನ್ನು, ಎಪಿಎಂಸಿ ಚುನಾವಣೆಯಾಗಿಲ್ಲ. ಯಾವಾಗ ಆ ಚುನಾವಣೆಯನ್ನು ನಡೆಸಿ ಕೊಡುತ್ತೀರಿ ಎಂಬುದನ್ನು ಕೇಳುತ್ತೇನೆ.

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಉಪಾಧ್ಯಕ್ಷರೇ, ಸನ್ಮಾನ್ಯ ಅರಗ ಜ್ಞಾನೇಂದ್ರ ಅವರು ಹೇಳಿರುವಂತೆ, ಮೂಲತಃ ರೈತ ಸಂಜೀವಿನಿ ಯೋಜನೆ ಜಾರಿಗೆ ಬಂದ ನಂತರ ತಿದ್ದುಪಡಿಯನ್ನು ಮಾಡಿದ್ದಾರೆ. ಆ ತಿದ್ದುಪಡಿಯನ್ನು ಮಾಡಿದ ನಂತರ, ಅದರ ಲಾಭ ಯಾವ ರೈತರಿಗೂ ಸಿಗುತ್ತಿಲ್ಲ. ಮೂಲತಃ ಶ್ರೀ ದೇವೇಗೌಡರು ಮುಖ್ಯಮಂತ್ರಿಗಳಾಗಿದ್ದಾಗ ಏನು ಆ ಯೋಜನೆ ಜಾರಿಗೆ ತಂದಿದ್ದರು, ಆ ನಿಯಮಾನ್ನೇ ಇಡಿ. ಆ ತಿದ್ದುಪಡಿಯನ್ನು ವಾಪಸ್ಸು ತೆಗೆದುಕೊಳ್ಳಿ.

+ ಶ್ರೀ ಎಂ.ಬಸಪ್ಪ (ಜಗಳೂರು): 25 ಲಕ್ಷ ರೂಪಾಯಿ ಖರ್ಚು ಮಾಡಿ ಎಲ್ಲಾ ಬಿಲ್ಡಿಂಗನ್ನೂ ಹಾಳು ಬಿಟ್ಟಿರುವುದರಿಂದ ಹಾಳಾಗಿದೆ. 25 ಲಕ್ಷ ಖರ್ಚು ಮಾಡಿದರೂ ಕೂಡ ಇವತ್ತಿನವರೆಗೂ ಒಬ್ಬ ರೈತ ಅಲ್ಲಿ ತನ್ನ ಧಾನ್ಯವನ್ನು ಮಾರಿಕೊಳ್ಳುವ ವ್ಯವಸ್ಥೆ ಇಲ್ಲ. ನನ್ನ ಮನವಿ ಮೇರಗೆ ಮೊನ್ನೆ ರಿಪೇರಿ ಮಾಡಿದ್ದಾರೆ. ಎಲೆಕ್ಟ್ರಿಸಿಟಿ, ವಾಟರ್ ಸಪ್ಲೈ ಎಲ್ಲಾ ಸ್ಟ್ರಕ್ಚರ್ಸ್ ಇದೆ. ಆದರೂ ಕೂಡ ವ್ಯವಹಾರ ನಡೆಯುತ್ತಿಲ್ಲ. ನಮ್ಮ ತಾಲ್ಲೂಕಿನಲ್ಲಿ ಕಡಲೆಕಾಯಿ, ಮೆಕ್ಕೆಜೋಳ, ಹತ್ತಿ ಹೇರಳವಾಗಿ ಬೆಳೆಯುತ್ತಾರೆ. ನಮ್ಮವರೆಲ್ಲಾ ಇವತ್ತಿನ ದಿವಸ ದಾವಣಗೆರೆಗೆ ಅಥವಾ ದುರ್ಗಕ್ಕೆ ತೆಗೆದುಕೊಂಡು ಹೋಗಬೇಕಾಗಿದೆ. ಎಷ್ಟೇ

ಮನವಿ ಮಾಡಿದರೂ ಇವತ್ತಿನವರೆಗೂ ವ್ಯವಹಾರ ಆಗಿಲ್ಲ. ಎರಡನೆಯದಾಗಿ, ಎಪಿಎಂಸಿ ರೋಡ್ ಅನ್ನು ಜಿಲ್ಲಾ ಪಂಚಾಯತ್‌ನಿಂದ ಏನು ವರ್ಗಾವಣೆಯಾಗಿದೆ ಆ ರೋಡುಗಳನ್ನು ಇವತ್ತಿನವರೆಗೂ ಮುಟ್ಟಿಲ್ಲ. ಈ ರೋಡುಗಳು ವರ್ಗಾವಣೆಯಾಗಿರುವುದರಿಂದ ಜಿಲ್ಲಾ ಪಂಚಾಯತ್‌ನವರು ನಾವು ಮೇನ್‌ಟೆನೆನ್ಸ್ ಮಾಡುವುದಕ್ಕಾಗುವುದಿಲ್ಲ, ನಮಗೆ ಫಂಡ್ ಇಲ್ಲವೆಂದು ಹೇಳುತ್ತಿದ್ದಾರೆ. ಸ್ಲ್ಯಾಬ್ ಮುರಿದರೂ, ಕಲ್‌ವರ್ಟ್ ರೀ-ಪ್ಲೇಸ್ ಮಾಡುವ ಸನ್ನಿವೇಶದಲ್ಲಿ ಅವರೂ ಇಲ್ಲ, ಇವರೂ ಇಲ್ಲ. ಓಡಾಡುತ್ತಿದ್ದ ಬಸ್ಸುಗಳೂ ನಿಂತುಹೋಗಿವೆ. ಯಾವಾಗ ಮಾಡಿಕೊಡುತ್ತೀರಿ?

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ): ಅಂಕೋಲ ತಾಲೂಕಿನಲ್ಲಿ ಎಪಿಎಂಸಿ ಜಾಗ ಖರೀದಿಸಿದ್ದಾರೆ. ಅವರ ಹತ್ತಿರ ಹಣವಿಲ್ಲ. ಆಸ್ತಿ ಮಾಡಿಕೊಳ್ಳುವ ದೃಷ್ಟಿಯಿಂದ ಎಪಿಎಂಸಿಗೆ ಹಣವನ್ನು ತುಂಬುವ ವ್ಯವಸ್ಥೆ ಮಾಡಬೇಕು. ಬೇರೆ ರೀತಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳಲಿ ಅಥವಾ ರಾಜ್ಯಸರ್ಕಾರದಿಂದ ಕೊಡಲಿ. 1996-97 ಮತ್ತು 1997-98ಕ್ಕೆ ನನ್ನ ಕ್ಷೇತ್ರದಲ್ಲಿ ಎಪಿಎಂಸಿಯಿಂದ ಮಂಜೂರಾದ ರಸ್ತೆಗೆ 25 ಲಕ್ಷ ರೂಪಾಯಿ ಇದುವರೆಗೆ ಬಂದಿಲ್ಲ. 1996-97ಕ್ಕೆ 10 ಲಕ್ಷ ರೂಪಾಯಿ 1997-98ಕ್ಕೆ 15 ಲಕ್ಷ ರೂಪಾಯಿ ಇಡಲಾಗಿತ್ತು. ಅದನ್ನು ತಕ್ಷಣ ಎಪಿಎಂಸಿಯಿಂದ ಬಿಡುಗಡೆ ಮಾಡಿಸಿ; ಆ ಕೆಲಸ ಆಗುವ ರೀತಿಯಲ್ಲಿ ಹೇಳಬೇಕು.

ಶ್ರೀ ಎನ್.ಯೋಗೀಶ್ ಭಟ್ (ಮಂಗಳೂರು): ನಮ್ಮ ಕ್ಷೇತ್ರದಲ್ಲಿ ಎಪಿಎಂಸಿ ರಸ್ತೆ ಕೆಲಸವನ್ನು ಸರಿಯಾಗಿ ಮಾಡಿಸಬೇಕು ಮತ್ತು ಅದಕ್ಕೆ ಹಣವನ್ನು ಬಿಡುಗಡೆ ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): 1997-98ನೇ ಸಾಲಿಗೆ ಈ ರಸ್ತೆ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಿಲ್ಲ. ಏಕೆ ಮಾಡಿಲ್ಲ? ಸಂತೆ ಅಭಿವೃದ್ಧಿ ಮಾಡುತ್ತೇವೆಂದು ಹೇಳಿ ಎಲ್ಲಾ ವಿವರಗಳನ್ನೂ ತೆಗೆದುಕೊಂಡಿದ್ದರು. ಆ ಕೆಲಸವೇಕೆ ಪ್ರಾರಂಭವಾಗಿಲ್ಲ?

ಶ್ರೀ ಜಯರಾಮಶೆಟ್ಟಿ (ಉಳ್ಳಾಲ್): ಎಪಿಎಂಸಿ ಸಮಿತಿ ಮಾಡುತ್ತಿದ್ದೀರಿ. ನಿಮ್ಮ ಪಕ್ಷದವರನ್ನೇ ಸದಸ್ಯರನ್ನಾಗಿ ಮಾಡಿದ್ದೀರಿ? ಆಯಾಯ ಕ್ಷೇತ್ರದ ಶಾಸಕರನ್ನೂ ಕಡ್ಡಾಯವಾಗಿ ಸದಸ್ಯರನ್ನಾಗಿ ನೇಮಿಸಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ಎಪಿಎಂಸಿಯಿಂದ ಅಂದರೆ ರೈತರ ಹಿತರಕ್ಷಣೆಗೆ ಬರಬೇಕು. ಎಪಿಎಂಸಿಯಿಂದ ಅಗ್ರಿಕಲ್ಚರಲ್ ರೀಸರ್ಚ್ ಸ್ಟೇಷನ್ ಮೇನ್‌ಟೆನೆನ್ಸ್‌ಗೆ ತಮ್ಮ ಹತ್ತಿರವಿರುವ ಹಣದಲ್ಲೇನಾದರೂ ಕೊಡಲಾಗುತ್ತದೆಯೇ? ಎರಡನೆಯದಾಗಿ, ತಿಪಟೂರು ಕ್ಷೇತ್ರದಲ್ಲಿ ಎಪಿಎಂಸಿಯಲ್ಲಿ ಸರಕಿನ ಮೇಲೆ

ಹರಾಜಾಗುತ್ತಿಲ್ಲ, ಅಂಗಡಿ ಆಧಾರದ ಮೇಲೆ ಆಗುತ್ತಿದೆ. ನಾನು ಅನೇಕ ಸಾರಿ ಹೇಳಿದ್ದೇನೆ. ರೈತರ ಮಾಲಿನ ಮೇಲೆ ನೀವು ಹರಾಜು ಮಾಡಬೇಕು. ಇಂಥಿಂಥ ಅಂಗಡಿಯವರಿಗೆ ಇಷ್ಟು ಧಾರಣೆ ಎಂದು ಹರಾಜು ಹಾಕಿ, ಅದನ್ನಾದರೂ ತಪ್ಪಿಸುತ್ತೀರೆಂದು ಕೇಳುತ್ತೇನೆ. ಎಪಿಎಂಸಿಯಲ್ಲಿ ಹಣವಿದೆ. ಅಲ್ಲೊಂದು ಲಿಂಕ್ ರೋಡ್ ಮಾಡಲು ಅವಕಾಶ ಮಾಡಿಕೊಡುತ್ತೀರಾ, ಹೇಗೆ? ಪಿಡಬ್ಲ್ಯುಡಿ ಮಿನಿಸ್ಟರ್ ಒಪ್ಪಿದ್ದಾರೆ. 30 ಲಕ್ಷ ರೂಪಾಯಿ ಕೊಟ್ಟು, ಲಿಂಕ್ ರೋಡ್ ಮಾಡಿದರೆ ಒಳ್ಳೆಯದು.

ಶ್ರೀ ಎಚ್.ಡಿ.ಬಸವರಾಜು (ವಿರಾಜಪೇಟೆ): ನಾಮಕರಣ ಮಾಡಿರುವ ವ್ಯವಸ್ಥೆಯಲ್ಲಿ ಸಾಮಾಜಿಕ ನ್ಯಾಯ ಸಿಕ್ಕಿಲ್ಲ. ಯಾವ ಉದ್ದೇಶವಿಟ್ಟುಕೊಂಡು ತಾವು ನಾಮಕರಣ ಮಾಡಿದ್ದೀರೋ ನನಗರ್ಥವಾಗುತ್ತಿಲ್ಲ. ಆ ಉದ್ದೇಶ ಸಫಲವಾಗಬೇಕಾದರೆ ಸಾಮಾಜಿಕ ನ್ಯಾಯ ಕೊಡಬೇಕೆಂದಿದ್ದರೆ 3 ಜನ ಸದಸ್ಯರಲ್ಲಿ ಒಬ್ಬರನ್ನು ಪರಿಶಿಷ್ಟ ಜಾತಿ, ಪಂಗಡಕ್ಕೆ ಕಡ್ಡಾಯ ಮಾಡುವ ವ್ಯವಸ್ಥೆಯನ್ನು ತಾವು ಮಾಡಬೇಕು. ಎರಡನೆಯದಾಗಿ, ನಮ್ಮ ಕ್ಷೇತ್ರದಲ್ಲಿ ನಡೆಯುವ ಸಭೆಗಳಿಗೆ ನಾವು ಹೋಗುವಂತಹ ಅವಕಾಶ ಸಿಗಬೇಕಾದರೆ ನಾವೂ ಅದರಲ್ಲಿ ಸದಸ್ಯರಾಗಬೇಕು. ಶಾಸಕರನ್ನೂ ಎಪಿಎಂಸಿ ಸದಸ್ಯರನ್ನಾಗಿ ಮಾಡಬೇಕೆಂದು ಕೇಳುತ್ತೇನೆ.

ಶ್ರೀ ಎಚ್.ನಾಗಪ್ಪ (ಮಾರುಕಟ್ಟೆ ಸಚಿವರು): ಅನೇಕ ಸದಸ್ಯರು ರಸ್ತೆಗೆ ಹಣವನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ನಾನು ಮಾತನಾಡುವಾಗ ಆಗಲೇ ಹೇಳಿದ್ದೇನೆ. ಎಲ್ಲಾ ಕಡೆ ಬಿಡುಗಡೆ ಮಾಡಲಾಗಿದೆ, 7-8 ಎಪಿಎಂಸಿಗಳಲ್ಲಿ ಹಣವಿಲ್ಲದ್ದರಿಂದ, ಬೆಂಗಳೂರು ಎಪಿಎಂಸಿಯಿಂದ ಅದಕ್ಕೆ ಹಣ ಕೊಡಿಸುವುದಕ್ಕೆ ಏರ್ಪಾಡು ಮಾಡಿ ಇನ್ನೊಂದು ವಾರದಲ್ಲಿ ಎಲ್ಲರಿಗೂ ಹಣ ತಲುಪಿಸುವ ವ್ಯವಸ್ಥೆ ಮಾಡುತ್ತೇನೆ. ಎರಡನೇ ಇನ್‌ಸ್ಟಾಲ್‌ಮೆಂಟ್ ಮಾತ್ರ ಕೊಡುತ್ತಿದ್ದೇವೆ. ಮೂರನೇ ಇನ್‌ಸ್ಟಾಲ್‌ಮೆಂಟ್ ಕೊಡಬೇಕೇ, ಬೇಡವೇ ಎಂಬ ಬಗ್ಗೆ ಇನ್ನೂ ತೀರ್ಮಾನವನ್ನು ತೆಗೆದುಕೊಂಡಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ): ಯೋಜನೆ ಮುಂದುವರಿಯುತ್ತದೆಯೇ?

ಶ್ರೀ ಎಚ್.ನಾಗಪ್ಪ: ಅದರ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಂಡಿಲ್ಲ. ರೈತ ಸಂಜೀವಿನಿ ಇದನ್ನು ಸ್ವಲ್ಪ ಮಾರ್ಪಾಡು ಮಾಡಿದ್ದು ನಿಜ. ಹಾವು ಕಚ್ಚಿ ಸತ್ತದ್ದಕ್ಕೆ ಸರ್ಟಿಫಿಕೇಟ್ ಬೇಕು. ಇಲ್ಲಾಂದರೆ, ಯಾವುದರಿಂದ ಸತ್ತ ಎಂಬುದು ಗೊತ್ತಾಗುವುದಿಲ್ಲ. ಆ ಸರ್ಟಿಫಿಕೇಟ್ ತಂದರೆ ಹಣ ಕೊಡುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಸಿ.ಆರ್.ಸಗೀರ್ ಅಹ್ಮದ್: ಹಾವು ಕಚ್ಚಿದ ವ್ಯಕ್ತಿಗೂ ಪಿ.ಎಂ. ರಿಪೋರ್ಟ್ ಕೇಳುತ್ತಾರೆ. ಅದಕ್ಕೇನಾದರೂ ಮಾಡಿ.

ಶ್ರೀ ಎಚ್.ನಾಗಪ್ಪ: ಹಾವು ಕಚ್ಚಿದ ವ್ಯಕ್ತಿಗೆ ಪಿಎಂ ರಿಪೋರ್ಟ್ ಬೇಕಿಲ್ಲ. ಬೇರೆ

ತರಹದಲ್ಲಿ ಸತ್ತವರಿಗೆ ಬೇಕಾಗುತ್ತದೆ. ಹಾವು ಕಚ್ಚಿದ ವ್ಯಕ್ತಿಗಳ ಬಗ್ಗೆ ಕನ್‌ಸಿಡರ್ ಮಾಡಿ ಹಣ ಕೊಡುತ್ತೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಆ ಸತ್ತ ವ್ಯಕ್ತಿಯ ಹೆಸರು ವೋಟರ್ ಲಿಸ್ಟ್‌ನಲ್ಲಿರಬೇಕು ಮತ್ತು ಅವನು ಎಪಿಎಂಸಿಯಲ್ಲಿ ವ್ಯವಹಾರ ಮಾಡಿರಬೇಕೆಂದು ತಿದ್ದುಪಡಿ ತಂದಿದ್ದಾರೆ. ಅದನ್ನು ತಿದ್ದುಪಡಿ ಮಾಡುತ್ತೀರಾ? ಎಷ್ಟು ಜನ ಎಪಿಎಂಸಿಯಲ್ಲಿ ವ್ಯವಹಾರ ಮಾಡಿರುತ್ತಾರೆ ಹೇಳಿ.

ಶ್ರೀ ಎಚ್.ನಾಗಪ್ಪ: ಕೃಷಿ ಕಾರ್ಮಿಕರಿಗೆ ಮಾತ್ರ ಎಂದು ಹಿಂದೆ ಇತ್ತು. ಇದನ್ನು ಮಾಡಿಫೈ ಮಾಡಿ ರೈತರಿಗೆ ಮಾತ್ರ ಎಂದು ಮಾಡಿದ್ದೇವೆ. ಇವರು ಕೊಟ್ಟಿರುವ ಸಲಹೆಯನ್ನು ಪರಿಗಣಿಸುತ್ತೇನೆ.

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ಕೃಷಿ ಕಾರ್ಮಿಕರು ಎಪಿಎಂಸಿಯಲ್ಲಿ ವ್ಯವಹಾರ ಮಾಡುವುದು ಕಡಿಮೆ ಎಂದು ಹೇಳುತ್ತಿದ್ದಾರೆ. ಅವರಿಗೆ ಅನ್ಯಾಯವಾಗದ ರೀತಿಯಲ್ಲಿ ಅವರು ಏರ್ಪಾಡು ಮಾಡುತ್ತಾರೆ.

ಶ್ರೀ ಕೆ.ಎಸ್.ಈಶ್ವರಪ್ಪ: ನೀವೂ ಸ್ವಲ್ಪ ಹಣ ಕೊಟ್ಟರೆ ಏರ್ಪಾಡು ಮಾಡುತ್ತಾರೆ.

ಉಪಾಧ್ಯಕ್ಷರು: ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಉಪಾಧ್ಯಕ್ಷರು: ಯಾವುದೇ ಒಂದು ಯೋಜನೆ ಮಾಡಬೇಕಾದರೆ ಹಣದ ಅವಶ್ಯಕತೆ ಇದೆ.

(ಗೊಂದಲ)

ಶ್ರೀ ಹೆಚ್.ನಾಗಪ್ಪ: ಹಮಾಲರುಗಳಿಗೆ ಮತ್ತು ಚಕ್ಕಡಿಗಳಿಗೆ ಹಾಗೂ ಅಲ್ಲಿ ಕೆಲಸ ಮಾಡುತ್ತಿರುವ ಗುಮಾಸ್ತರುಗಳಿಗೂ ಕೂಡ ಹಮಾಲರುಗಳಿಗೆ ಕೊಡುವಂತಹ ಅನುಕೂಲಗಳನ್ನು ಕೊಡಬೇಕು ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಇದರ ಬಗ್ಗೆ ಪರಿಶೀಲಿಸುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ನಾಮಿನೇಷನ್ ಬಗ್ಗೆ ಹೇಳುತ್ತಿದ್ದಾರೆ. ಜಗಳೂರು ಎಪಿಎಂಸಿ ಬಗ್ಗೆ ಹೇಳುವುದಾದರೆ, ಅವರು ಬಂದು ಮಾತನಾಡಿಕೊಂಡು ಹೋಗಿದ್ದಾರೆ. ಆದಷ್ಟು ಬೇಗ ಅಲ್ಲಿ ಕಾರ್ಯ ಪ್ರಾರಂಭಿಸುವುದಕ್ಕೆ ಏರ್ಪಾಡು ಮಾಡುತ್ತೇನೆ ಎನ್ನುವ ಭರವಸೆಯನ್ನು ಕೊಡುತ್ತೇನೆ. ಇನ್ನು ನಾಮಿನೇಷನ್ ಬಗ್ಗೆ ಹೇಳುವುದಾದರೆ, ಈ ತಿಂಗಳು 30ನೇ ತಾರೀಖಿನೊಳಗೆ ಚುನಾವಣೆ ಮಾಡಬೇಕಾಗಿರುವುದರಿಂದ, ಆ ಸಮಯದಲ್ಲಿ ಅಸೆಂಬ್ಲಿ ಇಲ್ಲದಿರುವುದರಿಂದ ನಾವು ಸುಗ್ರೀವಾಜ್ಞೆಯ ಮೂಲಕ ತರಬೇಕಾಗಿ ಬಂತು. ಈಗ ಆ ಬಿಲ್ಲನ್ನು ಮಂಡಿಸಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು): ನಿಮ್ಮ ಅಭ್ಯರ್ಥಿ ಗೆದ್ದು ಬರಲಿ ಎಂದು ನಾಮಿನೇಷನ್ ಮಾಡಿಕೊಳ್ಳುತ್ತಿದ್ದೇವೆಂದು ಹೇಳಿ.

(ಗೊಂದಲ)

ಶ್ರೀ ಸಿದ್ಧರಾಮಯ್ಯ (ಉಪಮುಖ್ಯಮಂತ್ರಿಗಳು): ದುರುಪಯೋಗ ಏನೂ ಮಾಡಿಲ್ಲ. ಎಲ್ಲಾ ನಾಮಿನೇಷನ್ ಸದುದ್ದೇಶದಿಂದಲೇ ಮಾಡಿರುವುದು. ಇದರಲ್ಲಿ ಯಾವ ರಾಜಕೀಯ ಇಲ್ಲ, ಎಂಥದ್ದೂ ಇಲ್ಲ.

ಉಪಾಧ್ಯಕ್ಷರು: ನಾನು ಈಗ ಬೇಡಿಕೆಗಳನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

> ''31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆಗಳ ಸಂಖ್ಯೆ 28, 29, 52 ಮತ್ತು 53ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರಕಾರಕ್ಕೆ (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು''

ಪ್ರಸ್ತಾಪ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 28 - ವೈದ್ಯಕೀಯ ಶಿಕ್ಷಣ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ವೈದ್ಯಕೀಯ ಶಿಕ್ಷಣ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 184,61,47,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ 29 - ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳಿಗೆ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ

623,22,99.000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 61,20,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 52 - ಸಹಕಾರ

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಸಹಕಾರ''ಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 48,63,43,000 ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 15,21,00,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.''

ಅಭಿಯಾಚನೆ ಕ್ರಮಾಂಕ 53 - ಕ್ರಮಪಡಿಸಿದ ಮಾರುಕಟ್ಟೆಗಳು

''ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-1999ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ''ಕ್ರಮಪಡಿಸಿದ ಮಾರುಕಟ್ಟೆಗಳಿಗಾಗಿ'' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವಖಾತೆಯಲ್ಲಿ 26,37,04,000 ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ) ಮಂಜೂರು ಮಾಡುವುದು.''

ಉಪಾಧ್ಯಕ್ಷರು: ಈಗ ಸದನವನ್ನು ಮುಂದೂಡುತ್ತಿದ್ದೇನೆ. ಸದನವು ಪುನಃ 3-30ಕ್ಕೆ ಸೇರುತ್ತದೆ.

(ಸದನವು 2-24ಕ್ಕೆ ಮುಂದೂಡಲ್ಪಟ್ಟು ಪುನಃ 3-30ಕ್ಕೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3-50 ಗಂಟೆಗೆ ಸಮಾವೇಶಗೊಂಡಿತು)

(ಶ್ರೀ ರಮೇಶ್‌ಕುಮಾರ್‌ರವರು ಅಧ್ಯಕ್ಷಪೀಠವನ್ನು ಅಲಂಕರಿಸಿದ್ದರು)

4) ವಿತ್ತೀಯ ಕಾರ್ಯಕಲಾಪಗಳು:

2) 1998-99ನೇ ಸಾಲಿನ ಬೇಡಿಕೆಗಳ ಮಂಡನೆ.

ಅಧ್ಯಕ್ಷರು: ಮಾನ್ಯ ಪ್ರಕಾಶ್‌ರವರೇ, ತಾವು ಬೇಡಿಕೆಗಳನ್ನು ಮೂವ್ ಮಾಡಿ, ನಂತರ ಶೂನ್ಯ ವೇಳೆಯ ನೋಟೀಸ್‌ಗಳನ್ನು ತೆಗೆದುಕೊಳ್ಳುತ್ತೇನೆ.